ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೩ನೇ ಜೂನ್ ೧೯೭೭/ಜ್ಯೇಷ್ಠ ೧೩, ೧೮೯೯ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯–೦೦ಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ವಿತ್ತೀಯ ಕಾರ್ಯಕಲಾಪಗಳು.

೧೯೭೭–೭೮ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂತ್ರಿಗಳಿಂದ ಉತ್ತರ.

(ಸಣ್ಣ ಕೈಗಾರಿಕಾ ರೇಷ್ಮೆ ವ್ಯವಸಾಯ ಮತ್ತು ಉದ್ಯಮಗಳು ಸಹಕಾರಿ ಉದ್ಯಮಗಳ ಹೊರತು.)

ವಿದ್ಯುಚ್ಛಕ್ತಿ ಸಣ್ಣ ಕೈಗಾರಿಕೆಗಳು.

ಅಧ್ಯಕ್ಷರು.—ಈಗ ಭಾರೀ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಖಾತೆ ಮಂತ್ರಿಗಳಿಂದ ಉತ್ತರ.

ಶ್ರೀ ಎಂ. ಎಂ. ಖರ್ಗೆ.—ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಮಂತ್ರಿಗಳ ಹಿಂದೆ ಅವರ ಜಿಲ್ಲೆಯ ಶಾಸಕರೆಲ್ಲಾ ಬಂದು ಕುಳಿತಿದ್ದಾರೆ. ಅವರಿಗೆ ಪೂರ್ಣ ಬೆಂಬಲವನ್ನು ಸೂಚಿಸುವುದಕ್ಕೆ ಅವರು ಬಂದು ಕುಳಿತಿದ್ದಾರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದು ಖರ್ಗೆಯವರ ದೃಷ್ಟಿದೋಷ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೈಗಾರಿಕಾ ಮಂತ್ರಿಗಳು ಹೋದ ವರ್ಷ ಯಾವ ಸ್ಟೈಲ್‌ನಲ್ಲಿ ಉತ್ತರ ಕೊಟ್ಟರೋ ಆ ಸ್ಟೈಲ್ ಬಿಟ್ಟು ಹೊಸ ಸ್ಟೈಲ್‌ನಲ್ಲಿ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಖಾತೆ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯುತ್ ಇಲಾಖೆಯ ಬೇಡಿಕೆಗಳ ಮೇಲೆ ಸನ್ಮಾನ್ಯ ಸದಸ್ಯರು ವಿಶ್ಲೇಷಣೆ ಮಾಡಿದ್ದಾರೆ ಹಾಗೂ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೂ ಕೆಲವು ಆಧಾರರಹಿತವಾದ ಟೀಕೆಗಳನ್ನೂ ಮಾಡಿದ್ದಾರೆ. ಟೀಕೆ ಮಾಡುವುದು ಮತ್ತು ಟೀಕೆಗಳಿಗೆ ಸರಿಯಾದ ರೀತಿಯಲ್ಲಿ ಉತ್ತರಿಸುವುದು ನಮ್ಮ ಕರ್ತವ್ಯ. ಮೊದಲು ನಾನು ವಿದ್ಯುತ್ ಇಲಾಖೆಯ ಬಗ್ಗೆ, ವಿದ್ಯುತ್ ಯೋಜನೆಗಳ ಬಗ್ಗೆ ಮತ್ತು ಯೋಜನೆಗಳಲ್ಲಿ ನಾವು ವಿದ್ಯುತ್ ಉತ್ಪಾದನೆಗೆ ಕೊಟ್ಟಿರತಕ್ಕ ಆದ್ಯತೆ ಬಗ್ಗೆ ರಾಜ್ಯದಲ್ಲಿ ಇವತ್ತು ಇರತಕ್ಕ ಪರಿಸ್ಥಿತಿ, ಈ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ನಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮ, ಮತ್ತು ಅದಕ್ಕೆ ಒದಗಿಸಬೇಕಾಗಿರತಕ್ಕ ಹಣವನ್ನು ನಾವು ಒದಗಿಸುವುದಕ್ಕೆ ಯೋಜನೆಯಲ್ಲಿ ಮತ್ತು ಯೋಜನೇತ್ತರ ಪ್ರಯತ್ನವನ್ನು ಮಾಡುವುದರ ಬಗ್ಗೆ ನಾನು ಮೊದಲು ಹೇಳುತ್ತೇನೆ.

ಮಾನ್ಯ ವೀರಪ್ಪಮೊಯಿಲಿಯವರು ಸಾಮಾನ್ಯವಾಗಿ ಬಹಳ ಕರಾರುವಾಕ್ಕಾದ ಅಂಕಿಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವವರು ವಿದ್ಯುತ್ ಯೋಜನೆಗಳ ಬಗ್ಗೆ ನಿನ್ನೆ ಅವರು

ಡಾರಿತಪ್ಪಿದರು. ಕೆಲವೊಂದು ವಿಷಯದಲ್ಲಿ ಅವರಿಗೆ ಸಾಕಷ್ಟು ತಿಳುವಳಿಕೆ ಇದೆಯೆಂದು ವಿಶ್ವಾಸ ನನಗೆ ಇತ್ತು. ಆದರೆ ಯಲಹಂಕ ಯೋಜನೆ ಎಂದರೆ ಏನು ? ಗ್ಯಾಸ್ ಟರ್ಬೈನ್, ಡಿ. ಜಿ. ಸೆಟ್ ಎಂದರೆ ಏನು ? ಕೇಂದ್ರ ಸರ್ಕಾರ ಎಲ್ಲಾ ರೀತಿಯಿಂದ ಸಹಾಯಕ್ಕೆ ಬಂದರೆ ರಾಜ್ಯ ಸರ್ಕಾರ ತನ್ನದೇ ಆದ ಕಾರಣದಿಂದ ವಿಳಂಬ ಮಾಡಿ ಅವರು ಕೊಟ್ಟಂಥ ಸಹಾಯ ಹಸ್ತವನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದರು. ಇದು ಸರಿಯಲ್ಲ. ೧೯೮೬-೮೭, ೧೯೮೭-೮೮ರಲ್ಲಿ ನಾವು ಕೈಯಲ್ಲಿ ತೆಗೆದುಕೊಂಡಂಥ ಯೋಜನೆಗಳು ಏನಿವೆ ಅವುಗಳಲ್ಲಿ ಯಾವುದೇ ಒಂದು ಯೋಜನೆಯನ್ನೂ ಕಾರ್ಯಗತ ಮಾಡುವಲ್ಲಿ ತಡ ಆಗಿಲ್ಲ. ಕೆಲಸ ನಿಂತಿಲ್ಲ. ನಮಗೆ ಹಣಕಾಸಿನ ಕೊರತೆ ಆಗಿರಬಹುದು ಎಂದು ಹೇಳಿದರು. ನೀವು ಯೋಜನೆಯ ಗಾತ್ರವನ್ನು ಕಡಿಮೆ ಮಾಡುತ್ತಿದ್ದೀರಿ, ನಿಮಗೆ ಎಷ್ಟು ಉತ್ಪಾದನೆಯನ್ನು ಮಾಡಬೇಕೋ ಅದಕ್ಕೆ ಬೇಕಾದಷ್ಟು ಹಣವನ್ನು ಇಟ್ಟುಕೊಂಡಿಲ್ಲವೆಂದು ಅವರು ಹೇಳಿದರು. ಆದರೆ ನಾನು ಅವರಿಗೆ ತಿಳಿಯಪಡಿಸುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ನಾವು ಕೈಗೆತ್ತಿಕೊಂಡಿರತಕ್ಕಂಥ ಆನ್ ಗೋಯಿಂಗ್ ಪ್ರಾಜೆಕ್ಟ್ ಏನಿವೆ, ಅಂದರೆ ವರಾಹಿ, ರಾಯಚೂರು ಎರಡನೇ ಸ್ಟೇಜ್ ಯುನಿಟ್ ಸಂ. ೩ ಮತ್ತು ೪, ಮತ್ತು ಶರಾವತಿ ಟೇಲ್‌ರೇಸ್ ಪ್ರಾಜೆಕ್ಟ್ ಇತ್ಯಾದಿಗಳ ಬಗ್ಗೆ ಯಾವ ಹಂತದಲ್ಲಿ ಕೆಲಸ ಇದೆ ಎಂಬುದನ್ನು ಹೇಳುತ್ತದೆ. ಕಾಳಿ ನದಿ ೨ನೇ ಸ್ಟೇಜ್‌ನಲ್ಲಿ ಕದ್ರಾ, ಕೊಡಸಳ್ಳಿ ದಾಂಡೇಲಿ-ದಾಂಡೇಲಿಯಲ್ಲಿ ಮಾತ್ರ ಕೆಲವು ಕಾರಣಗಳಿಂದ ಪ್ರಾಜೆಕ್ಟನ್ನು ಕೈಗೆತ್ತಿಕೊಂಡಿಲ್ಲ. ಆದರೆ ಕೊಡಸಳ್ಳಿ, ಕದ್ರಾ ಕೆಲಸ ಶುರು ಮಾಡಿದ್ದೇವೆ. ಸಿವಿಲ್ ವರ್ಕ್ಸ್ ಶುರು ಮಾಡಿದ್ದೇವೆ. ಟೆಂಡರ್ ಕರೆದಿದ್ದೇವೆ ಮತ್ತು ಕೆಲಸ ಪ್ರಾರಂಭವಾಗಿದೆ. ಶರಾವತಿ ಟೈಲ್‌ರೇಸ್ ಪ್ರಾಜೆಕ್ಟ್‌ಗೆ ಈಗಾಗಲೇ ಕೆಲಸ ಶುರು ಮಾಡಿದ್ದೇವೆ. ಇದಕ್ಕೆ ಹಣ ಎಲ್ಲಿಂದ ಬಂತು ? ನಾನು ಅತ್ಯಂತ ಸಂತೋಷದಿಂದ ಈ ಸದನಕ್ಕೆ ತಿಳಿಸಬಯಸುತ್ತೇನೆ ಮೊದಲಬಾರಿಗೆ ಈ ರಾಜ್ಯದಲ್ಲಿ ಇಂತಹ ಒಂದು ಸಾಧನೆಯನ್ನು ಮಾಡಿದ್ದೇವೆ. ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳು ಶರಾವತಿ ಟೈಲ್‌ರೇಸ್ ಪ್ರಾಜೆಕ್ಟ್‌ಗೆ, ೨೬೦ ಕೋಟಿ, ಕಾಳಿ ಸೆಕೆಂಡ್ ಸ್ಟೇಜ್‌ಗೆ, ೭೩೫ ಕೋಟಿ, ಎಂದರೆ ೫೩೫ ಮಿಲಿಯನ್ ಡಾಲರ್ಸ್ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಮತ್ತು ರಾಯಚೂರು ೪ನೇ ಯೂನಿಟ್‌ಗೆ ಜಪಾನೀಸ್ ಏಡ್-ಓವರ್‌ಸೀಸ್ ಎಕನಾಮಿಕ್ ಕೋಆಪರೇಶನ್ ಫಂಡ್‌ನಿಂದ ಬರುತ್ತದೆ. ನಾವು ೨೫೦ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಅವರು ಕೊಡುವವರಿದ್ದಾರೆ. ಎಕ್ಸ್‌ಪರ್ಟ್ಸ್ ಟೀಮ್ ಬಂದಿದ್ದರು, ಗವರ್ನ್‌ಮೆಂಟ್. ಆಫ್ ಇಂಡಿಯಾದವರು ಕ್ಲಿಯರ್ ಮಾಡಿದ್ದಾರೆ. We are getting aid from World Bank and Japanese OECF. ಒಂದು ಕೆ. ಇ. ಬಿ. ಯವರ ಮೀಟಿಂಗ್‌ನಲ್ಲಿ ಏನು ಹೇಳಿಬಿಟ್ಟರು, ಅದನ್ನು ಆಧಾರವಾಗಿಟ್ಟುಕೊಂಡು ಏನೂ ಕೆಲಸ ಆಗಿಲ್ಲ Industrsal growth has come to nil. ಜೀರೋ ಆಗಿದೆ ಹಾಗೆ, ಹೀಗೆ ಎಂದು ಮಾತನಾಡಿದರು. ನಮ್ಮ ಸರ್ಕಾರದ ಆದ್ಯತೆಯಲ್ಲಿ ಮೊದಲನೆಯದ್ದು ವಿದ್ಯುಚ್ಛಕ್ತಿ. ಇರಿಗೇಶನ್ ಮತ್ತು ವಿದ್ಯುಚ್ಛಕ್ತಿಯನ್ನು ನಾವು ಕಡೆಗಣಿಸಿಲ್ಲ. ಇರಿಗೇಶನ್ ಸ್ವಲ್ಪ ಹಣಕಾಸಿನ ಕೊರತೆಯಾಗಿದೆ. ನನ್ನ ದೃಷ್ಟಿಯಲ್ಲಿ ಇರಿಗೇಶನ್‌ಗಿಂತ ಪವರ್ ಪ್ರಯಾರಿಟಿ ನಂಬರ್ ಒನ್. ಅದಕ್ಕೇ ಇರಿಗೇಶನ್ ಅನ್ನು ಎರಡನೇಯದ್ದು ಎಂದು ಏಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ವಿದ್ಯುಚ್ಛಕ್ತಿಯ ಪ್ರಯೋಜನದ ವ್ಯಾಪ್ತಿ ಏನಿದೆ ಇದು ಇವತ್ತು ಪ್ರತಿಯೊಂದು ಸಣ್ಣ ಕೈಗಾರಿಕೆ ದೊಡ್ಡ ಕೈಗಾರಿಕೆಗೆ ಇನ್ನು ಹೇಳಬೇಕೆಂದರೆ ವಿದ್ಯುತ್ ಮುಟ್ಟದೇ ಇರತಕ್ಕಂಥ, ಅದರ ಉಪಯೋಗ ಆಗದೇ ಇರತಕ್ಕಂಥ ಸೆಕ್ಟರೇ ಇಲ್ಲ. ಆದ್ದರಿಂದ ಇವತ್ತು ವಿದ್ಯುತ್‌ನ್ನು ಎಷ್ಟು ಉತ್ಪಾದನೆ ಮಾಡುತ್ತೇವೆ ಅದರ ಜೊತೆಗೆ ವಿದ್ಯುತ್ತನ್ನು ಹೇಗೆ ಜನರಿಗೆ ಸಪ್ಲೈ ಮಾಡುತ್ತೇವೆ ಎಂಬುದು ಮುಖ್ಯ. ಸಪ್ಲೈ ಮಾಡತಕ್ಕಂಥ ಸಿಸ್ಟಮ್ ಅನ್ನು ಹೇಗೆ ಹೇಗೆ ಇಂಪ್ರೂವ್ ಮಾಡುತ್ತಾ ಹೋಗುತ್ತೇವೆ ಅದರ ಮೇಲೆ total economic growth and the total economic well being of the society is based.

ಇವತ್ತಿನ ಈ ವಿದ್ಯುತ್ ಸ್ಥಿತಿಗೆ ಯಾರು ಕಾರಣರಿದ್ದಾರೆ ಎಂದರೆ, ೧೦ ವರ್ಷಗಳ ಹಿಂದೆ ೧೫ ವರ್ಷಗಳ ಹಿಂದೆ ಯಾರು ಆಡಳಿತ ನಡೆಸುತ್ತಿದ್ದರು. ಮತ್ತು ಯಾರು ಯೋಜನೆಗಳನ್ನು ಮಾಡಿದ್ದರು ಅವರು ಕಾರಣರು ಎಂದು ನಾನು ಹೇಳಬಹುದು,

ಶ್ರೀ ಬಿ. ಬಸವಲಿಂಗಪ್ಪ.—ತಾವು ಏನು ಮಾಡಿದ್ದೀರಿ ಹೇಳಿ ಸ್ವಾಮಿ. ಇದರಿಂದ ನಿಮಗೆ ಕ್ರೆಡಿಟ್ ಬರುವುದಿಲ್ಲ

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೇ ಹೇಳುತ್ತಾ ಹೋಗುವುದು, ನೀವು ಏನೂ ಮಾಡುವುದು ಬೇಡ.

ಶ್ರೀ ಜೆ. ಹೆಚ್. ಪಟೇಲ್.—ನಾವು ಮಾಡುತ್ತಾ ಇರುವುದನ್ನು ಹೇಳುತ್ತಿದ್ದೇನೆ. ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ತಾವು ಹೇಳಿದಿರಿ. ನಾವು ಅಧಿಕಾರ ಬಿಟ್ಟು ಹೋಗುವಾಗ ಏನು ಸಾಮಾನ್ಯ ಸಿದ್ಧತೆಗಳನ್ನು ಮಾಡಿದ್ದೆವು, ಅದನ್ನೆಲ್ಲಾ ಉಪಯೋಗಿಸಿಕೊಂಡಿದ್ದರಿಂದ ಇಷ್ಟೆಲ್ಲಾ ಬೆಳೆಯಿತು ಎಂದು ಹೇಳಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಐದು ವರ್ಷದ ಅವಧಿ ಕೊಟ್ಟಿದ್ದೇವೆ. ಈ ಐದು ವರ್ಷದ ಅವಧಿಯಲ್ಲಿ ಏನಾಗಿದೆ ಎಂದು ಹೇಳುವುದನ್ನು ಬಿಟ್ಟು ಹಿಂದೆ ಏನಾಗಿದೆ, ಹಿಂದೆ ಏನಾಗಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ನೀವು ಖಾಲಿ ಚೀಲ ಕೈಬಿಟ್ಟು ಹೋಗಿದ್ದಿರಿ, ಅದರಲ್ಲಿ ದುಡ್ಡು ಎಲ್ಲಿತ್ತು? ನೀವು ಬಿಟ್ಟು ಹೋಗಿದ್ದು ಖಾಲಿ ಚೀಲ.

ಶ್ರೀ ಬಿ. ಬಸವಲಿಂಗಪ್ಪ.—ದುಡ್ಡು ತುಂಬಿದ್ದ ಚೀಲ, ಖಾಲಿ ಚೀಲ್ಲ. ಅಲ್ಲ. ನೀವು ಮನಸ್ಸು ಮಾಡಿರಿ.

ಶ್ರೀ ಜೆ. ಹೆಚ್. ಪಟೇಲ್.—I think my friend will take it in the proper sense. I am not making any allegations ಅದಕ್ಕೆ ಈಗ ಹೇಳಿದೆ. ಹೋದವರ್ಷ ಪ್ಲಾನ್ ಅಲೋಕೇಷನ್‌ಗೆ ಕಂಪೇರ್ ಮಾಡಿದರೆ ಈ ವರ್ಷ ಇನ್ನೂ ಕಡಿಮೆಯಾಗಿದೆ ಎಂದು ಅವರು ಹೇಳಿದರು. ಟೋಟಲ್ ಪ್ಲಾನ್ ಔಟ್‌ಲೇ ಕಡಿಮೆಯಾಗುತ್ತಾ ಬಂದಿದೆ. ಎಂದು ಹೇಳಿದರು. ಟೋಟಲ್ ಪ್ಲಾನ್ ಔಟ್‌ಲೇ ಕಡಿಮೆಯಾಗುತ್ತಾ ಬಂದಿರುವುದು ಕರ್ನಾಟಕ ರಾಜ್ಯದ್ದೊಂದೇ ಅಲ್ಲ. ಇಡೀ ರಾಷ್ಟ್ರದಲ್ಲಿರತಕ್ಕ ಎಲ್ಲಾ ರಾಜ್ಯಗಳದ್ದೂ ಕಡಿಮೆಯಾಗುತ್ತಾ ಬಂದಿದೆ, ಎಕ್ಸೆಪ್ಟ್ ಪಂಜಾಬ್ ಅಂಡ್ ಗುಜರಾತ್ ಅವುಗಳನ್ನು ಬಿಟ್ಟರೆ, ಕೆಲವು ಕಡೆ ಸಾವಿರ ಕೋಟಿ ಕಡಿಮೆಯಾಗಿದೆ. ಇನ್ನು ಕೆಲವಡೆ ಐದುನೂರು ಕೋಟಿ ಕಡಿಮೆಯಾಗಿದೆ. ನಮ್ಮ ಪ್ಲಾನ್ ಔಟ್‌ಲೇ ೯೭೦ ಕೋಟಿ. ಟೋಟಲ್ ೪೫೦–೫೦೦ ಕೋಟಿ ಪ್ರಾವಿಜನ್ ಕಟ್ ಆಗಿದೆ. ಇದರಲ್ಲಿ ಎಲೆಕ್ಟ್ರಿಸಿಟಿಗೆ ಎಷ್ಟು ಕಟ್ ಆಯಿತು ನೀರಾವರಿಗೆ ಎಷ್ಟು ಕಟ್ ಆಯಿತು, ಎಜುಕೇಷನ್‌ಗೆ ಎಷ್ಟು ಕಟ್ ಆಯಿತು ಅದರ ವಿವರಣೆಗೆ ನಾನು ಹೋಗುವುದಿಲ್ಲ. ಇಂತಹ ಸಂದರ್ಭದಲ್ಲಿ ಕೆ. ಇ. ಬಿ, ಕೆ. ಪಿ. ಸಿ. ಯವರ ಆಕ್ಟಿವಿಟೀಸ್ ಏನು ಎಂಬುದನ್ನು ನೋಡಬೇಕು. ಹಣದ ಕೊರತೆ ಇದೆ ಎಂದು ಇಟ್ಟುಕೊಳ್ಳೋಣ ಆದರೂ ಅವರು ಏನು ಕೆಲಸ ಮಾಡಿದ್ದಾರೆ ಅದನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಹಣದ ಕೊರತೆ ಇದೆ ಎಂದು ಎಲೆಕ್ಟ್ರಿಸಿಟಿ ಬೋರ್ಡಿನ ಯಾವ ಕಾರ್ಯಕ್ರಮಗಳೂ ನಿಂತಿಲ್ಲ. ಪ್ರತಿ ವರ್ಷ ನಾವು ೫೦೦–೬೦೦ ಗ್ರಾಮಗಳನ್ನು ಎಲೆಕ್ಟ್ರಿಫೈ ಮಾಡುತ್ತಿದ್ದೇವೆ. ಇದುವರೆಗೆ ಒಂದು ೧ ೭೦೦ to ೨,೦೦೦ ಗ್ರಾಮಗಳನ್ನು ನಾವು ಎಲೆಕ್ಟ್ರಿಫಿಕೇಷನ್ ಮಾಡಿದ್ದೇವೆ. ಅವರೇಜ್ ೧.೫೦೦ ಗ್ರಾಮಗಳ ಹಾಗೆ ನಾವು ಕೆಲಸ ಮಾಡುತ್ತಿದ್ದೇವೆ. ಈ ವರ್ಷ ನೆವೆಸ್ಟ್ ಸೆನ್ಸಸ್ ವಿಲೇಜನ್ ಗ್ರಾಮಗಳಿಗೆಲ್ಲಾ ಮಾಡುತ್ತೇವೆ. ೧೯೯೦ರ ಕೊನೆಗೆ ಯಾವುದೇ ಒಂದು ಗ್ರಾಮ ವಿದ್ಯುತ್ ಬಾಕಿ ಇಲ್ಲದೆ ಉಳಿಯುವುದಿಲ್ಲ. ಕೆಲವು ಹ್ಯಾಮ್ಲೆಟ್ಸ್ ಉಳಿಯಬಹುದು. ಅದರ ಬಗ್ಗೆ ನಾನು ಹೇಳುತ್ತೇನೆ. ೧೯೮೭–೮೮ ರಲ್ಲಿ ನಾವು ೪೮ ಸಾವಿರ ಪಂಪ್‌ಸೆಟ್ ಎನರ್ಜೈಸ್ ಮಾಡಿರುತ್ತೇವೆ. ಇದು ರೆಕಾರ್ಡ್, ಈ ರೆಕಾರ್ಡ್ ಪರ್‌ಫಾರಮೆನ್ಸ್ ನೋಡಿರಿ. ಕೆ.ಇ.ಬಿ. ಏನು ಕೆಲಸ ಮಾಡದೆ ಅದನ್ನು ನೋಡುವುದನ್ನು ಬಿಟ್ಟು ಅದರ ಹಿನ್ನೆಲೆಯಲ್ಲಿರತಕ್ಕಂಥ ಅಪ್ರಕೃತ ವಿಷಯಗಳನ್ನು ಚರ್ಚೆ ಮಾಡುವುದು ಸರಿಯಲ್ಲ. ಅದರ ಸಾಲ ಇದೆ ನಿಜ. ಈ ವರ್ಷ ೧೫೦ ಕೋಟಿ ರೂಪಾಯಿ ನಷ್ಟ ಆಗಿದೆ. ಆದರೆ ಈ ನಷ್ಟ ಏತಕ್ಕೆ ಆಗಿದೆ? ಯಾವಾಗ ನಮ್ಮ ಜಲಾಶಯಗಳಲ್ಲಿ ನೀರು ಇರುವುದಿಲ್ಲ ಆ ನಷ್ಟ ಆಗುತ್ತದೆ. ನೀರನ್ನು ಎಷ್ಟು ಹೆಚ್ಚಾಗಿ ನಾವು ವಿದ್ಯುತ್ ಆಗಿ ಕನ್‌ವರ್ಟ್ ಮಾಡುತ್ತೇವೆ, ಅಷ್ಟು ಹೆಚ್ಚು ಉತ್ಪಾದನೆಯಾಗುತ್ತದೆ. ಆದರೆ ಜಲಾಶಯಗಳಲ್ಲಿ ನೀರೇ ಇಲ್ಲ. ಕಳೆದ ನಾಲ್ಕು ವರ್ಷದಿಂದ ೪೫ ಪರ್ಸೆಂಟ್, ೫೦ ಪರ್ಸೆಂಟ್, ೫೧ ಪರ್ಸೆಂಟ್, ಹಾಗೂ ೫೧ ಪರ್ಸೆಂಟ್ ವಾಟರ್ ಸ್ಟೋರೇಜ್ ಆಗಿದೆ. ಇದು ಪ್ರಾಕೃತಿಕ. ಇದಕ್ಕೆ ನಾನು ಯಾರನ್ನೂ ಹೊಣೆ ಎಂದು ಹೇಳುವುದಿಲ್ಲ. ಇದು ಪ್ರಾಕೃತಿಕ ಕಾರಣ. ನೀರೇ ಬಂದಿಲ್ಲ ನೀರು ಬರದೇ ಇದ್ದುದರಿಂದ ಎಲೆಕ್ಟ್ರಿಸಿಟಿ ಉತ್ಪಾದನೆ ಆಗಲಿಲ್ಲ, ಇದರಿಂದ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಅನಿವಾರ್ಯವಾಗಿ ಲಾಸ್

ಆಯಿತು. ಐ. ಪಿ. ಸೆಟ್‌ನ ಸೀಲಿಂಗ್ ಲಿಮಿಟ್‌ನ್ನು ತೆಗದು ಬಿಟ್ಟೆವು. ಸೀಲಿಂಗ್ ಲಿಮಿಟ್ ಎಂದರೆ ಒಂದು ಐ. ಪಿ. ಸೆಟ್‌ಗೆ ಕನೆಕ್ಷನ್ ಕೊಡಬೇಕಾದರೆ ಇಷ್ಟು ಉತ್ಪಾದನೆ ಇರಬೇಕು, ಇಷ್ಟೇ ಖರ್ಚು ಮಾಡಬೇಕು ಎಂಬ ಸೀಲಿಂಗ್ ಇತ್ತು. ನಾವು ಕೆಲಸ ಮಾಡುವ ಪ್ರಾರಂಭದಲ್ಲಿ ಉತ್ಸಾಹದಲ್ಲಿ ಉದ್ದೇಶ ಪೂರ್ವಕವಾಗಿ ಈ ಸೀಲಿಂಗ್ ಲಿಮಿಟ್ ತೆಗೆದು ಬಿಟ್ಟೆವು, ತೆಗೆದುದರಿಂದ ಹೆಚ್ಚು ವಿದ್ಯುತ್ ಖರ್ಚಾಗಿದೆ. ಇದರಿಂದ ಕೆ. ಇ ಬಿ. ಗೆ ನಷ್ಟವಾಗಿದೆ. ಎಂದರೆ ನಾವು ಕೆಲಸ ಮಾಡಿದುದನ್ನು ನೋಡಬೇಕು. ಎಷ್ಟು ಜನರಿಗೆ ಎಲೆಕ್ಟ್ರಿಸಿಟಿ ಒದಗಿಸಿದ್ದೇವೆ ಎಂಬುದನ್ನು ನೋಡಬೇಕು ಈ ವರ್ಷ ಚೆನ್ನಾಗಿ ಮಳೆ ಬಂತು ಎಂದು ಇಟ್ಟುಕೊಳ್ಳೋಣ, ಮುಂದಿನ ಕೆಲವು ವರ್ಷಗಳಲ್ಲಿ ಮಳೆ ಚೆನ್ನಾಗಿ ಬಂದರೆ, ನಮ್ಮ ಲುಕ್ಸಾನನ್ನು ನಾವು ಭರ್ತಿ ಮಾಡಿಕೊಳ್ಳುತ್ತೇವೆ.

ಕೆಲಸ ಮಾಡದಿದ್ದರೆ ನೀವು ಹೇಳಬಹುದು. ನಾವು ಕೆಲಸ ಮಾಡಿದ್ದೇವೆ. ನಷ್ಟವಾಗಿಲ್ಲವೆಂದು ಹೇಳಿ ನಾವು ನಿಮ್ಮ ಹತ್ತಿರ ಶಹಬಾಶ್ ಗಿರಿಪಡೆಯ ಬಹುದು. ಆದರೆ ನಾವು ಕೆಲಸ ಮಾಡಿದ್ದೇವೆ. ಈ ಆರ್ಗನೈಜೇಶನ್‌ನಲ್ಲಿರತಕ್ಕಂಥ ಕೆಲವೊಂದು ಡಿಟೇಲ್ಸ್‌ಗೆ ನಾನು ಹೋಗುವುದಿಲ್ಲ. ಕರ್ನಾಟಕ ಪವರ್ ಕಾರ್ಪೊರೇಷನ್ ಜನರೇಷನ್ ಅಂದರೆ ಉತ್ಪಾದನಾ ಕಾರ್ಪೊರೇಷನ್ ಅನ್ನು ಇಟ್ಟುಕೊಂಡಿದ್ದೇವೆ. ಇದರಲ್ಲಿ ಸ್ವಲ್ಪ ಜನರೇಷನ್‌ನ್ನು ಕೆ. ಇ. ಬಿ.ಯವರು ಸಹ ಮಾಡುತ್ತಾರೆ. ಡಿಸ್ಟ್ರಿಬ್ಯೂಶನ್ ಮತ್ತು ಟ್ರಾನ್ಸ್‌ಮಿಷನ್ ಅನ್ನು ಕೆ.ಇ.ಬಿ.ಯವರು ಮಾಡುತ್ತಾರೆ. ಕೆ. ಇ. ಬಿ.ಪರ್‌ಫಾರ್ಮೆನ್ಸ್‌ನ್ನು ನಾನು ಈಗಾಗಲೇ ಹೇಳಿದ್ದೇನೆ. ವೋಲ್ಟೇಜ್ ಫಾಲ್ ಸಿಸ್ಟ ಇಂಪ್ರೂವ್‌ಮೆಂಟ್ ಇದಕ್ಕಾಗಿ ಮಾನ್ಯ ಅಧ್ಯಕ್ಷರೇ ಕಳೆದ ನಾಲ್ಕು ವರ್ಷಗಳಲ್ಲಿ 20 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ ಸಿಸ್ಟಂ ಇಂಪ್ರೂವ್‌ಮೆಂಟ್ ಬೇಡಿಕೆ ಎಷ್ಟು ಹೆಚ್ಚಾಗುತ್ತಿದೆ ಎಂದರೆ ಪ್ರತಿ ವರ್ಷ ೧೦ ಪರ್ಸೆಂಟ್ ಜನರೇಷನ್ ಏನಿದೆ ಅದು ಈಗ ಸುಮಾರು ೨೩೦೦ ಮೆಗಾವಾಟ್ಸ್ ಇದೆ. ಆದರೆ ನಮಗೆ ಪ್ರತಿ ವರ್ಷ ೨೦೦ ಮೆಗಾವಾಟ್ಸ್‌ನಷ್ಟು ಡಿಮ್ಯಾಂಡ್ ಹೆಚ್ಚಾಗುತ್ತಿದೆ. If we don't generate additional generation by another 200 MW a year we will be in eternal scarcity. ಪ್ರತಿ ವರ್ಷ ೨೦೦ ಮೆಗಾವಾಟ್ಸ್ ಇನ್‌ಕ್ರೀಜ್ ಮಾಡಬೇಕು. ಒಂದು ಪಂಚವಾರ್ಷಿಕ ಯೋಜನೆಯಲ್ಲಿ ಕನಿಷ್ಟಪಕ್ಷ ನಾವು ಒಂದು ಸಾವಿರ ಮೆಗಾವಾಟ್ಸ್‌ನಷ್ಟು ಉತ್ಪಾದನೆ ಮಾಡಬೇಕಾಗಿದೆ. ೭ ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಎರಡು ವರ್ಷಗಳು ಇವೆ. ನಾವು ೧೯೯೦ ಕ್ಕೆ ಎಷ್ಟು ಆಡ್ ಮಾಡಿದ್ದೇವೆಂದರೆ ೫೦೦ ಮೆಗಾವಾಟ್ಸ್‌ನಷ್ಟು ಆಡ್ ಮಾಡಿದ್ದೇವೆ. ೫೦೦ ಮೆಗಾವಾಟ್ಸ್‌ನಷ್ಟು ಕೊರತೆ ಬರುತ್ತದೆ. ೮ ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಜೆಕ್ಟ್‌ಗಳು ಏನಿವೆ ಇವುಗಳಲ್ಲಿ ಒಂದು ಸಾವಿರ ಮೆಗಾವಾಟ್ಸ್ ಉತ್ಪಾದನೆ ಮಾಡುವಷ್ಟು ಸಾಮರ್ಥ್ಯವನ್ನು ಸೇರಿಸಿದ್ದೇವೆ. ಆ ಪ್ರಾಜೆಕ್ಟ್‌ಗಳ ಹೆಸರುಗಳನ್ನು ಬೇಕಾದರೆ ನಾನು ಕೊಡುತ್ತೇನೆ. ಮತ್ತು ಅದರ ಕೆಪ್ಯಾಸಿಟಿಯನ್ನು ಬೇಕಾದರೆ ಆಮೇಲೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಬೊಮ್ಮಾಯಿಯವರು ಯೋಜನೆ ಬಗ್ಗೆ ನಮ್ಮ ಪರಿಸ್ಥಿತಿ ಬಗ್ಗೆ ಸಾಮಾನ್ಯವಾಗಿ ಅವರು ಯಾವಾಗಲೂ ಆಧಾರವನಿಟ್ಟು ಕೊಂಡು ಮಾತನಾಡುವವರು, ಈ ಸಾರಿ ಆ ರೀತಿ ಮಾತನಾಡಲಿಲ್ಲ. ನಿನ್ನೆ ಯಲಹಂಕ ಪ್ರಾಜೆಕ್ಟ್ ಬಗ್ಗೆ ಮಾತನಾಡಿದರು. ಈ ಪ್ರಾಜೆಕ್ಟ್ ಅನ್ನು ೧೯೮೫ ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕಳುಹಿಸಿದ ಪ್ರೊಪೋಜಲ್ಸ್ ಏನೆಂದರೆ ಈ ಪ್ರಾಜೆಕ್ಟ್‌ನಲ್ಲಿ ಸುಮಾರು ೧೨೨ ಮೆಗಾವಾಟ್ಸ್ ಉತ್ಪಾದನೆ ಮಾಡತಕ್ಕಂಥ ಪ್ರಾಜೆಕ್ಟ್ ಇದು. ಇದಕ್ಕೆ ಬೇಕಾಗಿರುವುದು ಸುಮಾರು ೧೨೦ ಕೋಟಿ ರೂಪಾಯಿಗಳು ಇದಕ್ಕೆ ನಮ್ಮ ರಾಜ್ಯದಲ್ಲಿರತಕ್ಕಂಥ ಇಂಡಸ್ಟ್ರಿಗಳವರು ಕಾಂಟ್ರಿಬ್ಯೂಷನ್ ಮಾಡುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ, ನೀವು ಕ್ಲಿಯರೆನ್ಸ್ ಕೊಡಿ ಎಂದು ಕೇಳಿದ್ದೆವು. ಆದರೆ ಎರಡು ವರ್ಷಗಳಿಂದ ಅಂದರೆ ೧೯೮೬ ನೇ ಇಸವಿಯಿಂದ ೧೯೮೭ ನೇ ಇಸವಿ ಕೊನೆಯವರೆವಿಗೂ ಬರೀ ಕರೆಸ್‌ಪಾಂಡೆನ್ಸ್ ನಡೆಯಿತು. ನಾನು ಎರಡು ಮೂರು ಸಾರಿ ಮಾನ್ಯ ಸಾಠೆಯವರನ್ನು ಕಂಡು ಈ ಪ್ರಾಜೆಕ್ಟ್ ಕ್ಲಿಯರೆನ್ಸ್ ಮಾಡಿ ಎಂದು ಹೇಳಿದ್ದಕ್ಕೆ ಅವರು ೧೯೮೭ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಕ್ಲಿಯರೆನ್ಸ್ ಮಾಡಿದರು ನಮ್ಮ ಸ್ನೇಹಿತರು ಬಹಳ ಜೋರಾಗಿ ಹೇಳಿದರು, ಕೇಂದ್ರ ಸರ್ಕಾರದವರು ಕ್ಲಿಯರ್ ಮಾಡಿದ್ದಾರೆಂದು, ಇಲ್ಲಿ ಇನ್ನೊಂದು ಏನೆಂದರೆ ಇಲ್ಲಿ ಎರಡು ರೀತಿಯ ಜನರೇಟರ್ಸ್ ಇವೆ. ಅವು ಯಾವುವೆಂದರೆ ಒಂದು ಡಿ. ಜಿ. ಸೆಟ್ಸ್ ಇನ್ನೊಂದು ಗ್ಯಾಸ್ ಟರ್‌ಬೈನ್. ಈ ಗ್ಯಾಸ್ ಟರ್‌ಬೈನ್‌ಗಳು ಎರಡು ರೀತಿಯಲ್ಲಿ ಇವೆ. ಅವು ಯಾವುವೆಂದರೆ ಓಪನ್ ಸೈಕಲ್ ಎನ್ನತಕ್ಕಂಥಾ ವ್ಯವಸ್ಥೆ ಒಂದು ಇನ್ನೊಂದು ಕಂಬೈನ್ಡ್ ಸೈಕಲ್ ಎಂದು ಇವುಗಳನ್ನು ನಾವು ತೆಗೆದುಕೊಂಡು ಬಂದರೆ ಇದಕ್ಕೆ ಸುಮಾರು ೧೩೦-೪೦ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಈ ಓಪನ್

ಸೈಕಲ್ ಗ್ಯಾಸ್ ಟರ್‌ಬೈನ್ ಸಿಸ್ಟಂನಲ್ಲಿ ಎಫಿಷಿಯನ್ಸಿ ಸುಮಾರು ೩೦ ಪರ್ಸೆಂಟ್. ಅದೇ ಈ ಡಿ.ಜಿ. ಸೆಟ್ಸ್ ತೆಗೆದುಕೊಂಡು ಬಂದರೆ ಅದರ ಎಫಿಷಿಯೆನ್ಸಿ ಶೇಕಡಾ ೪೦ ಪರ್ಸೆಂಟ್ ಇದೆ. ನಾವು ಸಣ್ಣ ಸಣ್ಣ ಈ ಜನರೇಷನ್ ಸ್ಟೇಷನ್ಸ್ ಮಾಡುವಾಗ ಒಂದೊಂದು ಜನರೇಷನ್‌ನಲ್ಲಿ ಸುಮಾರು ೨೦ ಮೆಗಾವಾಟ್ಸ್ ಸಾಮರ್ಥ್ಯವಿರುವ ೬ ಪವರ್ ಜನರೇಷನ್ಸ್ ಮಾಡಬೇಕೆಂದು ನಾವು ಗ್ಲೋಬಲ್ ಟೆಂಡರ್ ಕರೆದೆವು. ಈ ಗ್ಯಾಸ್ ಟರ್‌ಬೈನ್ ಮತ್ತು ಡಿ.ಜಿ. ಸೆಟ್ಸ್‌ಗಳ ಸೇರಿಸಿ ಟೆಂಡರ್ ಕರೆದೆವು. ಆಗ ಸೆಂಟ್ರಲ್ ಅಥಾರಿಟಿ ಅಧ್ಯಕ್ಷರವರಿಗೆ ನಮ್ಮ ಕೆ.ಇ.ಬಿ. ಅಧ್ಯಕ್ಷರು ಒಂದು ಪತ್ರ ಬರೆದರು. ಆಗ ಅಲ್ಲಿ ಒಬ್ಬ ಎಕ್ಸ್‌ಪರ್ಟ್ ತಜ್ಞರು ಇದ್ದರು. ಅವರು ಇದನ್ನು ನೋಡಿ ಒಪ್ಪಿಕೊಂಡು ನೀವು ಡಿ.ಜಿ. ಸೆಟ್ಸ್ ಹಾಕಿ ಎಂದು ಹೇಳಿದರು. ಇದಕ್ಕೆ ಫ್ಯೂಯಲ್ ಏನಿದೆ ಎಲ್.ಎಸ್.ಹೆಚ್. ಆಗಬಹುದು, ಕ್ರೂಡ್ ಆಯಿಲ್ ಆಗಬಹುದು, ಸೆಮಿ ಕ್ರೂಡ್ ಆಯಿಲ್ ಆಗಬಹುದು, ಇದನ್ನು ಉಪಯೋಗಿಸಿಕೊಳ್ಳಬಹುದು. ಆದರೆ ಗ್ಯಾಸ್ ಟರ್‌ಬೈನ್‌ಗೆ ಇದು ಆಗುವುದಿಲ್ಲ. ಬೇರೆ ಬೇಕು ಈ ಡಿ.ಜಿ. ಸೆಟ್ಸ್‌ಗೆ ಎಲ್.ಎಸ್.ಎಚ್. ಆಯಿಲ ಆಗಬಹುದು, ಡೀಸಲ್ ಆಗಬಹುದು, ಅಥವಾ ಬೇರೆ ಫರ್ನೇಸ್ ಆಯಿಲ್ ಆದರೂ ಆಗಬಹುದು ಈ ಡಿ.ಜಿ. ಸೆಟ್ಸನ್ನು ಕೊಂಡು ಕೊಳ್ಳಲು ಗ್ಲೋಬಲ್ ಟೆಂಡರ್ ಎಕ್ಸ್‌ಪರ್ಟ್ ಕಮಿಟಿ ಮಾಡಿ ಅದರಲ್ಲಿ ೧೩ ಜನರಿದ್ದಾರೆ ಅದರಲ್ಲಿ ೫ ಜನರನ್ನು ಬ್ರಾಕೆಟ್ ಮಾಡಿ ಏನೇನೋ ಆಯಿತು. ಆಗ ಯಾವುದೋ ಒಂದು ಕಂಪನಿಗೆ ಡೆಫರ್ಡ್ ಪೇಮೆಂಟ್ ಮತ್ತು ಸಾಫ್ಟ್ ಲೋನ್ ಫೆಸಿಲಿಟೀಸ್ ಮುಂಚಿತವಾಗಿ ತರ ಫಾರಿನ್ ಎಕ್ಸ್‌ಚೇಂಜ್ ಸುಮಾರು ೮೦ ಕೋಟಿ ರೂಪಾಯಿಗಳನ್ನು ನಮಗೆ ಕೊಡಿ ಎಂದು ಇದನ್ನು ಡೆಫರ್ಡ್ ಪೇಮೆಂಟ್ ಅಂಡ್ ಲೋನ್ ಕ್ರೆಡಿಟ್ ಫೆಸಿಲಿಟಿ ಕೊಡಿ ಎಂದು ಕೇಳಿದ್ದಕ್ಕೆ ಮಾನ್ಯ ಸಾಠೆಯವರು ಇದಕ್ಕೆ ಒಪ್ಪಿದರು. ಆದರೆ ಫೈನಾನ್ಸ್ ಮಿನಿಸ್ಟರ್ ಒಪ್ಪಲಿಲ್ಲ, ಫ್ರೀ ಫಾರಿನ್ ಎಕ್ಸ್‌ಚೇಂಜ್ ಸಿಸ್ಟಮ್ ಪ್ರಕಾರ ನಿಮಗೆ ಬೇಕಾಗುವಷ್ಟು ಎಂದರೆ, ೮೦ ಕೋಟಿ ಫಾರಿನ್ ಎಕ್ಸ್‌ಚೇಂಜ್ ಕೊಡುತ್ತೇವೆ. ಈಗಲೇ ತೆಗೆದುಕೊಂಡು ಬಿಡಿ ಎಂದರು. ಅದು ಹೇಗೆ ಸಾಧ್ಯ ? ಒಂದು ರಾಜ್ಯ ಸರಕಾರಕ್ಕೆ ಒಂದು ವರ್ಷದಲ್ಲಿ ಅದೂ ಯೋಜನೆಯಲ್ಲಿ ಸೇರದೇ ಇರತಕ್ಕಂಥ ಬಾಬಿಗೆ, ೮೦ ಕೋಟಿ ರೂಪಾಯಿಗಳನ್ನು ಒದಗಿಸುವುದು ಹೇಗೆ ಸಾಧ್ಯ ? ೮೦ ಕೋಟಿ ರೂಪಾಯಿ ನಾವು ಈಗಲೇ ಕೊಟ್ಟು ಬಿಡುತ್ತೇವೆ ತೆಗೆದುಕೊಳ್ಳಿ ಎಂದರು, ಆದರೆ ನಾವು ಅವರು ನಮಗೆ ಸಾಲ ಕೊಡುವುದಕ್ಕೆ ತಯಾರಾಗಿದ್ದಾರೆ, ಮೆಷಿನ್ಸ್ ಕೊಡುವುದಕ್ಕೆ ತಯಾರಾಗಿದ್ದಾರೆ. ಕಂತಿನ ಮೇಲೆ ನಮ್ಮ ಹತ್ತಿರ ಹಣ ವಸೂಲು ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದಾರೆ, ಇದಕ್ಕೆ ನಮಗೆ ಫೆಸಿಲಿಟಿ ಕೊಡಿ ಎಂದರೆ ಕೊಡಲಿಲ್ಲ. ಪ್ರಾಜೆಕ್ಟ್ ಕ್ಲಿಯರ್ ಮಾಡಿರುತ್ತಾರೆ, ಆದರೆ ಡೆಫರ್ಡ್ ಪೇಮೆಂಟ್‌ಗೆ ಒಪ್ಪಲಿಲ್ಲ. ಇದು ಮಾನ್ಯ ಮೊಯಿಲಿಯವರಿಗೆ ಏತಕ್ಕೆ ಗೊತ್ತಾಗಲಿಲ್ಲ ಎಂದು ಆಶ್ಚರ್ಯವಾಗುತ್ತದೆ. ಇದು ಇನ್ನೂ ಕ್ಲಿಯರ್ ಆಗಲಿಲ್ಲ, Even now it is not cleared.

೧೧–೩೦ ಎ. ಎಂ.

SRI B. BASAVALINGAPPA.—What are the rules for foreign exchange ?

ಶ್ರೀ ಜೆ. ಹೆಚ್. ಪಟೇಲ್.—ಪ್ರೈವೇಟ್‌ನವರಿಗೆ, ಬಿರ್ಲಾ ಗ್ರೂಪ್‌ನವರಿಗೆ ಕೊಡುವುದಕ್ಕೆ ಬರುತ್ತದೆ, ಸರಕಾರಕ್ಕೆ ಕೊಡುವುದಕ್ಕೆ ಬರುವುದಿಲ್ಲವೇ ? ಅದಕ್ಕಾಗಿ ಇದನ್ನು ಎಲ್ಲಿ ತಡೆ ಹಿಡಿದಿದ್ದಾರೆ, ಹೇಗೆ ಇದೆ ಎಂದು ವಿಷಯ ತಿಳಿದುಕೊಳ್ಳದೇ ಮಾತನಾಡಿದರೆ ಹೇಗೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಪ್ರಾಜೆಕ್ಟ್ ಕ್ಲಿಯರ್ ಮಾಡಿರುತ್ತಾರೆ ಆದರೆ ಫಾರಿನ್ ಎಕ್ಸ್‌ಚೇಂಜ್ ಡೆಫರ್ ಪೇಮೆಂಟ್‌ಗೆ ಒಪ್ಪಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇದು ಊಟಕ್ಕೆ ಕರೆದು ಕೈ ಉಪಯೋಗ ಮಾಡಬೇಡ ಎಂದು ಹೇಳಿದ ಹಾಗೆ ಆಯಿತು. ಊಟ ಮಾಡು ಕೈ ಉಪಯೋಗ ಮಾಡಬೇಡ ಎಂದು ಹೇಳಿದಹಾಗೆ. ಮಾನ್ಯ ಮೊಯಿಲಿಯವರಿಗೆ ಈಗಲಾದರೂ ಇದು ಗೊತ್ತಾಗಬಹುದು. ನಮ್ಮ ರಾಜ್ಯದ ಎಲ್ಲಾ ಎಂ.ಪಿ. ಗಳೂ ಇದರ ಬಗ್ಗೆ ಹೇಳಿದರು. ನಾನು ಆ ಪಕ್ಷ ಈ ಪಕ್ಷ ಎಂದು ಹೇಳುವುದಿಲ್ಲ. ಎಲ್ಲರೂ ಇದರ ಬಗ್ಗೆ ಒತ್ತಾಯ ಮಾಡಿದರು. ಇದು ನಮ್ಮ ರಾಜ್ಯದ ಇವತ್ತಿನ ಸ್ಥಿತಿಗೆ ಬಹಳ ಅವಶ್ಯಕವಾಗಿದೆ. ಇವತ್ತಿನವರೆಗೂ ಆಗಿಲ್ಲ. ಈಗೇನು ಮಾಡುತ್ತಿದ್ದಾರೆ ಎಂದರೆ ಇಲ್ಲ ನೀವು ಹೇಳಿದ್ದು ಗ್ಯಾಸ್ ಟರ್ಬೈನ್‌ಗೆ ನೀವು ಡಿ.ಜಿ. ಸೆಟ್‌ಗೆ ಏತಕ್ಕೆ ಕನ್‌ವರ್ಟ್ ಮಾಡಿದಿರಿ, ಇದು ಬೇಕಾದರೆ ಹೊಸದಾಗಿ ಪ್ರಾರಂಭದಿಂದ ಬನ್ನಿರಿ ಎಂದು ಹೇಳುತ್ತಿದ್ದಾರೆ. ಯಾವ ಭಾಷೆಯಲ್ಲಿ ಇದನ್ನು ಹೇಳಬೇಕೋ ನನಗೆ ಗೊತ್ತಾಗುತ್ತಿಲ್ಲ.

ಇದನ್ನು ಎರಡೂವರೆ ಮೂರು ವರ್ಷ ತಡೆಹಿಡಿದು, ಇನ್ನೇನು ನಾವು ಪ್ರಾರಂಭ ಮಾಡಬೇಕು, ಇನ್ನು ೧೮ ತಿಂಗಳಲ್ಲಿ ೧೨೦ ಮೆಗಾವ್ಯಾಟ್ ಜನರೇಟ್ ಮಾಡುತ್ತೇವೆ ಎಂಬ ಆಸೆ ಇಟ್ಟುಕೊಂಡಿದ್ದಾಗ, ಹೊಸದಾಗಿ ಬಂದಿರತಕ್ಕ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಚೇರ್ಮನ್‌ರವರು ಇಲ್ಲ, ಇಲ್ಲ. ನೀವು ಮೊದಲು ಪ್ರಪೋಸ್ ಮಾಡಿದ್ದು ಗ್ಯಾಸ್ ಟರ್ಬೈನ್ಸ್ ಸೆಟ್ ತೆಗೆದುಕೊಳ್ಳಬೇಕು ಎಂದು. ಡೀಸೆಲ್ ಜನರೇಟಿಂಗ್ ಸೆಟ್ ಬೇಕಾದರೆ ಮತ್ತೆ ಹೊಸದಾಗಿ ಟೆಂಡರ್ ಕರೆಯಿರಿ ಎಂದು ಹೇಳಿದರು. ಈ ತರಹ ಕಾಲು ಹಿಡಿದು ಎಳೆಯುವುದು ಇದೆಯಲ್ಲ ಇದು ಸರಿಯಲ್ಲ. ಇದರ ಬಗ್ಗೆ ನಿಮ್ಮ ಪಾರ್ಟಿ ಎಂ. ಪಿ. ಗಳೂ ಒತ್ತಡ ತಂದರು, ಏತಕ್ಕೆ ತಡ ಮಾಡುತ್ತಿದ್ದೀರಿ ಎಂದು ಕೇಳಿದರು. ಒಂದು ಸಾರಿ ಡಿ.ಜಿ. ಸೆಟ್‌ಗೆ ಅನುಮತಿ ಕೊಡುತ್ತೇವೆ ಎಂದು ಹೇಳುವುದು, ಫಾರಿನ್ ಎಕ್ಸ್‌ಚೇಂಜ್ ಪೇಮೆಂಟ್ ಒಂದೇಸಾರಿ ಕೊಡುತ್ತೇವೆ.ನೀವು ಡೆಫರ್ಡ್ ಪೇಮೆಂಟ್,ಕ್ರೆಡಿಟ್ ಫೆಸಿಲಿಟಿ.ಸಪ್ಲೈಯರ್ಸ್ ಕ್ರೆಡಿಟರ್ಸ್ ಫೆಸಿಲಿಟಿ ತೆಗೆದುಕೊಳ್ಳುವ ಹಾಗೆ ಇಲ್ಲ ಎನ್ನುವುದು. ಆದುದರಿಂದ ವಾಸ್ತವವಾಗಿ ಏನಾಗಿದೆ ಎಂದರೆ ಇದು ಥಿಯರಟಿಕಲ್ ಆಗಿ ಕ್ಲಿಯರ್ ಆಗಿದೆ ಎಂದಾದರೂ ಇನ್ನೂ ಏನೂ ಆಗಿಲ್ಲ.ಇವತ್ತು ನಾವು ಏನು ಮಾಡಿದ್ದೇವೆ ಎಂದರೆ ಇದಕ್ಕೋಸ್ಕರ ನಮ್ಮ ರಾಜ್ಯದಲ್ಲಿರುವ ಉದ್ಯಮಗಳಿಂದ ೧೨-೧೩ ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಇಟ್ಟಿದ್ದೇವೆ ಮಾನ್ಯ ಮೊಯಿಲಿಯವರು ಈಗ ನನಗೆ ತಿಳಿಸಬೇಕು ಹೇಗೆ ಈ ಪ್ರಾಜೆಕ್ಟ್ ಕ್ಲಿಯರ್ ಮಾಡುವುದು ಎಂದು,

ಶ್ರೀ ಬಿ. ಬಸವಲಿಂಗಪ್ಪ.—ಫಾರಿನ್ ಎಕ್ಸ್‌ಚೇಂಜ್ ಫೆಸಿಲಿಟಿ ಏತಕ್ಕೆ ಕೊಡಲಿಲ್ಲ. ಬೇರೆ ಯಾವ ಗೌರ್ನಮೆಂಟಿಗೆ ಕೊಟ್ಟಿದ್ದಾರೆ ಅದನ್ನು ಹೇಳಬೇಕಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಬೇರೆಯವರಿಗೆ ಕೊಟ್ಟಿದ್ದಾರೆ. ಖಾಸಗಿಯವರಿಗೆ ಕೊಟ್ಟಿದ್ದಾರೆ ಅದೇ ಗೌರ್ನಮೆಂಟ್‌ಗೆ ಕೊಡುವುದಕ್ಕೆ ಬರುವುದಿಲ್ಲ. ಬಿರ್ಲಾರವರಿಗೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾವ ಪ್ರಾಜೆಕ್ಟ್‌ಗೆ ಕೊಟ್ಟಿದ್ದಾರೆ. ಯಾವಾಗ ಕೊಟ್ಟರು ಎಂಬುದನ್ನು ಈಗ ತಿಳಿಸಬೇಕು. ಆಧಾರ ಇಲ್ಲದೆ ನಾವು ಮಾತನಾಡುತ್ತೇವೆ, ಆದರೆ ಈಗ ತಾವು ಹೇಳಿದಮೇಲೆ ಅದಕ್ಕೆ ಆಧಾರ ಬೇಕಲ್ಲ.

ಶ್ರೀ ಜೆ. ಹೆಚ್. ಪಟೇಲ್,—ಗುಜರಾತ್‌ನಲ್ಲಿ ಆಗಿದೆ, ಎಗ್ಸಾಕ್ಟ್ ನೇಮ್ ನನಗೆ ಗೊತ್ತಿಲ್ಲ. ಡೀಸೆಲ್ ಜನರೇಟಿಂಗ್ ಸೆಟ್‌ಗೆ ಬೇರೆ ಖಾಸಗಿಯವರಿಗೆ ಪರ್ಮಿಷನ್ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರಿಗೆ, ಯಾವಾಗ ಎಷ್ಟು ಅಮೌಂಟಿಗೆ ಕೊಟ್ಟಿದ್ದಾರೆ ಅದನ್ನು ಹೇಳಿ.

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿಯೂ ಕೊಟ್ಟಿದ್ದಾರೆ. ಅದರ ಡಿಟೇಲ್ಸ್ ಕೊಡುತ್ತೇನೆ. ಈಗ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಸುಮ್ಮನೆ ಬೀಸಣಿಗೆ ಬೀಸಿದರೆ ಆಯಿತೇ ಆಧಾರ ಎಲ್ಲಿದೆ ?

ಶ್ರೀ ಜೆ. ಎಚ್. ಪಟೇಲ್.—ಯಲಹಂಕ ಪ್ರಾಜೆಕ್ಟ್ ಕ್ಲಿಯರ್ ಆಗಿದೆ, ಕೇಂದ್ರ ಸರಕಾರದವರು ೩೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ ಎಂದು ನೀವು ಹೇಳಿದಿರಿ, ಇದಕ್ಕೆ ಆಧಾರ ಎಲ್ಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಒಂದು ಆಧಾರದಿಂದ ಹೇಳಿದರು, ಅದಕ್ಕೆ ನೀವು ಇನ್ನೊಂದು ಆಧಾರದಿಂದ ಹೇಳುತ್ತಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಕೇಂದ್ರ ಸರಕಾರದವರು ೩೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ ಎಂದು ಹೇಳಿದಿರಿ. ಎಲ್ಲಿ ಸ್ವಾಮಿ ಸಬ್ಸಿಡಿ. ಪ್ರಾಜೆಕ್ಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟರೆ ಸಾಕು. ಇನ್ನು ಸಬ್ಸಿಡಿ ಎಲ್ಲಿ ಕೊಡುತ್ತಾರೆ. ಎಲ್ಲಿ ಸಬ್ಸಿಡಿ ಕೊಡುತ್ತಾರೆ ಯಾವಾಗ ಹೇಳಿದ್ದಾರೆ ? ನೀವು ಹೇಗೆ ಹೇಳಿದಿರಿ.

ಆದ್ದರಿಂದ ಯಲಹಂಕ ಪ್ರಾಜೆಕ್ಟ್ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿಗೋಸ್ಕರವಾಗಿ ಹೇಳುತ್ತಿದ್ದೇನೆ, ಇಲ್ಲಿಯವರೆಗೆ ಕೇಂದ್ರ ಸರ್ಕಾರದ ಆ ಖಾತೆಯ ಮಂತ್ರಿಗಳೂ ನಮ್ಮ ಪರವಾಗಿದ್ದರೂ ಕೂಡ ಇನ್ನೂ ನಮಗೆ ಸಿಕ್ಕಿಲ್ಲ. ಅವರಿಗೆ ಯಾವ ಭಾವನೆ ಇದೆಯೋ, ಡೆಲ್ಲಿ ಭಾವನೆಗಳು ಎಂದರೆ ಮೈ ಎಲ್ಲಾ ಬಿಸಿ ತಗಲುತ್ತದೆ. ಒಂದು ಭಾವನೆಯಿಂದ ಇನ್ನೊಂದು ಭಾವನೆಗೆ ಹೋಗಬೇಕಾದರೆ ಎಷ್ಟೋ ವರ್ಷಗಳು ಬೇಕಾಗುತ್ತದೆ. ಮತ್ತೆ ಇನ್ನೂ ಕೆಲವು ಪ್ರಾಜೆಕ್ಟ್‌ಗಳು ಇವೆ.

ಮೇಜರ್ ಪ್ರಾಜೆಕ್ಟ್ ಬಗ್ಗೆ ಆನ್ ಹ್ಯಾಂಡ್ ಇರತಕ್ಕ ಪ್ರಾಜೆಕ್ಟ್. ನಾವು ಕಳುಹಿಸಿರುವುದು ಹಲವಾರು ಇರಬಹುದು. ಹೈಡಲ್ ಇರಬಹುದು, ಅಥವಾ ಥರ್ಮಲ್ ಇರಬಹುದು. ಈಗ ಕ್ಲಿಯರ್ ಆಗಿರುವುವು, ವಾರಾಹಿ ಯೋಜನೆ ಈ ವರ್ಷ ಒಂದು ಯೂನಿಟ್ ಕಮಿಷನ್ ಆಗುತ್ತದೆ. ಮಾನ್ಯ ಸದಸ್ಯರು ಏಕೆ ಡಿಲೇ ಆಯಿತು ಎಂದು ಹೇಳಿದರು. ಹಲವಾರು ಪ್ರಾಕೃತಿಕ ಕಾರಣಗಳಿಗೋಸ್ಕರ ಡಿಲೇ ಆಗಿದೆ. ಅವರೂ ಕೂಡ ನೋಡಿದ್ದಾರೆ, ಅನಿವಾರ್ಯವಾಗಿ ಡಿಲೇ ಆಗಿದೆ. ಇವಕ್ಕೆ ಇನ್ವೋಲ್ವ್‌ಮೆಂಟ್ ಆಗಿಲ್ಲ, ಸರ್ಕಾರ ಆಸಕ್ತಿ ವಹಿಸಿಲ್ಲ ಎಂದಲ್ಲ, ಪ್ರಾರಂಭದಲ್ಲಿ ಸ್ವಲ್ಪ ಡಿಲೇ ಆಯಿತು. ಇಷ್ಟು ಹೊತ್ತಿಗೆ ೨ ಯೂನಿಟ್ ಕಮಿಷನ್ ಆಗಬೇಕಾಗಿತ್ತು. ಈ ವರ್ಷ ಹಾಕಿರುವ ಟೈಮ್ ಪ್ರಕಾರ ಒಂದು ಯೂನಿಟ್ ಕಮಿಷನ್ ಆಗಿದೆ. ಅನಂತರ ಕೊಡಸಳ್ಳಿ, ಕಾದ್ರಾ ಕಾಳಿ ಸ್ಟೇಜ್ ೨ ನಡೆಯತಕ್ಕಂಥ ಪ್ರಾಜೆಕ್ಟಗಳು. ಇಲ್ಲಿ ಕೆಲಸ ಶುರು ಮಾಡಿದ್ದೇವೆ. ಸಿವಿಲ್ ವರ್ಕ್ ಪ್ರಾರಂಭ ಮಾಡಿದ್ದೇವೆ. ಟೆಂಡರ್ ಕರೆದು ಕೆಲಸ ಕೊಟ್ಟಿದ್ದೇವೆ. ಇದಕ್ಕೆ ದುಡ್ಡು ಎಲ್ಲಿ ಜೋಡಿಸುತ್ತೀರಿ, ನಿಮ್ಮ ಕಾಗದದಲ್ಲಿ ಇಲ್ಲ ಎಂದು ಹೇಳಿದರು. ಕಾಳಿ ಪ್ರಾಜೆಕ್ಟ್ ೨ರಲ್ಲಿ ಕೊಡಸಳ್ಳಿ, ಕಾದ್ರಾ, ದಾಂಡೇಲಿ ಈ ಮೂರು ಡ್ಯಾಂಗಳನ್ನು ಕಟ್ಟಬೇಕು. ಆಗ ಅಲ್ಲಿರುವ ಪವರ್ ಜನರೇಟ್ ಆಗುತ್ತದೆ. ಅದೇರೀತಿ ಶರಾವತಿ, the divertion of the river is being done, work has already commenced. ನಮ್ಮ ಷೆಡ್ಯೂಲ್ ಪ್ರಕಾರ ೧೯೯೨-೯೩ಕ್ಕೆ ಈ ಯೂನಿಟ್‌ಗಳು ಕಾರ್ಯಾಚರಣೆಗೆ ಬರುತ್ತವೆ. ಇದಕ್ಕೆ ದುಡ್ಡು ಎಲ್ಲಿಬಂತು ಎಂದರು. We have got the world Bank assistance which has been cleared by the Government of India. We are going to finalise the contract, I think no other State Government has been able to achieve this kind of help from the world Bank of the order of Rs. 1,000 crores. That we have been able to achieve. ಆದ್ದರಿಂದ ಈ ಪ್ರಾಜೆಕ್ಟ್ ಬಗ್ಗೆ ಯಾವ ಅನುಮಾನವೂ ಇಲ್ಲ. ಇನ್ನು ಕೈಗಾ ಬಗ್ಗೆ ಹೇಳಿದರು. ಮಾನ್ಯ ಮೊಯ್ಲಿಯವರು ಈಗ್ಗೆ ೫-೬ ತಿಂಗಳಿಂದ ಓದಿಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಕೈಗಾ ಪ್ರಾಜೆಕ್ಟ್ ಬರಬೇಕೆಂದು ಕೇರಳ ಮತ್ತು ಕರ್ನಾಟಕದ ಮಧ್ಯೆ ತೀವ್ರವಾದ ಪೈಪೋಟಿ ಇದೆ. ಭಾರತದಲ್ಲಿ ನಡೆಯತಕ್ಕಂಥ ೬ ಯೂನಿಟ್‌ಗಳಲ್ಲಿ ಈಗಾಗಲೇ ೪ ನಡೆಯುತ್ತಿವೆ. ಇನ್ನು ೨ ಬೇರೆ ಸ್ಟೇಜ್‌ನಲ್ಲಿವೆ. ಈ ಹೊಸ ಯೂನಿಟ್‌ನ್ನು ಸೌತ್‌ಗೆ ಕೊಡಬೇಕೆಂದು ಗವರ್ನಮೆಂಟ್ ಆಫ್ ಇಂಡಿಯಾದಲ್ಲಿ ತೀರ್ಮಾನ ಮಾಡಿದಾಗ, ನಮ್ಮ ಮುಖ್ಯಮಂತ್ರಿಗಳು ಪ್ರಧಾನಿಯವರನ್ನು ಕಂಡು ಒತ್ತಾಯ ಮಾಡಿ, ನಾನು ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಏನಾದರೂ ಮಾಡಿ ಅನುಕೂಲ ಮಾಡಿ ಎಂದು ಹೇಳಿದ್ದೇವೆ. ಅವರ ಒಂದು ಟೀಮ್ ಇಲ್ಲಿಗೆ ಬಂದಾಗ, ಅವರಲ್ಲೂ ಕೂಡ ಕೈಗಾ ಅಣುಸ್ಥಾವರವನ್ನು ಇಲ್ಲಿ ಸ್ಥಾಪನೆ ಮಾಡಬೇಕು ಎಂದು. ಅವರಿಗೆ ಸ್ಥಳ ತೋರಿಸಿ, ಅವರ ಮನವೊಲಿಸಿ ಕೈಗಾ ಪ್ಲಾಂಟ್‌ನ್ನು ತಂದಿದ್ದೇವೆ. ಕೈಗಾ ಕಟ್ಟುತ್ತೇವೆಂದರೆ, ನಿಮ್ಮ ಮುಖ್ಯ ಮಂತ್ರಿಗಳು ಆದಷ್ಟು ಈ ಬಗ್ಗೆ ನ್ಯಾಷನಲ್ ಡಿಬೇಟ್ ಆಗಲಿ ಎಂದು ಹೇಳಿದರು. ಎಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಅಧ್ಯಕ್ಷರೇ, ಕೈಗಾ ಪ್ಲಾಂಟ್ ಏನಾದರೂ ನಮ್ಮ ರಾಜ್ಯಕ್ಕೆ ಬಂದಿದ್ದು, ಅದು ನಮ್ಮ ಸರ್ಕಾರದ ಪ್ರಯತ್ನ ಇಲ್ಲದೇ ಹೋಗಿದ್ದರೆ ಬರುತ್ತಿರಲಿಲ್ಲ. ಎರಡನೆಯದು ಅಣು ವಿದ್ಯುತ್ ಸ್ಥಾವರದ ಬಗ್ಗೆ ಮತ್ತು ಮಾನವ ಹಿತಾಸಕ್ತಿಗಳನ್ನು ಚರ್ಚೆ ಮಾಡತಕ್ಕಂಥ ಜನ ಏನಿದ್ದಾರೆ, environment and pollution. ಬಗ್ಗೆ ಗಮನವನ್ನು ಕೊಡತಕ್ಕ ಮಂಡಲಿಗಳು ಏನಿವೆ, ಈಗ ಇದು ಎಲ್ಲಾ ಕಡೆ ಚರ್ಚೆ ಆಗಿದೆ ಇದು ನಾವು ಹೇಳಿದ್ದಲ್ಲ. ಈ ಚರ್ಚೆ ಜಗತ್ತಿನಲ್ಲಿ ನಡೆಯುತ್ತಿದೆ, ಈ ಚರ್ಚೆ ದೇಶದಲ್ಲಿ ನಡೆಯುತ್ತಿದೆ.

ನಮ್ಮ ಹತ್ತಿರ ಬೇಕಾದಷ್ಟು ಜನಗಳು ಬಂದರು. ದೊಡ್ಡ ದೊಡ್ಡ ಸಾಹಿತಿಗಳು, ವಿಜ್ಞಾನಿಗಳು ಎಲ್ಲಾ ಬಂದರು. ಇದರ ಬಗ್ಗೆ ಬಹಳಷ್ಟು ಹೇಳಿದರು. ಚೆರ್ನೋಬಿಲ್ ದುರಂತದ ಬಗ್ಗೆ ಮತ್ತು ಇತ್ತೀಚೆಗೆ ಅಮೇರಿಕಾದಲ್ಲಿ ೪-೫ ವರ್ಷಗಳ ಹಿಂದೆ ಆದ ದುರಂತದ ಬಗ್ಗೆ ಸಹ ಹೇಳಿದರು. ಅದನ್ನೆಲ್ಲಾ ಹೇಳಿ ನಮಗೆ ಕೈಗಾ ಬೇಡ ಎನ್ನತಕ್ಕಂಥ ವಾದವನ್ನು ಮಾಡತಕ್ಕಂಥ ಜನರೂ ಬಂದರು. ತಡೆಯುಂಟು ಮಾಡಲಿಕ್ಕೆ ನೋಡಿದರು. ನಾವು ಅಲ್ಲಿ ಒಂದು ಕಾಲೋನಿಯ ಸಿವಿಲ್ ವರ್ಕ್ಸ್ ಮಾಡುವುದಕ್ಕೆ ಹೋದರೆ ಅದನ್ನು ತಡೆಹಿಡಿಯಲಿಕ್ಕೆ ಬಂದರು. ನಾವು ಅವೆಲ್ಲವನ್ನೂ ಸಮರ್ಥವಾಗಿ ಎದುರಿಸಿ, ಸಾಕಷ್ಟು ಜನರನ್ನು ಕನ್‌ವಿನ್ಸ್ ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದ್ದರು ಕೂಡ ಕೇಳುವವರು

ಕೇಳದಿದ್ದರೆ ಸರಕಾರವು ತನ್ನ ಕೆಲಸವನ್ನು ಮಾಡುತ್ತದೆ. ಈ ರೀತಿಯಲ್ಲಿ, ಕೈಗಾ ಬೇಡ, ಅಣು ವಿದ್ಯುಚ್ಛಕ್ತಿ ಸ್ಥಾವರ ಬೇಡವೆಂದು ವಾದ ಮಾಡತಕ್ಕಂಥವರಿಗೆ ಡಾ॥ ರಾಜಾರಾಮಣ್ಣನವರು ಮತ್ತು ಶ್ರೀನಿವಾಸ್‌ರವರು ಉತ್ತರ ಕೊಟ್ಟರು ಈ ಬಗ್ಗೆ ಪ್ರಪಂಚದಲ್ಲಿನ ಚಿತ್ರವನ್ನೆಲ್ಲಾ ಕೊಟ್ಟರು. ಫ್ರಾನ್ಸ್ ದೇಶ ಇವೊತ್ತು ೬೦ ಪರ್ಸೆಂಟ್‌ನಷ್ಟು ವಿದ್ಯುಚ್ಛಕ್ತಿಯನು ಪವರ್ ಆಟಾಮಿಕ್ ಪ್ಲಾಂಟ್ಸ್‌ನಿಂದ ಪಡೆಯುತ್ತಿದೆ. ಕೆಲವು ದೇಶಗಳು ಅಟಾಮಿಕ್ ಪವರ್‌ಪ್ಲಾಂಟ್ ಬೇಡ ಎಂದು ಹೇಳುತ್ತಿದ್ದಾರೆ, ಏಕೆಂದರೆ ಅವರಿಗೆ ಆಗಲೇ ಪವರ್ ಸರಪ್ಲಸ್ ಆಗಿರುತ್ತದೆ. ಅವರಿಗೆ ಹೈಡಲ್ ಸೋರ್ಸ್ ಇದೆ, ಥರ್ಮಲ್ ಸೋರ್ಸ್ ಇದೆ, ಅಂತಹ ಕಡೆಗಳಲ್ಲಿ ಅವರಿಗೆ ಸಾಕಷ್ಟು ವಿದ್ಯುತ್ ಇರುವಾಗ ಅವರು ಆಟಾಮಿಕ್ ಪವರ್ ಬೇಡ ಎಂದು ಹೇಳುತ್ತಾರೆ. ಆದಕ್ಕಾಗಿ ಯಾರೋ ಒಬ್ಬ ಅನುಕೂಲವಾಗಿರ ತಕ್ಕಂಥ ಮನುಷ್ಯ ಇದನ್ನು ಬೇಡ ಎಂದು ಹೇಳಿದರೆ, ಅಂತಹ ವಿಷಯವನ್ನು ವಿಚಾರಾತ್ಮಕವಾಗಿ ನಾವು ನೋಡಬೇಕಾಗುತ್ತದೆ. ಇವೊತ್ತು ವಿಜ್ಞಾನಿಗಳ ಒಂದು ಅಂದಾಜಿನ ಪ್ರಕಾರ ಎಣ್ಣೆಯು ಇನ್ನು ಸುಮಾರು ೩೦-೩೫ ವರ್ಷಗಳ ತನಕ ಸಿಗಬಹುದು. ಮಿಡ್ಲ ಈಸ್ಟ್ ಮತ್ತು ಬೇರೆ ಕಡೆಗಳಿಂದ ಅವುಗಳು ಅಷ್ಟು ಕಾಲ ಸಿಗಬಹುದು. The oil which is available for international market is going to exhaust in another 30 years. This is the projection of experts. ಚೈನಾದಲ್ಲಿರುವಂಥ ಆಯಿಲ್ ಎಕ್ಸಾಸ್ಟ್ ಆಗುತ್ತದೋ ಬಿಡುತ್ತದೋ ಅದನ್ನು ಯಾರೂ ಹೇಳುವುದಿಲ್ಲ ರಷ್ಯಾದ ಬಗ್ಗೆ ಯಾರೂ ಹೇಳುವುದಿಲ್ಲ. ಹೀಗೆ ಮಾರ್ಕೆಟ್ಟಿಗೆ ಬರುವಂಥ ಆಯಿಲ್ ೨೦-೩೦ ವರ್ಷಗಳಲ್ಲಿ ಎಕ್ಸಾಸ್ಟ್ ಆಗುತ್ತದೋ, Coal will be available for mankind for another 50 years. So what do you do after wards ? What is the source of energy ? This atomic energy is a perennial source, which is inevitable for the mankind. ಇದಕ್ಕೆ ಎಕ್ಸಾರ್‌ಶನ್ ಇಲ್ಲ ಅಂತ್ಯವು ಇಲ್ಲ. ಆದುದರಿಂದ ಆಟಾಮಿಕ್ ಎನರ್ಜಿಗೆ ಇವೊತ್ತು ಪಾಶ್ಚಾತ್ಯ ದೇಶಗಳಲ್ಲಿ ಪ್ರೈಯಾರಿಟಿ ಕೊಟ್ಟು ಅವರೆಲ್ಲರೂ ಸಮರ್ಥರಾಗಿದ್ದಾರೆ. ಅವರು ಈಗ ಪ್ಲಾಂಟ್ ಬೇಡ ಎಂದು ನಿಲ್ಲಿಸಿದರು. ಅದನ್ನು ನೋಡಿ ನಾವು ಇಲ್ಲಿ ನಿಲ್ಲಿಸುವುದೇ ? ಈ ಬಗ್ಗೆ ಇದ್ದ ಭಯದ ನಿವಾರಣೆಗಾಗಿ ರಾಜಾರಾಮಣ್ಣ ಮತ್ತು ಶ್ರೀನಿವಾಸ್‌ರವರು ಸಂಪೂರ್ಣವಾದ ವಿವರಣೆಗಳನ್ನು ಕೊಟ್ಟರು. ಹಿಂದೆ ಸೇಫ್ಟಿಮೆಜರ್ಸ್ ಬಗ್ಗೆ ಇದ್ದ ಟೆಕ್ನಾಲಜಿಗೂ ಈಗ ಇರುವ ಜಾಸ್ತಿ ಪ್ರಮಾಣದ ಸೇಫ್ಟಿಮೆಜರ್ಸ್ ಬಗ್ಗೆಯೂ ತಿಳಿಸಿ ಹೇಳಿದ್ದಾರೆ. The chances of leakage or explosion is almost nil. ಒಂದು ವೈಜ್ಞಾನಿಕವಾದ ಅಪಾಯರಹಿತವಾದ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವುದು ಒಂದು ವಿಚಾರ. ಎರಡನೆಯದಾಗಿ ಅನಿವಾರ್ಯವಾಗಿ ನಾವು ಇದರ ಮೇಲೆ ಅವಲಂಬಿಸಿರ ಬೇಕು. ಬೇರೆ ಮಾರ್ಗವೇ ಇಲ್ಲ. ಹೀಗೆ ಇರುವಾಗ ನಾವು ಸೇಫ್ಟಿಯನ್ನು ಗಮನದಲ್ಲಿಟ್ಟುಕೊಂಡು ಸಂಜೆ ಸೂರ್ಯ ಮುಳುಗುವುದರೊಳಗಾಗಿ ಮುಲಗುವ ವ್ಯವಸ್ಥೆ ಮಾಡೋಣವೆ? ನಮ್ಮ ಕಾರ್ಖಾನೆಗಳನ್ನೆಲ್ಲಾ ನಿಲ್ಲಿಸಿ ಬಿಡೋಣವೇ ಎಂಬ ಬಗ್ಗೆ ವಿಚಾರ ಮಾಡಬೇಕು ಈ ಕಾರ್ಖಾನೆಗಳು ಇರುವಲ್ಲಿ ಪೊಲ್ಯೂಶನ್ ಇದ್ದೇ ಇರುತ್ತಗೆ ಅವುಗಳು ಇರುವಲ್ಲಿ ಹೊರೆ ಇರುತ್ತದೆ, ಕೊಳಕು ನೀರನ್ನು ಅವುಗಳು ಚೆಲ್ಲುತ್ತವೆ, ವಾಸನೆ ಬರುತ್ತದೆ ಅಪಾಯಕಾರಿ ಕಲುಷಿತ ವಸ್ತುಗಳನ್ನು ಹೊರಹಾಕುತ್ತವೆ, ಇದು ಕೆಲವೊಂದು ವಿಷಯಗಳಲ್ಲಿ ಸಹಜ. ಈಗ ನಾವು ಹೀಗೆ ಅಪಾಯ ಕಾರಿ ವಸ್ತುಗಳನ್ನು ಹೊರಚೆಲ್ಲತಕ್ಕಂಥವುಗಳು ಎಷ್ಟರಮಟ್ಟಿಗೆ ಅಪಾಯಕಾರಿ ಎಂದು ನೋಡ ಬೇಕೇ ವಿನಹ ಮನುಷ್ಯನ ಜೀವನಕ್ಕೆ, ಪ್ರಾಣಿಗಳ ಜೀವನಕ್ಕೆ, ಜಲಜೀವಿಗಳ ಜೀವನಕ್ಕೆ ಅಪಾಯಕಾರಿಯಾಗದಿರುವ ಮಟ್ಟಿಗೆ ಅವುಗಳು ಕಲುಷಿತವಾಗಿದ್ದರೆ ನಾವು ಅದನ್ನು ಅನುಭವಿಸ ಬೇಕಾಗುತ್ತದೆ. ಜಗತ್ತಿನಲ್ಲಿರತಕ್ಕಂಥ. Industrially well developed countries have been able to put up with this kind of system. ಅದನ್ನು ಹೇಗೆ ಮಾಡ ಬೇಕು ? ಉದಾಹರಣೆಗೆ ಹೇಳುವುದಾದರೆ, ಆಟೋರಿಕ್ಷಾ, ಕಾರು, ಲಾರಿ ಇವುಗಳೆಲ್ಲಾ they emit carbon monoxide which is equally dangerous than any other pollution. We are already taking slow poison. ಹಾಗಾದರೆ ಅವುಗಳನ್ನೆಲ್ಲಾ ನಿಲ್ಲಿಸಿ ಬಿಡೋಣವೆ ? ಇವುಗಳಲ್ಲಿ ಕೆಲವು ಅನಿವಾರ್ಯವಾಗಿರುತ್ತವೆ. ಕೆಲವು ಸಾಧ್ಯತೆ ಇರುತ್ತದೆ. ಅದನ್ನೇ ಏನು ಮಾಡುತ್ತಾರೆ ಎಂದರೆ, ಈಗ ವೆಸ್ಟ್ ಜರ್ಮನಿಯಂಥ ಕಡೆಗಳಲ್ಲಿ ಹೀಗೆ ಹೊರಹೊಮ್ಮಿಸ ತಕ್ಕಂಥ ಹೊಗೆಯನ್ನು ಅದರಲ್ಲಿಯೇ ಮತ್ತೆ ಟ್ರೀಟ್ ಮಾಡಿ, ಹೊರಹಾಕುವಂತಹ ವ್ಯವಸ್ಥೆ ಇದೆ. ಅದು ಎಕ್ಸಾಸ್ಟ್ ಪೈಪ್ ಮೇಲಿರುತ್ತದೆ. ಒಂದು ಚಿಮಿಣಿ ತರಹ ಇರುತ್ತದೆ. ಅದರ ಮೂಲಕ

ಟ್ರೀಟ್ ಮಾಡಿ ಹೊರಹಾಕುವಂಥ ಒಂದು ವ್ಯವಸ್ಥೆಯನ್ನು ಅವರು ಮಾಡುತ್ತಾ ಇದ್ದಾರೆ. ಇನ್ನು ಪೆಟ್ರೋಲನ್ನು ಉಪಯೋಗಿಸದೆಯೇ ವಾಹನಗಳನ್ನು ಚಲಿಸುವ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಅದೇನೇ ಇರಲಿ. ೭ನೇ ಪಂಚವಾರ್ಷಿಕ ಯೋಜನೆ ಕೊನೆಯ ವೇಳೆಗೆ ೫೦ ಸಾವಿರ ಮೆಗಾವ್ಯಾಟ್ ಎಲೆಕ್ಟ್ರಿಸಿಟಿ ಉತ್ಪಾದನೆಯಾಗಬೇಕಾಗಿತ್ತು, ನಮ್ಮ ಪ್ಲಾನಿಂಗ್ ಕಮಿಷನ್ ಪ್ರಕಾರ. ಇನ್ನೂ ಎರಡು ವರ್ಷ ಇದೆ. As on today India is suffering from short of electricity to the tune of 15,000 M. W. ಒಂದು ಕಡೆ ನಾವು ಡ್ಯಾಮ್ ಕಟ್ಟುತ್ತೇವೆಂದರೆ ಅರಣ್ಯ ನಾಶ ವಾಗುತ್ತದೆನ್ನುತ್ತಾರೆ, ಇನ್ನೊಂದು ಕಡೆ ಕಲ್ಲಿದ್ದಲು ಉರಿಸುತ್ತೇವೆಂದರೆಪರಿಸರ ಮಾಲಿನ್ಯವಾಗುತ್ತ ದೆನ್ನುತ್ತಾರೆ. ಅಟಾಮಿಕ್ ಎನರ್ಜಿ ಮಾಡುತ್ತೇವೆಂದರೆ ಅದು ಮಾನವಕೋಟಿಗೆ ಅಪಾಯಂಕರ ಎನ್ನು ತ್ತಾರೆ, ಹೀಗಿರುವಾಗ ಸರ್ಕಾರ ಏನು ಮಾಡಬಹುದು ? ಸೂರ್ಯಶಕ್ತಿಯಿಂದ ವಿದ್ಯುತ್ ಉತ್ಪಾದಿ ಸಿದರೆ ಬರೀ ಅದು ನೀರು ಕಾಯಿಸಿಕೊಳ್ಳುವುದಕ್ಕೆ ಮತ್ತು ಅಡಿಗೆ ಮಾಡಿಕೊಳ್ಳುವುದಕ್ಕೆ ಮಾತ್ರ ಬರುತ್ತದೆ. ನಮ್ಮ ರಾಜ್ಯದಲ್ಲಿ ಯಾರು ಈ ಯಂತ್ರಗಳನ್ನು ಕೊಳ್ಳಬಯಸುವರೋ ಅವರಿಗೆ ಸರ್ಕಾರ ಒದಗಿಸುತ್ತಿದೆ. ಇನ್ನು ಗಾಳಿಯನ್ನು ಉಪಯೋಗ ಮಾಡಿ ವಿಂಡ್‌ಮಿಲ್ ಪವರ್ ಜನರೇಷನ್ ಮಾಡು ವುದಾದರೆ ಈಗಾಗಲೇ ನಾವು ಮೂರು ವಿಂಡ್‌ಮಿಲ್ ಹಾಕಿದ್ದೇವೆ, ಒಂದು ಕೊಡಗಿನಲ್ಲಿ ಕಂಪ್ಲೀಟಾಗಿದೆ ಆದರೆ ಅಲ್ಲಿ ಉತ್ಪಾದನೆ ಮಾಡುವ ಎಲೆಕ್ಟ್ರಿಸಿಟಿ ಕಡಿಮೆ.

ಶ್ರೀ ಕೆ.ಹೆಚ್. ಪಾಟೀಲ್.—ಈ ಬಯಾಗ್ಯಾಸ್ ಉತ್ಪಾದನೆ ಬಗ್ಗೆ ಡಾ॥ ಚೌಧುರಿ ಎಂಬುವರು ಸಂಶೋಧನೆ ಮಾಡಿ, ತಮಗೆ ರಾಜ್ಯ ಸರ್ಕಾರ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟರೆ ತಾವು ಅದರ ಮೇಲೆ ಇನ್‌ವೆಸ್ಟ್ ಮಾಡಲು ಸಿದ್ಧ ಎಂದು ಹೇಳಿ ಒಂದು ಸ್ಕೀಮ್ ಕೊಟ್ಟಿದ್ದರಲ್ಲ ಅದನ್ನು ದಯ ವಿಟ್ಟು ನೋಡಿ.

ಶ್ರೀ ಜೆ.ಹೆಚ್. ಪಟೇಲ್.—ಈ ಬಯಾಗ್ಯಾಸ್ ಪ್ಲಾಂಟ್ ಡೆಲ್ಲಿಯಲ್ಲಿ ಬಂದಿದೆ. ವೇಸ್ಟನ್ನು ಸುಟ್ಟು ಅದರಿಂದ ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡುವ ಸ್ಕೀಮ್‌ನಲ್ಲಿ ಸುಮಾರು ೩ ಮೆಗಾವ್ಯಾಟ್ಸ್ ಶಕ್ತಿ ಉತ್ಪತ್ತಿ ಮಾಡುತ್ತಿದ್ದಾರೆ. ಈಗ ಬೆಂಗಳೂರು ಸಿಟಿ ಕಾರ್ಪೊರೇಷನ್‌ನವರು ಇನ್ಸಿಡೇಷನ್ ಪ್ಲಾಂಟ್ ಎಂದು ಮಾಡುತ್ತಿದ್ದಾರೆ. ಬಯಾಗ್ಯಾಸ್‌ನಿಂದ ಉತ್ಪನ್ನ ಮಾಡುವ ಎಲೆಕ್ಟ್ರಿಸಿಟಿಯನ್ನು ಕೇವಲ ಅಡುಗೆ ಮತ್ತು ಬೇರೆ ಕೆಲಸಗಳಿಗೆ ಉಪಯೋಗಿಸಿಕೊಂಡರೆ ಅಟ್‌ಲೀಸ್ಟ್ ಇಂಡಸ್ಟ್ರಿಗೆ ಅದು ಉಳಿಯು ತ್ತವೆ. ಆ ದೃಷ್ಟಿಯಿಂದ ಚೈನಾ ಒಂದು ಎಕ್ಸೆಂಪ್ಲರಿ ಕಂಟ್ರಿ, ಪ್ರತಿಯೊಂದು ಮನೆಯಲ್ಲೂ ಈ ಪ್ಲಾಂಟ್ ಇದೆ, ಅದರಿಂದ ಅವರಿಗೆ ಎಲೆಕ್ಟ್ರಿಸಿಟಿಯೆಲ್ಲ ಇಂಡಸ್ಟ್ರಿಯಲ್ ಪರ್ಪಸ್‌ಗೆ ಉಪಯೋಗ ಮಾಡುವುದಕ್ಕಾಗಿದೆ. ಇಂಡಿಯಾದಲ್ಲಿ ಇವತ್ತಿನ ಸ್ಥಿತಿಯಲ್ಲಿ ಯಾವ ಮಾರ್ಗ ಹಿಡಿಯಬೇಕು ? ಹೈಡೆಲ್ ಡ್ಯಾಮ್ ಕಟ್ಟಿದರೆ ಪರಿಸರ ಸಮತೋಲನ ಕೆಡುತ್ತದೆ ನಿಜ, ಆದರೆ ಎಲೆಕ್ಟ್ರಿಸಿಟಿಯನ್ನು ಎಲ್ಲಿಂದ ತರುವುದು ? ಬಹಳ ಕಡಿಮೆ ಪ್ರದೇಶವನ್ನು ಮುಳುಗಡೆ ಮಾಡಿ ಹೆಚ್ಚು ಲಾಭ ಪಡೆಯುವ ಯೋಜನೆಗಳೂ ಇವೆ. ಹಿಮಾಚಲ ಪ್ರದೇಶದ ಕಡೆ ಅವರಿಗಿರುವ ಫಾಲ್ಸ್ ಏನಿವೆ ಅವುಗಳ ಮೂಲಕ ಉತ್ಪತ್ತಿ ಮಾಡಲಾಗುತ್ತಿದೆ. ನಾನು ಒಟ್ಟಾರೆ ಈ ದೇಶದಲ್ಲಿರುವ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಯಾರು ಏನೇ ಮಾಡಿದರೂ...

ಶ್ರೀ ಬಿ. ಬಸವಲಿಂಗಪ್ಪ.—ಇವರು ಮಂತ್ರಿಗಳಿದ್ದಾರೆ, ಸರ್ಕಾರ ನಡೆಸುತ್ತಿರುವವರು. ಇವರು ಮಾಡುವುದನ್ನೆಲ್ಲ ಹಾಗೆ ಮಾಡಬಾರದು, ಹೀಗೆ ಮಾಡಬಾರದು ಎಂದು ನಾವು ಹೇಳುತ್ತಿದ್ದೇವೆ ಎನ್ನುವುದು ಇವರ ವಾದ. ಸ್ವಾಮಿ, ನೀವು ಎಷ್ಟು ಉತ್ಪತ್ತಿ ಹೇಗೆ ಮಾಡಬೇಕೆಂದಿದ್ದಿರೋ ಹಾಗೆ ಮಾಡಿ, ನಮ್ಮ ಪಾರ್ಟಿಯಿಂದತೂ ನೀವು ಮಾಡಬೇಡಿ ಎಂದು ಹೇಳುವುದಿಲ್ಲ,

ಶ್ರೀ ಜೆ.ಎಚ್. ಪಟೇಲ್.—ದಿಲ್ಲಿಯಲ್ಲಿರುವ ಜನ ನಮ್ಮ ಕಾಲು ಹಿಡಿದು ಎಳೆಯದಿದ್ದರೆ ಸಾಕು. ಅಷ್ಟು ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಸಹಾಯ ಯಾವುದು ಬೇಕು ಕೇಳಿ. ನಾವು ನಿಮ್ಮ ಕಾಲು ಹಿಡಿದದ್ದು ಯಾವಾಗ ; ಎಳೆದದ್ದು ಯಾವಾಗ ?

ಶ್ರೀ ಆರ್. ವೆಂಕಟರಾಮಯ್ಯ.—ಯಲಹಂಕ ಪ್ರಾಜೆಕ್ಟ್ ಬಗ್ಗೆ ಸ್ಪೆಸಿಫಿಕ್ ಆಗಿ ಕೇಳಿದ್ದರು.

ಶ್ರೀ ಜೆ.ಹೆಚ್. ಪಟೇಲ್.—ನಾನು ಉತ್ತರ ಹೇಳುವಾಗ ಈ ರೀತಿ ಮಧ್ಯ ಪ್ರವೇಶಿಸಿದರೆ ಕಷ್ಟವಾಗುತ್ತದೆ. ಪ್ರಾಜೆಕ್ಟ್‌ಗಳ ಬಗ್ಗೆ ಪಾಲಿಸಿ ಬಗ್ಗೆ ಹೇಳುವಾಗ ತೊಂದರೆಯಾಗುತ್ತದೆ. ಅನಿವಾರ್ಯವಾಗಿ ನಾವು ಇವತ್ತು ವಿದ್ಯುತ್ತಿನ ಮೇಲೆ ಅವಲಂಬಿಸಬೇಕಾಗಿದೆ ಇದು ನಮ್ಮ ರಾಜ್ಯದಲ್ಲಿ ಅನಿವಾರ್ಯವಾಗಿದೆ. ಬೇರೆ ಯಾವುದೋ ರಾಷ್ಟ್ರವನ್ನು ಗಮನದಲ್ಲಿಟ್ಟು ಕೊಂಡು ಹೇಳುವುದಾದರೆ ಅದು ಅತ್ಯಂತ ಅವ್ಯವಹಾರಿಕವೆಂದು ಅನ್ನಿಸುತ್ತದೆ. ಅವೈಜ್ಞಾನಿಕವೆಂದು ನಾನು ಹೇಳುತ್ತಿಲ್ಲ. ವಿಜ್ಞಾನಿಗಳು ಆಗಲೇ ಭರವಸೆ ಕೊಟ್ಟಿದ್ದಾರೆ ಅದರಿಂದ ಅಪಾಯವಾಗತಕ್ಕಂಥಾದ್ದು ಕೇವಲ ಒಂದು ಮಿಲಿಯನ್ ಜನಸಂಖ್ಯೆಗೆ ಮಾತ್ರ ಎಂದು ಆದರೆ ಅಕಸ್ಮಾತ್ ಅಪಾಯವಾದರೆ ಏನೂ ಮಾಡುವುದಕ್ಕಾಗುವುದಿಲ್ಲ ರಷ್ಯಾದಲ್ಲಿನ ವಿದ್ಯುತ್ ಸ್ಥಾವರ ಲೀಕ್ ಆದರೂ ಕೂಡ ಸಾಯುತ್ತೇವೆ ಅವರ ಸ್ಥಾವರ ಲೀಕ್ ಆಗಿ ಸಾಯುವುದರ ಬದಲಾಗಿ ನಮ್ಮ ಸ್ಥಾವರ ಲೀಕ್ ಆಗಿ ಇನ್ನು ಒಂದು ಲಕ್ಷ ವರ್ಷದ ನಂತರ ಸತ್ತರೆ ಸಾಯಬಹುದು ಅಷ್ಟೇ ಇದು ಬಹಳ ಘನ ಘೋರವಾಗಿದೆ ಆದರೆ ಅದನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕೆ, ಕೃಷಿ ಮತ್ತು ದಿನನಿತ್ಯದ ಜೀವನದ ಅವಶ್ಯಕತೆಯಾಗಿರತಕ್ಕಂತಹ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡದೇ ಇರುವುದಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿ ಇವತ್ತು ನಮ್ಮ ಜನ ಜೀವಾಳವಾಗಿದೆ. It is the life source and life blood of the human society. ಅಂತಹ ಸ್ಥಿತಿಯಲ್ಲಿ ನಾವು ಇದಕ್ಕೆ ಗಮನ ಕೊಟ್ಟಿದ್ದೇವೆ, ಕೈಗಾ ಕೆಲಸ ನಡೆಯುತ್ತಿದೆ ಇದರ ಬಗ್ಗೆ ನ್ಯಾಷನಲ್ ಡಿಬೇಟ್ ನಡೆಯುತ್ತಿದೆ ನಮ್ಮ ದೇಶದಲ್ಲಿ ಡಿಬೇಟ್ ನಡೆಯುತ್ತಿದೆ, ಆದರೆ ಅದರ ಬಗ್ಗೆ ನಾವು ತಪ್ಪು ಅಭಿಪ್ರಾಯಗಳನ್ನು ಖಂಡಿತಾ ಇಟ್ಟುಕೊಳ್ಳುವುದಿಲ್ಲ. ಅವರ ವಿಚಾರಗಳನ್ನೂ ಕೂಡ ಕೇಳೋಣ. ಜನರಿಗೆ ಕೆಲಸ ಸಿಗುವಂತಹ ಉದ್ಯಮಗಳಾಗದೆ, ನಮ್ಮ ಕೃಷಿ ಉತ್ಪಾದನೆ ಹೆಚ್ಚಾಗಿ ಆಗದೆ ನಮ್ಮಲ್ಲಿ ಹಸಿವು ಹೆಚ್ಚಾಗಿ ಬಡತನದಿಂದ ಒಬ್ಬರನ್ನೊಬ್ಬರು ಕೊಂದು ಸಾಯಬೇಕಾದ ಸ್ಥಿತಿ ಬಂದಿದೆ. ಈ ಸಮಾಜದಲ್ಲಿರತಕ್ಕಂಥ ಜನರಿಗೆ ಕೆಲಸ ಸಿಗಬೇಕು ; ಈ ಭೂಮಿಯಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕು ಮತ್ತು ಜನರ ಹೊಟ್ಟೆ ಬಟ್ಟೆ ನೋಡಿಕೊಳ್ಳಬೇಕೆಂದರೆ ಈ ಎನರ್ಜಿಯನ್ನು ಉಪಯೋಗ ಮಾಡಿಕೊಳ್ಳುವುದು ಅನಿವಾರ್ಯ. ಆ ದೃಷ್ಟಿಯಿಂದ ನಮ್ಮ ಸರಕಾರ ಇವುಗಳ ಸೂಕ್ಷ್ಮ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಯಾವುದೇ ಪ್ರಾಜೆಕ್ಟ್ ಅನ್ನಾಗಲೀ ಹಣದ ಕೊರತೆಯಿಂದ ಕೆಲಸ ನಿಲ್ಲಿಸಿಲ್ಲ. ಈಗಲೂ ಹೇಳುತ್ತೇನೆ ವಿದ್ಯುಚ್ಛಕ್ತಿ ಕೈಗಾರಿಕೆಯ ಯೋಜನೆಯನ್ನು ಏನು ಕೈಗೆ ತೆಗೆದುಕೊಂಡಿದ್ದೇವೆ ಅವುಗಳಿಗೆ ಏನೇ ಕೊರತೆಯಿದ್ದರೂ ಬೇರೆ ಕೆಲಸವನ್ನು ನಿಲ್ಲಿಸಿಯಾದರೂ ಮಾಡುತ್ತೇವೆ. ಅದನ್ನು ಮಾಡದೇ ಹೋದರೆ ೧೯೯೦ರ ನಂತರ ಅಥವಾ ೨೦೦೦ ಇಸವಿಯ ನಂತರ ತೊಂದರೆಯಾಗುತ್ತದೆ. ನಾವು ಏನು ಯೋಜನೆಗಳನ್ನು ಕೈಗೆ ಎತ್ತಿಕೊಂಡಿದ್ದೇವೆ ಆ ಯೋಜನೆಗಳನ್ನು ಕಾರ್ಯಗತಗೊಳಿಸದಿದ್ದರೆ ೧೯೯೦ಕ್ಕೆ ಬಹಳ ತೊಂದರೆಯಾಗುತ್ತದೆ. ೮ನೇ ಯೋಜನೆಯಲ್ಲಿ ೧೦೦೦ ಮೆಗಾವ್ಯಾಟ್ ಅನ್ನು ಇನ್‌ಕ್ರೀಸ್ ಮಾಡುತ್ತೇವೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗ ಕೆಲಸ ಪ್ರಾರಂಭ ಮಾಡಿದ್ದೇವೆ. ಆದರೂ ಕೂಡ ೯ನೇ ಯೋಜನೆಯಲ್ಲಿ ಕನಿಷ್ಠ ಪಕ್ಷ ಎರಡೂವರೆ ಸಾವಿರ ಮೆಗಾವ್ಯಾಟ್ ಕೊರತೆಯಾಗುತ್ತದೆ ಎಕ್ಸ್‌ಪರ್ಟ್ ಕಮಿಟಿಗಳ ಪ್ರಕಾರ. ೧೦ನೇ ವರ್ಷದಲ್ಲಿ ೩೫೦೦ ಮೆಗಾವ್ಯಾಟ್ ಅನ್ನು ಉತ್ಪಾದನೆ ಮಾಡಬಹುದು. ಇದನ್ನು ಮಾಡದಿದ್ದರೆ ಇಂಡಿಯಾ ದೇಶದಲ್ಲಿ ವಿದ್ಯುಚ್ಛಕ್ತಿ ಕೊರತೆ ಹೆಚ್ಚಾಗುತ್ತದೆ ಕರ್ನಾಟಕ ರಾಜ್ಯದಲ್ಲಂತೂ ಇನ್ನೂ ಹೆಚ್ಚಾಗುತ್ತದೆ ಆ ದೃಷ್ಟಿಯಿಂದ ಬಹಳ ತ್ವರಿತವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ರೆಗ್ಯುಲಾರಿಟಿ ಆಫ್ ಸಪ್ಲೈ, ಕ್ವಾಲಿಟಿ ಆಫ್ ಎಲೆಕ್ಟ್ರಿಸಿಟಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಕನಿಷ್ಠ ಪಕ್ಷ ೬ ಗಂಟೆಯಾದರೂ ಸರಿಯಾಗಿ ಎಲೆಕ್ಟ್ರಿಸಿಟಿ ಕೊಡಿ ನಡುವೆ ಆಫ್ ಮಾಡುವುದು ಬೇಡ ಎಂದು ಹೇಳುತ್ತಾರೆ ನಡುವೆ ಆಫ್ ಆಯಿತು ಟ್ರಿಪ್ ಆಯಿತು ಎಂದು ಎಲ್ಲಾ ಹೇಳುತ್ತಾರೆ ; ಎಷ್ಟು ಗಂಟೆ ಲೋಡ್ ಷೆಡ್ಡಿಂಗ್ ಮಾಡಿದ್ದೀರಿ ಎಂಬುದು ಮುಖ್ಯವಲ್ಲ ; ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ ಎಂಬುದು ಮುಖ್ಯವೆಂದು ಹೇಳುತ್ತಾರೆ. ನಾನು ಸ್ವತಃ ಇರಿಗೇಷನ್ ಪಂಪ್ ಹಾಕಿದ್ದೇನೆ; ನಿಮ್ಮದೂ ಎಲ್ಲ ಇದೆ. ಟೆಕ್ನಿಕಲ್ ಎಕ್ಸ್‌ಪ್ಲನೇಷನ್ ನನಗಂತೂ ಕೊಡುವುದಕ್ಕಾಗುವುದಿಲ್ಲ. ಏಕೆ ಹೀಗೆಲ್ಲಾ ಆಗುತ್ತಿದೆಯೆಂದರೆ ನಮಗೆ ಬೇಕಾದಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ನಮ್ಮ ಬೇಡಿಕೆಯಷ್ಟು ಉತ್ಪಾದನೆ ಇಲ್ಲ. ನಮ್ಮ ಉತ್ಪಾದನೆ ಇರುವುದು ೩೫೦೦ ಮೆಗಾವ್ಯಾಟ್ ಅಷ್ಟಿದೆ. ನಮ್ಮ ಬೇಡಿಕೆ ಇರುವುದು ನಾಲ್ಕು ಸಾವಿರ ಮೆಗಾವ್ಯಾಟ್ ನಮಗೆ ಈಗ ಹೆಚ್ಚು ಬೇಕು ಅಂದರೆ unrestricted power ಕೊಡಬೇಕು ಎಂದರೆ ಹೆಚ್ಚು ಕಡಿಮೆ ೪೦ ಪರ್ಸೆಂಟ್ ಕೊರತೆ ಇದೆ ಆಂಧ್ರಕ್ಕೂ ಇದೆ ನಮಗೂ ಇದೆ, ತಮಿಳುನಾಡಿಗೂ ಇದೆ. ೪೦ ಪರ್ಸೆಂಟ್ ಕೊರತೆ ಇರುವಾಗ ಹೇಗೆ ಆಗುತ್ತದೆ ಎಂದರೆ

ಎಲ್ಲೋ ಒಂದು ಕಡೆ ಬಹಳ ಹೆವಿ ಲೋಡ್ ಷೆಡ್ಡಿಂಗ್ ಇರತಕ್ಕಂಥ ಸೆಂಟರ್‍ಸ್ ಇರುತ್ತದೆ. ಹೆಚ್ಚು ಲೋಡ್ ಬಂದಾಗ ಅಲ್ಲಿ ಅವರ ಡಿಮ್ಯಾಂಡ್ ಜಾಸ್ತಿಯಾದಾಗ ಸಿಸ್ಟಂ ತಾನೇ ತಾನಾಗಿ ಎಲ್ಲೋ ಒಂದು ಕಡೆ ಬ್ರೇಕ್ ಆಗುತ್ತದೆ. ಅಲ್ಲಿ ರಾಮಂಗೊಂಡಂನಲ್ಲಿ ಆಗಬಹುದು. ಏಕೆಂದರೆ ನಾವು ಅವರಿಂದ ಪವರನ್ನು ತೆಗೆದುಕೊಳ್ಳುತ್ತೇವೆ ಮತ್ತೊಂದು ಕಡೆ ಆಗಬಹುದು. ಎಲ್ಲೋ ಒಂದು ಕಡೆ ಆಗಬಹುದು. ಆದರೆ ಸಿಸ್ಟಂ ಅಷ್ಟು ಚೆನ್ನಾಗಿಲ್ಲ. ಟ್ರಾನ್ಸ್‌ಮಿಷನ್ ಲಾಸ್ ಎಂದು ಏನು ಕರೆಯುತ್ತೇವೆ ಟ್ರಾನ್ಸ್‌ಮಿಷನ್ ಲಾಸ್ ಅಷ್ಟು ಇಲ್ಲ. ನಮ್ಮದು ೨೧.೫ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್. ಆಕ್ಚುಯಲ್ ಅಷ್ಟು ಲಾಸ್ ಇಲ್ಲ. ಈಗ ಹಲವಾರು ಅಂಶಗಳನ್ನು ಒದಗಿಸಿದ್ದೇವೆ. ಪವರ್ ಥೆಫ್ಟ್ ಇದೆ. ಆಮೇಲೆ some industries can adopt captive power system and methods to save power. ಇದನ್ನು ನಾವು ಮಾಡುತ್ತಿಲ್ಲ. ಹೆಚ್ಚಿನ ತಂತ್ರಜ್ಞತೆಯನ್ನು ನಾವು ಪವರ್ ಸೇವ್ ಮಾಡುವುದಕ್ಕೆ ಕಂಡುಹಿಡಿಯಬೇಕು ಆ ದೃಷ್ಟಿಯಿಂದ ಈ ನಾಲ್ಕು ವರ್ಷಗಳಲ್ಲಿ maximum service to the people ಮಾಡಿದ್ದೇವೆ. Whether it is I P. sets or village electrification. ಆ ಮೇಲೆ ಭಾಗ್ಯಜ್ಯೋತಿ ಬಗ್ಗೆ ಹೇಳಿದರು. ಅದು ಗೌರ್ನಮೆಂಟ್ ಆಫ್ ಇಂಡಿಯಾದಿಂದ ಬರುತ್ತದೆ. ಆಮೇಲೆ ಬೇರೆ ಬೇರೆ ಸಂದರ್ಭಗಳಲ್ಲಿ ಇಂಡಸ್ಟ್ರಿಗಳ ಬಗ್ಗೆ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ, ಅವನ್ನು ಮಿಸ್-ಯುಟಿಲೈಸ್ ಮಾಡಿದ್ದೀರಿ ಎಂದು ಹೇಳಿದರು. ಏತಕ್ಕೆ ಹಾಗೆ ಮಾತನಾಡಿದರೋ ನನಗಂತೂ ಗೊತ್ತಿಲ್ಲ. ಬೇರೆ ಯಾರಾದರೂ ಮಾತನಾಡಿದ್ದರೆ ಅವರಿಗೆ ಗೊತ್ತಿಲ್ಲ ಎಂದು ತಿಳಿದುಕೊಳ್ಳುತ್ತಿದ್ದೆ. ಅವರು ಫೈನಾನ್ಸ್ ಮಿನಿಸ್ಟರ್ ಆಗಿದ್ದವರು, ಆ ಪಕ್ಷದಲ್ಲಿ ಇದ್ದವರು. ಸಾಕಷ್ಟು ಓದಿ ಮಾತನಾಡತಕ್ಕಂಥವರು, ಸೆಂಟ್ರಲ್‌ನವರ ಸಬ್ಸಿಡಿ ಮೊದಲ ಕೆಲಸ ನಾವು ಹಂಚುವುದಲ್ಲ. ನಾವು ಇಲ್ಲಿ ಖರ್ಚು ಮಾಡಿದ ಮೇಲೆ ಇಲ್ಲಿಯ ಲೆಕ್ಕ ನೋಡಿ ಪರ್ಸೆಂಟ್‌ನ್ನು ರೀ-ಇಂಬರ್ಸ್ ಮಾಡುತ್ತಾರೆ. ಇಲ್ಲಿ ಮಿಸ್ ಯುಟಿಲೈಸ್ ಎಲ್ಲಿ ಬಂತು. ಅವರು ಕೊಟ್ಟಿದ್ದು ತೆಗೆದುಕೊಂಡು ಬಂದು ಪಂಚೆ ಸೀರೆಗೆ ಕೊಟ್ಟಿದೆ ಎಂದು ಮಾತನಾಡಿದರು.

ಶ್ರೀ ಎಸ್. ಬಂಗಾರಪ್ಪ.—ಕಡಿಮೆ ಖರ್ಚು ಮಾಡಿ ಹೆಚ್ಚು ಲೆಕ್ಕ ತೋರಿಸಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ?

ಶ್ರೀ ಜೆ.ಹೆಚ್. ಪಟೇಲ್ —ಆ ಕಸುಬು ನಮಗೆಲ್ಲಿ ಬರುತ್ತದೆ ; ನಾವು ಆ ರೀತಿ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಹತ್ತು ರೂಪಾಯಿ ಖರ್ಚು ಮಾಡಿ ಕೇಂದ್ರ ಸರ್ಕಾರದಿಂದ ೧೮ ರೂಪಾಯಿಯನ್ನು ವಸೂಲು ಮಾಡುತ್ತೀರಿ.

ಶ್ರೀ ಜೆ. ಹೆಚ್. ಪಟೇಲ್ —ಅವರೂ ವೆರಿಫೈ ಮಾಡುತ್ತಾರೆ. ನಾವು ಹತ್ತು ರೂಪಾಯಿ ಖರ್ಚು ಮಾಡಿ ಹದಿನೆಂಟು ರೂಪಾಯಿ ಎಂದು ಹೇಳಿದರೆ ಅವರು ಒಪ್ಪಿಕೊಳ್ಳುತ್ತಾರೇನು ? ಅವರೇನು ಅಷ್ಟು ದಡ್ಡರೇನು ?

ಶ್ರೀ ಎಸ್, ಬಂಗಾರಪ್ಪ.—ಅಂಥವರಿಗೂ ನಾಮ ಹಾಕುವವರು ನೀವು.

ಶ್ರೀ ಜೆ. ಹೆಚ್. ಪಟೇಲ್.—ನಾವು ೧೫ ರೂಪಾಯಿ ಖರ್ಚು ಮಾಡಿದ್ದೇವೆ ಎಂದರೆ ಅವರು ನೀವು ಖರ್ಚು ಮಾಡಿರುವುದೇ ಹತ್ತು ರೂಪಾಯಿ ಎಂದು ಹೇಳುತ್ತಾರೆ. ಆದ್ದರಿಂದ ಪವರ್ ಸೆಕ್ಟರ್ ಬಗ್ಗೆ ನಂಬರ್ ವನ್ ಪ್ರೈಯಾರಿಟಿಯನ್ನು ಕೊಡುತ್ತೇವೆ. ಇನ್ನು ಮುಂದೆಯೂ ಕೊಡುತ್ತೇವೆ. ಆನ್-ಗೋಯಿಂಗ್ ಪ್ರಾಜೆಕ್ಟ್ಸ್ ಏನು ಇದ್ದಾವೆ, ಅವು ಯಾವುದನ್ನೂ ನಿಲ್ಲಿಸಿಲ್ಲ. ಹಾಕಿರುವ ಷೆಡ್ಯೂಲ್ ಪ್ರಕಾರ ಪ್ರೊವೈಡೆಡ್ ಪ್ರಾಕೃತಿಕ ಅಡ್ಡಿ ಆತಂಕಗಳು ಬಾರದೇ ಇದ್ದರೆ, ಈ ವರ್ಷ ಶುರು ವಾಗಿದೆ, ನಮ್ಮ ಜಲಾಶಯಕ್ಕೆ ಸರಿಯಾಗಿ ನೀರು ಬಂದರೆ ಪರಿಸ್ಥಿತಿ ಸಂಧಾರಿಸಬಹುದು. ಇವತ್ತು ನಮ್ಮ ಲಾಸಸ್, ಕೆ ಇ.ಬಿ. ಅಥವಾ ಕೆ ಪಿ.ಸಿ. ಲಾಸಸ್ ಏನು ಇದೆ, ಇವುಗಳು ನೀರಿನಿಂದಲೇ ಜೀವನ ಮಾಡತಕ್ಕಂಥ ಸಂಸ್ಥೆಗಳಾಗಿವೆ. ರಾಯಚೂರಿನ ಎರಡು ಯೂನಿಟ್‌ಗಳು ಚೆನ್ನಾಗಿ ನಡೆಯುತ್ತಿವೆ. ರಾಯಚೂರ್ ಥರ್ಮಲ್‌ನ ಮೂರನೇ ಯೂನಿಟ್‌ನ ಕೆಲಸವನ್ನು ಶುರು ಮಾಡಿದ್ದೇವೆ ಅದನ್ನು ಬಿ ಹೆಚ್ ಇ ಎಲ್. ನವರಿಗೆ ಕೊಟ್ಟಿದ್ದೇವೆ. ರಾಯಚೂರ್ ಸ್ಟೇಜ್ ೨ ಒಟ್ಟು ರಾಯಚೂರಿನ ಪ್ರಾಜೆಕ್ಟ್‌ನಲ್ಲಿ ಮೂರು ಸ್ಟೇಜ್‌ಗಳು ಇವೆ. ಫಸ್ಟ್ ಸ್ಟೇಜ್‌ನಲ್ಲಿ there are two units which are already working satisfactorily ಸೆಕೆಂಡ್ ಸ್ಟೇಜ್ ಎರಡು ಯೂನಿಟ್ ಆಗಿದೆ. ಮೂರನೇ ಯೂನಿಟ್‌ನ ಕೆಲಸ ಶುರುವಾಗಿದೆ. ಅದನ್ನು ಬಿ ಹೆಚ್. ಇ ಎಲ್. ನವರಿಗೆ ಕೊಟ್ಟಿದ್ದೇವೆ,

ಹಣವನ್ನು ಕೊಟ್ಟಿದ್ದೇವೆ, ಕೆಲಸವನ್ನು ಶುರು ಮಾಡಿದ್ದಾರೆ. ಅಲ್ಲಿ ಇನ್ನೂ ಏನೂ ಆಗಿಲ್ಲ ಎಂದು ಹೇಳಿದಿರಿ. We have posed it to overseas economic co-operation Fund from Japan.

೧೦–೦೦ ಎ. ಎಂ.

ಅಷ್ಟು ಒಪ್ಪಿಕೊಂಡಿದ್ದಾರೆ. ೨೬ ಕೋಟಿ ರೂಪಾಯಿಗಳ ಲೋನ್ ಕೊಡುವುದಕ್ಕೆ ತಯಾರು ಇದ್ದಾರೆ, ಕೆಲಸ ಶುರು ಮಾಡುತ್ತೇವೆ, ಕೋಲ್ ಲಿಂಕೇಜ್ ಫ್ರಂ ಶಿಂಗರೇಣಿ ಪ್ರಾರಂಭ ಆಗಿಲ್ಲ ಎಂದು ಹೇಳಿದ್ದಾರೆ, ಹಾಗೆ ಹೇಳುವುದು ಸರಿಯಲ್ಲ. ಸಣ್ಣ ಪುಟ್ಟ ತಪ್ಪುಗಳು ಆಗಿರಬಹುದು. ವಾರಾಹಿ ಬಗ್ಗೆ ಹೇಳಿದ್ದಾರೆ. ಪ್ರಾರಂಭದಲ್ಲಿ ಕಾರಣಾಂತರಗಳಿಂದ ಡಿಲೇ ಆಯಿತು. ಈಗ ಎರಡು ವರ್ಷದಲ್ಲಿ ಶೆಡ್ಯೂಲ್‌ಗಿಂತ ಮುಂಚೆ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳುವುದು ಆನ್ ಗೋಯಿಂಗ್ ವರ್ಕ್ಸ್ ಏನು ಇವೆ, ಅವು ಮಲ್ಟಿಪರ್‌ಪಸ್ ಆಗಿವೆ, ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ. ಕಳೆದ ವರ್ಷ ಮತ್ತು ಈ ವರ್ಷ ಎಷ್ಟು ಹಣ ಇಟ್ಟಿದ್ದೀರಿ ಎಂದು ಹೇಳಿದರೆ ನಮಗೆ ಡಿಫರೆನ್ಸ್ ಸ್ವಲ್ಪ ತಿಳಿಯುತ್ತದೆ.

SRI J. H. PATEL.—Total plan as such is cut not only in Karnataka, but in all other States, for many different reasons. I don't attribute any motive. When there is a cut in the total plan outlay, there will be proportinate cut in allsectors. ಎಷ್ಟು ಕಟ್ ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ. ನಿಮಗೆ ಬೇಕಾದರೆ ಫಿಗರ್ಸ್ ಕೊಡುತ್ತೇನೆ. ವಾರಾಹಿ ಬಗ್ಗೆ ಹೇಳಿದ್ದೇನೆ, ಶರಾವತಿ ಟೈಲ್ ರೈಸ್ ಪ್ರಾರಂಭ ಆಗಿದೆ. ಕೊಡಸಲಹಳ್ಳಿ ಕೆಲಸ, ಖದ್ರಾ ಕೆಲಸ ಪ್ರಾರಂಭ ಆಗಿದೆ. ಹೀಗಾಗಿ ಯಲಹಂಕ ನೆನೆಗುದಿಗೆ ಬಿದ್ದಿದೆ. ೩೩ : ೩೩ ಮೆಗಾವ್ಯಾಟ್ಸ್‌ನ ಳ ಡೀಸೆಲ್ ಜನರೇಟಿಂಗ್ ಸೆಟ್ಸ್‌ಗೆ ಏರ್ಪಾಡು ಮಾಡಿದ್ದೇವೆ. ಯಾಕೆಂದರೆ ಪವರ್ ಸಿಸ್ಟಂ ರೈಗ್ಯುಲರೈಸ್ ಮಾಡಲು ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಅಪ್ಲೈ ಮಾಡಿ ಪ್ರಾಜೆಕ್ಟ್ ಕಳಿಸಿ ಮೂರು ವರ್ಷ ಆಯಿತು, ಕೆ.ಇ.ಬಿ. ೧೨೦ ಮೆಗಾವಾಟ್ಸ್ ಸ್ಟೇಷನ್ ಅಪ್ರೂವ್ ಮಾಡುವುದೇ ಒಂದು ದೊಡ್ಡ ರಾದ್ಧಾಂತ ಆಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಉತ್ತರ ಹೇಳುವಾಗ ಮುಂದಕ್ಕೆ ಹೋಗಬೇಡಿ. ಸೆಂಟ್ರಲ್ ಗವರ್ನಮೆಂಟ್ ಪ್ಲಾಂಟ್ ಕಟ್ ಮಾಡಿದ್ದಾರೆಂದು ಹೇಳುತ್ತೀರಿ, ೧೯೮೭–೮೮ರಲ್ಲಿ ೯೧೭ ಕೋಟಿ ರೂಪಾಯಿನಲ್ಲಿ ಇವರು ಖರ್ಚು ಮಾಡಿರುವುದು ೧೭೭ ಕೋಟಿ ರೂಪಾಯಿಗಳು. ಇದಕ್ಕೆ ಯಾರು ಜವಾಬ್ದಾರಿ ಆಗುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ವಾರಾಹಿಗೆ ಸೆವೆಂತ್ ಪ್ಲಾನ್‌ನಲ್ಲಿ ೩೧.೪೮ ಕೊಟ್ಟಿದ್ದರೆ ಇಲ್ಲಿಯ ವರೆಗೆ ಇದರಲ್ಲಿ ಖರ್ಚು ಮಾಡಿರುವುದು ೩೯.೦೬ ಕೋಟಿ ರೂಪಾಯಿಗಳು. ಇವುಗಳಿಗೆ ೯ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ವಿದ್ಯುತ್ ಸರಬರಾಜು ಸಿಸ್ಟಂಗೋಸ್ಕರ ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ಸಿಸ್ಟಂ ಅನ್ನು ಇಂಪ್ರೂವ್ ಮಾಡಲು ವರ್ಲ್ಡ್ ಬ್ಯಾಂಕ್‌ನಿಂದ ಲೋನ್ ಬರುತ್ತದೆ, ಒಂದು ಸಾವಿರ ಕೋಟಿ ರೂಪಾಯಿ ಜಪಾನ್ ಮತ್ತು ವರ್ಲ್ಡ್ ಬ್ಯಾಂಕಿನಿಂದ ಬರಬೇಕಾಗಿದೆ ಇವುಗಳಿಗೆ ೨೬೦ ಕೋಟಿ ರೂಪಾಯಿ ಕೊಟ್ಟರೆ ಇವುಗಳನ್ನು ಕಾರ್ಯಗತ ಮಾಡಬಹುದು ಎಂಬ ವಿಶ್ವಾಸ ನನಗೆ ಇದೆ. ನಮಗೆ ಸೆವೆಂತ್ ಪ್ಲಾನ್ ಎಂಡ್ ಹೊತ್ತಿಗೆ ಒಂದು ಸಾವಿರ ಮೆಗಾವ್ಯಾಟ್ಸ್ ಆಡ್ ಮಾಡುತ್ತದೆ. ಎಂಟನೇ ಪ್ಲಾನ್ ಎಂಡ್ ಹೊತ್ತಿಗೆ ಎರಡೂವರೆಯಿಂದ ೩ ಸಾವಿರ ಮೆಗಾವ್ಯಾಟ್ಸ್ ಆಡ್ ಮಾಡುವ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಇನ್ನೂ ಕೆಲವನ್ನು ಕೊಡಬೇಕು. ಸೂಪರ್ ಥರ್ಮಲ್ ಪವರ್ ಪ್ಲಾಂಟ್ ಬಗ್ಗೆ ಹೇಳುವುದಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಂಗಾರ, ಗಂಧ, ಕಬ್ಬಿಣ ಎಲ್ಲಾ ಇದೆ. ಇದು ಉತ್ಕೃಷ್ಟವಾಗಿದೆ. ಆದರೆ ಕೋಲ್, ಇಲ್ಲ, ಗ್ಯಾಸ್ ಇಲ್ಲ, ಆಯಿಲ್ ಇಲ್ಲ. ವಿದ್ಯುಚ್ಛಕ್ತಿ ಉತ್ಪಾದನೆಗೆ ಬೇಕಾಗಿರುವುದು ಕೋಲ್, ಗ್ಯಾಸ್ ಅಥವಾ ಆಯಿಲ್. ಇವೊತ್ತು ಬಾಂಬೇ ಹೈನಲ್ಲಿ ಎಷ್ಟು ಗ್ಯಾಸ್ ವೇಸ್ಟ್ ಆಗುತ್ತಿದೆ. ಅಸ್ಸಾಮಿನಿಂದ ಹೆಚ್‌ಪಿ ಲೈನ್ ಗ್ಯಾಸ್ ಇಟ್ಟುಕೊಂಡು ನೀವು ವೆಸ್ಟರ್ನ್ ಪಾರ್ಟ್ ಆಫ್ ಇಂಡಿಯಾ

ವರೆಗೆ ಎಳೆದಿದ್ದೀರಿ, ಆದರೆ ಸೌತ್ ಇಂಡಿಯಾಗೆ ಎಳೆದಿಲ್ಲ. ನಾವು ಸೌತ್ ಇಂಡಿಯಾಗೆ ಲೈನ್ ಹಾಕಿ ಎಂದು ಕೇಳುತ್ತಿದ್ದೇವೆ. ಹೋದ ಸಾರಿ ವಿದ್ಯುತ್ ಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಿದಾಗ ಕೆಲವು ಸೂಚನೆಗಳನ್ನು ಮಾಡಿದ್ದೇನೆ. ಕೇಂದ್ರ ಸರ್ಕಾರದವರು ಇದನ್ನು ಪರಿಶೀಲಿಸಬಹುದು ಎಂದು ವಿಶ್ವಾಸ ಇದೆ. ಎಂಟೈರ್ ಸೌತ್ ಇಂಡಿಯನ್ ಸ್ಟೇಟ್ಸ್ ಬಗ್ಗೆ ಕೇಳಿದ್ದೇವೆ. ಕೋಲ್ ಬೇಸ್ಡ್ ಥರ್ಮಲ್ ಪ್ಲಾಂಟ್ ಏನು ಇದೆ, ಇವುಗಳಿಗೆ ಬೇಕಾದಂತಹ ಕೋಲ್ ಸಪ್ಲೈ ನಮ್ಮ ರೈಲ್ವೆ ಸಿಸ್ಟಂ ಮೇಲೆ ಡಿಪೆಂಡ್ ಆಗಿದೆ. ತಮಿಳುನಾಡಿನಲ್ಲಿ ಕೋಲ್ ಸಿಗುತ್ತದೆ. ಪಿಟ್ ಹೆಡ್‌ನಲ್ಲಿ ಪವರ್ ಪ್ಲಾಂಟ್ ಮಾಡಿದ್ದಾರೆ.

ಆದರೆ ನಮಗೆ ಆ ರೀತಿ ಇಲ್ಲ ಅದಕ್ಕಾಗಿ ನಾವು ಏನು ಹೇಳಿದ್ದೇವೆಂದರೆ, ಮಂಗಳೂರು ನಗರ ಬಹಳ ವೇಗದಲ್ಲಿ ಬೆಳೆಯುತ್ತಿರುವ ಔದ್ಯೋಗಿಕ ಕೇಂದ್ರವಾಗುತ್ತಿದೆ, ಆದ್ದರಿಂದ ಇಲ್ಲಿ ಕೋಲ್ ಬೇಸ್ಡ್ ಥರ್ಮಲ್ ಪ್ಲಾಂಟ್ ಪ್ರಾರಭವಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ನಗರ ಮುಂದುವರೆಯುತ್ತದೆಂದು ಕೇಂದ್ರದವರಿಗೆ ಹೇಳಿದ್ದೇವೆ. I think it may be No. 1 centre if this oil Refinery, Super Thermal Plant and Steam Industry, are cleared. ಈಗ ಮಂಗಳೂರಿನಲ್ಲಿ ೪೨೦ ಮೆಗೋವಾಟ್ ಶಕ್ತಿಯ ಥರ್ಮಲ್ ಪ್ಲಾಂಟ್ ಸ್ಥಾಪನೆಗೆ ಜಾಗವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—೪೨೦ ಮೆಗೋವಾಟ್‌ಗೆ ಬದಲು ಒಂದು ಸಾವಿರ ಮೇಗೋ ವಾಟ್ ಶಕ್ತಿಯ ಥರ್ಮಲ್ ಪ್ಲಾಂಟ್‌ಗೆ ತಾವು ಕ್ಲಿಯರೆನ್ಸ್ ಕೇಳಿ.

ಶ್ರೀ ಜೆ. ಎಚ್. ಪಟೇಲ್.—ಈಗ ಸಧ್ಯಕ್ಕೆ ತಲಾ ೨೧೦ ಮೇಗೋವಾಟ್ ಶಕ್ತಿಯ ಎರಡು ಯೂನಿಟ್‌ಗಳ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಕೇಳಿದ್ದೇವೆ. ೫೦೦ ಮೆಗೋವಾಟ್ ಶಕ್ತಿಯ ಮತ್ತೊಂದು ಯೂನಿಟ್‌ನ್ನು ಇದೇ ಜಾಗದಲ್ಲಿ ಮುಂದೆ ಸ್ಥಾಪನೆ ಮಾಡುತ್ತೇವೆ. ಇದೆಲ್ಲಾ ಸೇರಿದರೆ ೧೦೦೦ ಮೆಗೋವಾಟ್ ಆಗುತ್ತವೆ. ಈ ಕೋಲ್ ಬೇಸ್ಡ್ ಥರ್ಮಲ್ ಪ್ಲಾಂಟ್‌ಗೆ ಕೆಲವರು ಹಣ ಕೊಡಲು ತಯಾರಿದ್ದಾರೆ. ಹಣ ಕೊಡಲು ಎನ್ ಆರ್. ಐ. ನವರು ಮುಂದೆ ಬಂದಿದ್ದಾರೆ. ಇವರು ಸುಮಾರು ೪೦ ಕೋಟಿ ರೂಪಾಯಿಗಳಷ್ಟು ಷೇರ್ ಕ್ಯಾಪಿಟಲ್ ಹಾಕಲು ಮುಂದೆ ಬಂದಿದ್ದಾರೆ. ಇಂತಹ ಒಂದು ಪ್ರಾಜೆಕ್ಟನ್ನು ಕೇಂದ್ರದ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇಷ್ಟೊಂದು ಹಣ ತೊಡಗಿಸಲು ಮುಂದೆ ಬಂದಿರುವವರು ಬಹಳ ಧೈರ್ಯಸ್ಥರಿರಬೇಕು.

ಶ್ರೀ ಜೆ. ಎಚ್. ಪಟೇಲ್.—ಮತ್ತೊಂದು ಸಂತೋಷದಾಯಕ ವಿಷಯವೆಂದರೆ, ಈ ಪ್ರಾಜೆಕ್ಟ್‌ಗೆ ಆಗುವ ಖರ್ಚಿನಲ್ಲಿ ಶೇಕಡಾ ೭೦ ರಷ್ಟು ಹಣವನ್ನು ಇನ್‌ವೆಸ್ಟ್ ಮಾಡುತ್ತಿರುವವರು ನಮ್ಮ ಕರ್ನಾಟಕದವರೇ ಆಗಿದ್ದಾರೆ. ಕ್ಯಾಪಿಟಲ್ ಕಾರ್ಪೋರೇಷನ್ ಆಫ್ ಎಸ್. ಆರ್. ಡಿ. ಎನ್ ಯು ಎಸ್. ಎ. ನವರು ಈ ಪ್ರಾಜೆಕ್ಟಿಗೆ ಸಂಬಂಧಪಟ್ಟಂತೆ ಟಾಟಾ ಅವರ ಹತ್ತಿರ ಕನ್‌ಸಲ್ಟ್ ಮಾಡಿದ ನಂತರ ಇದಕ್ಕೆ ಹಣ ಇನ್‌ವೆಸ್ಟ್ ಮಾಡಲು ಒಪ್ಪಿದ್ದಾರೆ. ನಾವು ಇದರ ಕ್ಲಿಯರೆನ್ಸ್‌ಗೆ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ, ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಸಂಬಂಧದಲ್ಲಿ ಬೆಕೆಲ್ ಹಿಂದೂಜಾನ್ ಅವರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಲು ಸಿದ್ಧರಾಗಿದ್ದಾರೆ, ಈ ಸಂಬಂಧದಲ್ಲಿಯೇ Hon'ble Union Minister Sri Vasantha Sathe has said in Parliament "we welcome private investment for Power Sector" ಎಂದು ಏನು ಹೇಳಿದ್ದಾರೆ. ಇದು ಬಹಳ ಸಂತೋಷದ ಸಂಗತಿ ಆಗಿದೆ. ಅವರಾದರೂ ಮುಂದಿನ ವಿಷ್ಯದ ಬಗ್ಗೆ ಆಲೋಚನೆ ಮಾಡಿದ್ದಾರೆ. ಇಲ್ಲಿನ ವಾಸ್ತವಿಕ ಸಂಗತಿ ಎಂದರೆ, ಕೇಂದ್ರದ ಕ್ಲಿಯರೆನ್ಸ್ ಇಲ್ಲದೆ ನಾವು ಒಂದು ಹೆಜ್ಜೆಯನ್ನು ಸಹ ಮುಂದಕ್ಕೆ ಇಡುವುದಕ್ಕೆ ಆಗುವುದಿಲ್ಲ. ಈಗ ನಾವು ಈ ೪೨೦ ಮೆಗೋವಾಟ್ ಶಕ್ತಿಯ ಪ್ರಾಜೆಕ್ಟನ್ನು ಕ್ಲಿಯರೆನ್ಸ್‌ಗಾಗಿ ಕೇಂದ್ರಕ್ಕೆ ಏನು ಕಳುಹಿಸಿಕೊಟ್ಟಿದ್ದೇವೆ, ಅದರಲ್ಲಿ ಯಾವುದೇ ರೀತಿಯ ಲೋಪ ಇಲ್ಲ. ಇದರ ಹಣಕಾಸಿನ ವ್ಯವಸ್ಥೆ ಬಗ್ಗೆ ಸಹ ನಾವು ಅವರಿಗೆ ತಿಳಿಸಿದ್ದೇವೆ. ಇದಕ್ಕೆ ಕೇಂದ್ರದ ಕ್ಲಿಯರೆನ್ಸ್ ಸಿಕ್ಕಿದರೆ ನಾವು ಕೆಲಸ ಪ್ರಾರಂಭ ಮಾಡುತ್ತೇವೆ. ಇದರ ಕೆಲಸ ಮುಗಿಯಲು ೫ ವರ್ಷಗಳಾಗಬಹುದು. ಇಂತಹ ಕೋಲ್ ಬೇಸ್ಡ್ ಪವರ್ ಪ್ರಾಜೆಕ್ಟ್‌ಗಳ ಕೆಲಸ ಮುಗಿಯಲು ಬೇರೆ ಕಡೆಗಳಲ್ಲಿ ೪ ರಿಂದ ೭ ವರ್ಷಗಳವರೆಗೆ

ಸಮಯ ತೆಗೆದುಕೊಂಡಿದೆ. ಈ ಯೋಜನೆಯ ಜೊತೆಗೆ ಕೈಗಾ ಯೋಜನೆಯ ಕೆಲಸ ಸಹ ನಡೆಯುತ್ತಿದೆ. ಇನ್ನೂ ಕೆಲವು ಯೋಜನೆಗಳನ್ನು ಕೇಂದ್ರದ ಒಪ್ಪಿಗಾಗಿ ಏನು ಏನು ಕಳುಹಿಸಿಕೊಟ್ಟಿದ್ದೇವೆ. ಅವುಗಳ ಬಗ್ಗೆ ಕೇಂದ್ರದವರು ಯಾವುದೇ ರೀತಿಯ ತೊಡಕುಗಳನ್ನು ನಿರ್ಮಾಣ ಮಾಡದಿದ್ದರೆ ಮತ್ತು ಬೇಗ ಕ್ಲಿಯರೆನ್ಸ್ ಕೊಟ್ಟರೆ ನಾವು ಅವುಗಳನ್ನು ಜಾಗ್ರತೆ ಮುಗಿಸಲು ಅನುಕೂಲವಾಗುತ್ತದೆ. ಈ .ನೇ ಯೋಜನೆಯಲ್ಲಿ ನಮ್ಮ ಸರ್ಕಾರ ಕೈಕೊಳ್ಳಬೇಕೆಂದಿರುವ ವಿದ್ಯುತ್ ಯೋಜನೆಗಳ ಕೆಲಸಗಳ ಬಗ್ಗೆ ತಿಳಿಸಿದ್ದೇನೆ ಮತ್ತು ಎಷ್ಟು ಹಣವನ್ನು ಪ್ರೊವೈಡ್ ಮಾಡಿದ್ದೇವೆಂಬುದನ್ನು ಸಹ ಹೇಳಿದ್ದೇನೆ. ಇದಕ್ಕಾಗಿ ಬೇರೆ ಕಡೆಯಿಂದ ನಮಗೆ ಬರುವಂತಹ ಸಹಾಯ ಮತ್ತು ಹಣದ ಬಗ್ಗೆ ಸಹ ಹೇಳಿದ್ದೇನೆ, ಆದ್ದರಿಂದ ಈ ವಿದ್ಯುತ್ ಯೋಜನೆಗಳ ಸಲುವಾಗಿ ಇಟ್ಟಿರುವಂತಹ ಬೇಡಿಕೆಗಳನ್ನು ಈ ಸದನ ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಬೇಡ್ತಿ ಪ್ರಾಜೆಕ್ಟ್ ಈಗ ನೆನೆಗುದಿಗೆ ಬಿದ್ದಿದೆ. ಇದು ನೆನೆಗುದಿಗೆ ಬಿದ್ದು ಹಲವಾರು ವರ್ಷಗಳೇ ಆಯಿತು. ಇಕಲಾಜಿಕಲ್ ಇಂಬ್ಯಾಲೆನ್ಸ್ ನೋಡದೆ ಇದನ್ನು ಕಾರ್ಯಗತ ಮಾಡುವುದು ಸರಿಯಲ್ಲ ಎಂದು ಕೆಲವರು ಹೇಳಿದಮೇಲೆ, ಸ್ಥಳೀಯ ಜನರ ವಿರೋಧವೂ ಸಹ ಇದಕ್ಕೆ ಬಂತು. ಇದರ ಹಿನ್ನೆಲೆಯಲ್ಲಿ ಬೇಡ್ತಿ ಯೋಜನೆ ಬಗ್ಗೆ ಈಗ ಸರ್ಕಾರದವರು ಯಾವ ತೀರ್ಮಾನಗಳನ್ನು ಮಾಡಿದ್ದೀರಿ? ಈ ಪ್ರಾಜೆಕ್ಟ್ ವಿಚಾರದಲ್ಲಿ Purely depending upon the merits of the project ನೀವು ಏನಾದರೂ Are you going to take up that project or not ಹಾಗೇನಾದರೂ ಬೇಡ್ತಿ ಪ್ರಾಜೆಕ್ಟ್ ವಿಚಾರದಲ್ಲಿ ನೀವು ಏನಾದರೂ ತೀರ್ಮಾನ ಮಾಡಿದ್ದರೆ ಯಾವ ಸ್ಟೇಜ್‌ನಲ್ಲಿದೆ ಎನ್ನುವುದನ್ನು ಹೇಳಿ.

ಶ್ರೀ ಜೆ. ಹೆಚ್. ಪಟೇಲ್.—ನಾನು ಆಗಲೇ ಹೇಳಿದಹಾಗೆ ಕೆಲವು ಬಹಳ ಯೋಗ್ಯವಾದಂಥ ಪ್ರಾಜೆಕ್ಟ್‌ಗಳಿವೆ. ಬಾರಪೊಳೆ ಪ್ರಾಜೆಕ್ಟ್ ಕೊಡಗಿನಲ್ಲಿದೆ, ಬೇಡ್ತಿ ಪ್ರಾಜೆಕ್ಟ್ ಕಾರವಾರದಲ್ಲಿದೆ. ಜನ ಎಲ್ಲಾ ಮುಳುಗಿ ಹೋಗುತ್ತಾರೆ ಎಂದು ಅದನ್ನು ನಿಲ್ಲಿಸಿದರು. ನಮ್ಮ ಸರ್ಕಾರ ಬಂದಮೇಲೆ ಆ ಯೋಜನೆಯ ಮೆರಿಟ್ ಬಗ್ಗೆ ನಾವು ಯೋಚನೆಮಾಡಿ ಇದು ಒಂದು ಒಳ್ಳೆಯ ಯೋಜನೆ, ಅದರ ಬಗ್ಗೆ ನಿಸ್ಸಂಶಯ; ಆದರೆ ಇದನ್ನು ಮಾಡುವುದು ಬಿಡುವುದು ಏನಿದೆ ಇದರಲ್ಲಿ ಕಾಂಟ್ರೊವರ್ಸಿ ಇದೆ ಪ್ರಾಜೆಕ್ಟ್ ಕೆಲಸ ನಿಲ್ಲಿಸಿಬಿಟ್ಟಿದೆ. ಇದನ್ನು ಇಂಜನಿಯರುಗಳಿಗೆ ಎಕ್ಸ್‌ಪರ್ಟ್ಸ್‌ಗೆ ರೆಫರ್ ಮಾಡಿದೆವು. ಜನರಿಗೆ ನಾವು ಹೇಳಬೇಕಾದರೆ ಈ ಕಾರಣಕ್ಕೋಸ್ಕರ ಮಾಡಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ ಎಕ್ಸ್‌ಪರ್ಟ್ಸ್ ಮೊನ್ನೆ ಮೊನ್ನೆವರೆಗೆ ಅಂದರೆ ೩-೪ ತಿಂಗಳ ಕೆಳಗಿನವರೆಗೂ ಡಿಫರೆನ್ಸ್ ಆಫ್ ಒಪಿನಿಯನ್ ಕೊಡುತ್ತಾ ಬಂದಿದ್ದಾರೆ. ಕೆಲವರು ಮಾಡಬಹುದು ಎಂದೂ ಕೆಲವರು ಮಾಡಬಾರದು ಎಂದೂ, ಕೆಲವರು ಡ್ಯಾಂ ಹೈಟನ್ನು ಕೆಳಗೆ ಇಳಿಸಿದರೆ ಹೆಚ್ಚು ಹಾನಿಯುಂಟಾಗುವುದಿಲ್ಲ ಎಂದೂ ಇನ್ನು ಕೆಲವರು ಅರಣ್ಯ, ಕೆಲವು ಪ್ರೈವೇಟ್ ಲ್ಯಾಂಡ್ಸ್ ಮುಳುಗಡೆ ಯಾಗುತ್ತದೆ ಎಂದೂ ಹೇಳುತ್ತಿದ್ದಾರೆ. ಈ ಬಗ್ಗೆ ಇನ್ನೂ ಜಿಜ್ಞಾಸೆ ಹೋಗಿಲ್ಲ. ಕ್ಲಿಯರ್ ಇನ್‌ಸ್ಟ್ರಕ್ಷನ್ಸ್, ಕ್ಲಿಯರ್ ಸಜ್ಜೆಷನ್ಸ್ ಎಕ್ಸ್‌ಪರ್ಟ್ಸ್ ಕಮಿಟಿಯಿಂದ ಬಂದಿಲ್ಲ, ಈಗ ಅದನ್ನು ಪರಿಶೀಲನೆಗೆ ಇಟ್ಟುಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸದ್ಯದಲ್ಲಿ ಏನಾದರೂ ಬರುವುದು ಇದೆಯೇ?

ಶ್ರೀ ಜೆ. ಹೆಚ್. ಪಟೇಲ್,—ಸದ್ಯದಲ್ಲಿ ಬರುವ ಹಾಗೆ ಇಲ್ಲ. ಪೂರ್ವಾಪರ ಆಲೋಚನೆ ಮಾಡಿ, ಇದಕ್ಕೆ ಇರತಕ್ಕಂಥ ಮೆರಿಟ್-ಇದೆಲ್ಲಾ ಆಧಾರವಾಗಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಅನೇಕ ಪ್ರಶ್ನೆಗಳನ್ನು ಸನ್ಮಾನ್ಯ ಜೆ.ಹೆಚ್. ಪಟೇಲರು ಎತ್ತಿದ್ದಾರೆ. ಅದನ್ನೆಲ್ಲಾ ನಾನು ಕೇಳಲಿಕ್ಕೆ ಹೋಗುವುದಿಲ್ಲ. ಕೈಗಾ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಬರೆದ ಪತ್ರದ ವಿಚಾರವನ್ನು ನಾನು ಏಕೆ ವಿಶ್ಲೇಷಣೆ ಮಾಡಿದೆ ಅಂದರೆ ದಿನಾಂಕ ೧೦-೨-೧೯೮೮ರ ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿರುವ ಹಾಗೆ ಸನ್ಮಾನ್ಯ ಮುಖ್ಯ

ಮಂತ್ರಿಗಳು ಪ್ರಧಾನಿಯವರಿಗೆ ಕೈಗಾ ಬಗ್ಗೆ ಪತ್ರ ಬರೆದಿದ್ದಾರೆ, ಅದರಲ್ಲಿ ಏನು ಹೇಳಿದ್ದಾರೆಂದರೆ. ಬಾಕಿ ಎಲ್ಲಾ ವಿಷಯ ಓದುವುದಿಲ್ಲ, ಮುಖ್ಯವಾದ್ದು ಓದುತ್ತೇನೆ.

"ಉತ್ತರ ಕನ್ನಡ ಜಿಲ್ಲೆ ಜನತೆ ವಿಚಾರದಲ್ಲಿ ವ್ಯಾಪಕ ಚರ್ಚೆಗೆ ಕಾತುರ ವ್ಯಕ್ತಪಡಿಸುತ್ತಿದ್ದಾರೆ ಅಲ್ಲದೆ ಚರ್ಚೆ ನಡೆಯುವವರೆಗೆ ಘಟಕದ ಯಾವುದೇ ಕಾಮಗಾರಿಗಳು ಪ್ರಾರಂಭವಾಗ ಬಾರದು ಎನ್ನುವ ವಾದವನ್ನು ಮುಂದಿಟ್ಟಿದ್ದಾರೆ. ಅಲ್ಲದೆ ನನ್ನನ್ನು ಭೇಟಿಯಾಗಿ ವಿಚಾರ ಗೋಷ್ಠಿಯನ್ನು ನಡೆಸಲು ಒತ್ತಾಯ ಪಡಿಸಿದ್ದಾರೆ''.

ಇದರ ಅರ್ಥ ಏನು ?

ಶ್ರೀ ಜೆ. ಹೆಚ್. ಪಟೇಲ್.—ಅರ್ಥ ಅದೇ ಮಾಡಿದ್ದು ಹೌದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಒಬ್ಬರು ಮುಖ್ಯ ಮಂತ್ರಿಯವರು ಇದಕ್ಕೆ ಸಂಪೂರ್ಣ ವಾದಂಥ ಮುಕ್ತ ಹಸ್ತದ ಸಹಾಯವನ್ನು ಈ ಕೇಂದ್ರದ ಒಂದು ಯೋಜನೆಗೆ ಕೊಡಬೇಕಾದವರು The inference is that we will have to stop the work till the national debate goes on ಈ ಅರ್ಥ ಬಂದರೆ ಈ ತರಹ ಒಂದು ರೀತಿ, ಅಧಿಕಾರದಲ್ಲಿದ್ದಂಥ ಮುಖ್ಯ ಮಂತ್ರಿಯವರು ಕೈಗಾ ವಿಚಾರದಲ್ಲಿ ಇಷ್ಟು ಸಡಿಲ ಧೋರಣೆ ತಾಳಿದರೆ ಯಾವ ಪ್ರಾಜೆಕ್ಟ್ ಆಗುತ್ತದೆ. will the centre take up the project ? It is totally an unhelpful attitude of the Chief Minister, If he has not mentioned that, I can understand.

ಶ್ರೀ ಜೆ. ಹೆಚ್. ಪಟೇಲ್.—ಅದನ್ನು ಏಕೆ ಬರೆದರು ಅಂದರೆ ಮೊದಲು ಈ ಕೈಗಾ ಅಣುಸ್ಥಾವ ರವನ್ನು ನಮಗೇ ಕೊಡಬೇಕು ಎಂದು ಒತ್ತಾಯ ಮಾಡಿದ ಮುಖ್ಯ ಮಂತ್ರಿಯವರು, ಆ ಅಧಿಕಾರಿಗಳು ಬಂದಾಗ ಹೇಳಿದ್ದಾರೆ. ನಿಮಗೆ ಎಲ್ಲಿ ಸ್ಥಳ ಕೇಳಿದರೂ ಕೊಡುತ್ತೇವೆ, ತುಂಗಭದ್ರ ಡ್ಯಾಂ ಹತ್ತಿರ ಕೇಳಿ ದರೂ ಕೊಡುತ್ತೇವೆ ಗೇರುಸೊಪ್ಪ ಹತ್ತಿರ ಕೇಳಿದರೂ ಕೊಡುತ್ತೇವೆ ಎಂದು ನಮ್ಮ ಸರ್ಕಾರ ಹೇಳಿದೆ. ಆಗ ಒಂದಷ್ಟು ದಿನ ಗೊಂದಲ ವಾಯಿತು. ಇಲ್ಲೇ ಅಲ್ಲ, ಎಲ್ಲಾ ಕಡೆ ಗೊಂದಲ ಆಯಿತು. ಕೆಲಸ ನಡೆಯಲಿಕ್ಕೇ ಕೂಡದು ಎಂದು ಅಬಸ್ಟ್ರಕ್ಟ್ ಮಾಡುವುದಕ್ಕೆ ಹೋದರು. ಆಗ ಸ್ಟೇಟ್‌ಗವರ್ನಮೆಂಟ್ ಏನೋ ಇದರಲ್ಲಿ ಅಸಹಕಾರ ಮನೋಭಾವನೆ ತೋರಿಸುತ್ತವೆ ಎಂದು ಆಗಬಾರದು ಎಂದು ಪರಿಸ್ಥಿತಿ ಯನ್ನು ಎಕ್ಸ್‌ಪ್ಲೈನ್ ಮಾಡಿದೆ Actually the work was never stopped. ಆ ಕೆಲಸಕ್ಕೆ ಬಂದವರಿಗೆ ಎಲ್ಲೂ ತೊಂದರೆಯಾಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಊರಿನಲ್ಲಿ ಹಾವು ಬಿಡುವುದು ಎಂದು ಹೇಳುತ್ತಾರೆ. ಸಭೆ ನಡೆದರೆ ಹಾವು ಬಿಡುವುದು ಆಗ ಎಲ್ಲರೂ ಹಾವು ಹಾವು ಎಂದು ಓಡಿ ಬಿಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಸಭೆ ನಡೆಯುತ್ತಿದ್ದುದು ನಮ್ಮದು. ನಮ್ಮ ಜನರನ್ನು ಸೇರಿಸಿ ಕೊಂಡು ನಾವು ಸಭೆಯನ್ನು ನಡೆಸುತ್ತಿದ್ದೆವು. ಆದರೆ ಹಾವನ್ನು ಬಿಟ್ಟವರು ಯಾರು ? ಅವರು ಬಿಟ್ಟರು ಇವರು ಬಿಟ್ಟರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರಾದರೂ ಬಿಟ್ಟಿರಲಿ. I think you were present when Sri Raja Ramanna and Sri Srinivasan explained the whole thing here.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೊನೆಯ ಪಕ್ಷ ಮಾನ್ಯ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದು ನ್ಯಾಷನಲ್ ಡಿಬೇಟ್ ಮಾಡಿ, ಇದನ್ನು ಎಕ್ಸ್‌ಪ್ಲೈನ್ ಮಾಡಿ, ನಾವು ಇದಕ್ಕೆ ಸಹಕಾರ ಕೊಡುತ್ತೇವೆಂದು ಹೇಳಬಹುದಿತ್ತು. He is championing the cause. If this is the letter which he has sent......

ಶ್ರೀ ಜೆ. ಹೆಚ್. ಪಟೇಲ್.—ಆಗ ಇದ್ದ ಪರಿಸ್ಥಿತಿಯ ಬಗ್ಗೆ ನಾವು ಮಾನ್ಯ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರಕ್ಕಿಂತ ಮುಂಚಿತವಾಗಿ ಬರೆದಿರುವ ಪತ್ರ ನಿಮಗೆ ಸಿಕ್ಕಿರಲಿಕ್ಕಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇತ್ತೀಚೆಗೆ ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ನೀವು ಹಿಡಿದುಕೊಂಡಿದ್ದೀರಿ. ನೀವು ಎಂಥ ಕಾಗದವನ್ನು ಹಿಡಿದುಕೊಂಡು ಬರುತ್ತೀರೆಂದರೆ......

SRI S. BANGARAPPA.—It goes against the tenets of the earlier letter.

SRI J. H. PATEL....Let not the Prime Minister misunderstand the situation that was existing then. There were a very severe protests. We have never stopped the on-going works. We have helped every engineer or whomsoever to go on with the project. Kaiga project will go ahead according to the schedule no matter who says anything about it. It will go on.

ಇದೇ ರೀತಿ ಇನ್ನೂ ಬೇರೆ ಬೇರೆಯುದರ ಬಗ್ಗೆಯೂ ಹೇಳುತ್ತೇನೆ. ಮಂಗಳೂರಿನ ಸೂಪರ್ ಥರ್ಮಲ್ ಪ್ಲಾಂಟ್ ಬಗ್ಗೆ ಕೇಂದ್ರಸರ್ಕಾರದ ಮುಂದೆ ನಮ್ಮ ಬೇಡಿಕೆಯನ್ನು ಇಟ್ಟಿದ್ದೇವೆ. ಈ ಒನೇ ಯೋಜನೆಯು ಕೊನೆಯೊಳಗೆ ನಾವು ಕೇಳಿರತಕ್ಕ ೨-೩ ದೊಡ್ಡ ಪ್ರಾಜೆಕ್ಟ್‌ಗಳಿಗೆ ಅವರು ಕ್ಲಿಯರೆನ್ಸ್ ಕೊಟ್ಟರೆ ಅವುಗಳಿಗೆ ಹಣವನ್ನು ಎಲ್ಲಿಂದ ತರಬೇಕು ? ನಾವು ಎನ್.ಆರ್.ಐ. ನವರನ್ನು ಕೇಳಿದ್ದೇವೆ. ಇದರ ಜೊತೆಗೆ ಇನ್ನೂ ಬೇರೆ ಬೇರೆಯವರನ್ನೂ ಕೇಳಿದ್ದೇವೆ. ಇದರ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ನಮ್ಮ ರಾಜ್ಯ ಸರ್ಕಾರದ ವಿದ್ಯುಚ್ಛಕ್ತಿಯ ಕೊರತೆಯ ಬಗ್ಗೆ, ಉದ್ದಿಮೆಗಳ ಬಗ್ಗೆ ಯಾವುದೇ ಸರ್ಕಾರವಾಗಲಿ ಅಥವಾ ಕೇಂದ್ರಸರ್ಕಾರವಾಗಲಿ ತಾರತಮ್ಯವನ್ನು ತೋರಿಸಬಾರದು. ಏಕೆಂದರೆ ಈಗಾಗಲೇ ಯಲಹಂಕದ್ದು ನಮಗೆ ಕಹಿ ಅನುಭವವನ್ನು ಮಾಡಿಕೊಟ್ಟಿದೆ, ಇನ್ನು ಡೀಸೆಲ್ ಸೆಟ್ ಇರಬಹುದು, ಗ್ಯಾಸ್ ಟರ್ಬೈನ್ ಇರಬಹುದು, ಅಥವಾ ಇನ್ನೊಂದು ಇರಬಹುದು ಕರ್ನಾಟಕ ಪವರ್ ಕಾರ್ಪೊರೇಷನ್ ನಿಂದ ಇಂಡಿ, ಕೋಲಾರ, ಜಮಖಂಡಿ ಮತ್ತು ಮೈಸೂರುಗಳಲ್ಲಿ ೩೩ ಮೆಗಾ ವ್ಯಾಟ್‌ನ ೪ ಯೂನಿಟ್‌ಗಳನ್ನು ರೆಗ್ಯುಲರ್ ಸಪ್ಲೈಗೋಸ್ಕರ ಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡು ನಾವು ಕೇಳಿದರೆ ಇದರ ಬಗ್ಗೆ ಕೇಂದ್ರಸರ್ಕಾರದಿಂದ ಯಾವುದೇ ಚಕಾರವೂ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ನಿಮ್ಮ ಕೈಯಲ್ಲಿರತಕ್ಕ, ಕೇಂದ್ರದಿಂದ ಕ್ಲಿಯರೆನ್ಸ್ ಸಿಕ್ಕಿರತಕ್ಕ ಪ್ರಾಜೆಕ್ಟ್‌ಗಳಿಗೇ ನೀವು ಹಣವನ್ನು ಒದಗಿಸಲು ಆಗಿಲ್ಲ......

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ನಮ್ಮ ಕೈಯಲ್ಲಿರುವುದಕ್ಕೆ ಹಣವನ್ನು ಒದಗಿಸಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಶುದ್ಧ ನಿರಾಧಾರವಾದುದು.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಯಲಹಂಕ ಪ್ರಾಜೆಕ್ಟನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯತೆ ಇದೆಯೆ ? ನಿಮಗೆ ೮೦ ಕೋಟಿ ರೂಪಾಯಿ ಫಾರಿನ್ ಎಕ್ಸ್‌ಛೇಂಜ್ ಏತಕ್ಕೆ ಸಿಕ್ಕಿಲ್ಲ ? ಈಗ ಇದನ್ನು ಪ್ರಾರಂಭ ಮಾಡುವುದಕ್ಕೆ ನಿಮ್ಮ ಹತ್ತಿರ ಹಣವಿಲ್ಲ. You want a deferred payment. That means you have no money. If you can organise Rs. 80 crores and seek for some subsidy, they are prepared to give the subsidy. Even now I reiterate my stand that to the extent of 30% to 40% Govt. of India is prepared to give subsidy. ಈಗ ತಮ್ಮ ಭಾಗದ ಹಣವನ್ನು ತಕ್ಷಣ ಒದಗಿಸಿದರೆ......

ಶ್ರೀ ಜೆ. ಹೆಚ್. ಪಟೇಲ್.—ಕೇಂದ್ರದವರು ಸಬ್ಸಿಡಿಯನ್ನು ಕೊಡುತ್ತೇವೆಂದು ಒಂದು ಪೋಸ್ಟ್ ಕಾರ್ಡ್‌ನಲ್ಲಿ ಅಥವಾ ಒಂದು ಪತ್ರದಲ್ಲಿ ಬರೆದಿದ್ದರೂ ಕೂಡ ಆಗಬಹುದಿತ್ತು. ನಮ್ಮ ಕಿವಿಗೆ ಬೀಳುವಂತೆ ಎಲ್ಲಾದರೂ ಒಂದು ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆಯೆ ?

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ, ಇಂಡಿ, ಜಮಖಂಡಿ, ಕೋಲಾರ ಮೈಸೂರು ಈ ಯೂನಿಟ್‌ಗಳಿಗೆ ಸಂಬಂಧಪಟ್ಟಂತೆ ತಾವು ಕೇಂದ್ರ ಸರ್ಕಾರಕ್ಕೆ ಬರೆದಿರತಕ್ಕ ಪತ್ರಗಳು ಮತ್ತು ಅವರಿಂದ ಬಂದಿರತಕ್ಕ ಉತ್ತರಗಳು, ಹಾಗೂ ಅವರು ಏನೇನು ಕ್ವೈರಿಗಳನ್ನು ಹಾಕಿದ್ದಾರೆ ಅವುಗಳನ್ನು ನನಗೆ ಕೊಡಿ. ತಮ್ಮ ಹತ್ತಿರ ಇರತಕ್ಕ ಅಷ್ಟೂ ಪತ್ರಗಳನ್ನು ತಾವು ಈ ಸದನದ ಮುಂದಿಡಿ. Let us understand as to what exactly the position is. ನಾವು ಪತ್ರವನ್ನು ಬರೆದಿದ್ದೇವೆ ಆದರೆ ಅವರು ಅನುಮತಿಯನ್ನು ಕೊಟ್ಟಿಲ್ಲ ಎಂದು ನೀವು ಹೇಳುವುದು ಬೇಡ.

ಶ್ರೀ ಜೆ. ಹೆಚ್. ಪಟೇಲ್.—ಆಗಲಿ, ಈ ಸದನದ ಮುಂದಿಡುತ್ತೇನೆ. ಅಷ್ಟೇ ಅಲ್ಲ ಎಲ್ಲ ಮಾನ್ಯ ಸದಸ್ಯರಿಗೂ ಅವುಗಳ ನಕಲುಗಳನ್ನು ಕಳುಹಿಸಿಕೊಡುತ್ತೇನೆ. Electricity Authority, Ministry of Energy, Ministry of Environment, Ministry of Finance, ಇವರೆಲ್ಲರಿಗೂ ನಾವು ಪತ್ರಗಳನ್ನು ಬರೆದಿದ್ದೇವೆ.

ಎಲ್ಲಕ್ಕೂ ಭವನ ಭವನಗಳನ್ನು ಸುತ್ತಿ ಸುತ್ತಿ ಓಡಾಡಿ ನನಗೂ ಸಾಕಾಗಿದೆ. ಮೂರುನಾಲ್ಕು ಸಾರಿ ಅವರನ್ನು ಕಂಡಿದ್ದೇನೆ. ನಾವು ಇಲ್ಲಿಯವರೆಗೂ ಮಾಡಿರುವ ಪ್ರಯತ್ನ ಕಳುಹಿಸಿರತಕ್ಕಂಥ ಪ್ರಾಜೆಕ್ಟ್, ಅವರಿಂದ ಬಂದಿರತಕ್ಕಂಥ ಸಹಕಾರ ಎಲ್ಲವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಏತಕ್ಕೆ ಸಲಹೆ ಮಾಡುತ್ತಿದ್ದೇನೆಂದರೆ ತಾವು ಕಳುಹಿಸಿರುವ ಕೆಲಸ ಪ್ರಾಜೆಕ್ಟ್‌ಗಳು ಕೇಂದ್ರ ಸರ್ಕಾರದಲ್ಲಿ ಪೆಂಡಿಂಗ್ ಇದೆ. ಇಲ್ಲವೆಂದು ಹೇಳು ವುದಿಲ್ಲ. ಈ ವಿಚಾರದಲ್ಲಿ ಪತ್ರವನ್ನು ಬರೆದಿದ್ದಾರೆ. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಬೆಳಗಾವಿ ಜಿಲ್ಲೆ ಬಗ್ಗೆ ವಿವರಗಳನ್ನು ಫಾರೆಸ್ಟ್ ಇಲಾಖೆಯಿಂದ ತರಿಸಿ ಉತ್ತರ ಕೊಟ್ಟಿಲ್ಲ. ನೀವು ಡೇಟ್ ಕೋಟ್ ಮಾಡದೆ ವಿವರಗಳನ್ನು ಕಳುಹಿಸಿಕೊಟ್ಟಿರುತ್ತೀರಿ. ಫಾರೆಸ್ಟ್ ಕ್ಲಿಯರ್ ಮಾಡಿದ್ದಕ್ಕೆ ಕೇಂದ್ರ ಸರ್ಕಾರಕ್ಕೆ ವಿವರಗಳನ್ನು ಕಳುಹಿಸಿಕೊಟ್ಟಿಲ್ಲ. ಇದು ಒಂದು ಉದಾಹರಣೆ ಕೊಟ್ಟೆ. ಇಂಡಿ, ಜಮುಖಂಡಿದ್ದು ಏನು ಇದೆ ಬಹಳ ಉಪಯೋಗವಾಗತಕ್ಕಂಥ ವಿಷಯವಾಗಿದೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ಒಂದೇ ಮಿನಿಸ್ಟ್ರಿ ಇಲ್ಲ. ಎನ್ವೈರಾನ್‌ಮೆಂಟ್, ಫಾರೆಸ್ಟ್ ಕ್ಲಿಯರೆನ್ಸ್, ಪಲ್ಯೂಷನ್ ಪ್ರಾಬ್ಲಮ್ ಇಷ್ಟೊಂದು ಇರುತ್ತದೆ. ಎಲ್ಲಾ ಒಂದೇ ಮಿನಿಸ್ಟ್ರಿಯಲ್ಲಿ ಮಾಡಬಹುದಾಗಿತ್ತು. ಆದರೆ ಮಾಡುತ್ತಿಲ್ಲ. ಪ್ರಾಕ್ಟಿಕಲಿ ಏನಾಗುತ್ತದೆ ಎನ್ವೈರಾನ್‌ಮೆಂಟ್ ಕಡೆ ಹೋದರೆ ಫಾರೆಸ್ಟ್ ಕಡೆ ಕಳುಹಿಸುತ್ತಾರೆ. ಫಾರೆಸ್ಟ್‌ಗೆ ಹೋದರೆ ಎಕಲಾಜಿಕಲ್ ಇಮ್‌ಬ್ಯಾಲೆನ್ಸ್ ಯಾವುದೋ ವಿಚಾರಕ್ಕೆ ಬಂದು ಬಿಡುತ್ತಾರೆ. ಫಾರೆಸ್ಟ್ ಮಿನಿಸ್ಟ್ರಿ, ಎನ್ವೈರಾನ್‌ಮೆಂಟ್, ಪಲ್ಯೂಷನ್ ಎಷ್ಟು ಮಿನಿಸ್ಟ್ರಿಗೆ ಮತ್ತು ಎಷ್ಟು ಅನುಮಾನಗಳಿಗೆ ಉತ್ತರ ಕೊಡುವುದು ? ಇದರ ಬಗ್ಗೆ ಡೇಟ್‌ವೈಸ್ ಡೀಟೈಲ್ ಯಾವ ಯಾವಾಗ ಕನ್‌ವಿನ್ಸ್ ಮಾಡಿದ್ದೇನ್ನುವುದಕ್ಕೆ ಹೇಳುತ್ತೇನೆ. ನಮ್ಮ ಕಡೆಯಿಂದ ಇನ್‌ಫರ್‌ಮೇಷನ್ ಕೊಡದೆ ತಡವಾಗಿಲ್ಲ. ನಾವು ಎಲ್ಲಾ ಡಾಕ್ಯುಮೆಂಟ್ಸ್‌ನ್ನು ಕೊಟ್ಟಿದ್ದೇವೆ. I will give you the entire document about it.

ಶ್ರೀ ಡಿ ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಹಿಮಾಚಲ ಪ್ರದೇಶದಲ್ಲಿ ಹೈಡ್ರಾಲಿಕ್ ಪವರ್ ಪ್ರಾಜೆಕ್ಟ್ಸ್‌ಗಳನ್ನು ಮಾಡುತ್ತಿರುವುದನ್ನು ಕೇಳಿದ್ದೇನೆ. ನಮ್ಮ ಪಶ್ಚಿಮ ಘಟ್ಟಗಳಲ್ಲಿಯೂ ಕೂಡ ಅದರಲ್ಲೂ ಕರ್ನಾಟಕದಲ್ಲಿ ಕೊಡಗಿನಲ್ಲಿ ಬೇಕಾದಷ್ಟು ಹೊಳೆಗಳು ಫಾಲ್ಸ್‌ಗಳು ಇರುತ್ತವೆ. ಈ ಫಾಲ್ಸ್‌ಗಳಲ್ಲಿ ಮಿನಿ ಹೈಡ್ರಾಲಿಕ್ ಪ್ರಾಜೆಕ್ಟ್‌ಗಳನ್ನು ಏತಕ್ಕೆ ಮಾಡಬಾರದು ? ಕರ್ನಾಟಕದಲ್ಲಿ ಎರಡು ವರ್ಷಗಳ ಹಿಂದೆ ೮ ಮಿನಿ ಹೈಡ್ರಾಲಿಕ್ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡಲು ಸರ್ವೆ ಮಾಡಿದ್ದರು. ಇದರಲ್ಲಿ ಯಾವುದನ್ನೂ ಕಾರ್ಯಗತ ಮಾಡಲಿಲ್ಲ. ೩೦ ಕೋಟಿ ರೂಪಾಯಿಗಳಲ್ಲಿ ಆಗತಕ್ಕಂಥ ಈ ಪ್ರಾಜೆಕ್ಟ್‌ಗಳನ್ನು ಏತಕ್ಕೆ ಕೊಡಗಿನಲ್ಲಿ ತೆಗೆದುಕೊಳ್ಳಬಾರದೆಂದು ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ತಿಳುವಳಿಕೆಗೋಸ್ಕರ ವಿಷಯ ಹೇಳುತ್ತಿದ್ದೇನೆ. ನಾವು ಆರು ಮಿನಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ಸ್‌ಗಳನ್ನು ಪ್ರೈವೇಟ್ ಸೆಕ್ಟಾರ್ಸ್‌ಗೆ ಕೊಟ್ಟಿದ್ದೇವೆ ಯಾರೂ ಸಮರ್ಪಕವಾಗಿ ಕೆಲಸ ಮಾಡಿಲ್ಲ. ಅದಕ್ಕೋಸ್ಕರವಾಗಿ ಅವುಗಳ ಪೈಕಿ ನಾಲ್ಕು ಸಣ್ಣ ಪ್ರಾಜೆಕ್ಟ್ಸ್‌ಗಳನ್ನು ಪವರ್ ಕಾರ್ಪೊರೇಷನ್ ಮೂಲಕವಾಗಿ ನಾವೇ ಮಾಡುತ್ತಿದ್ದೇವೆ. ನಿಮ್ಮ ಏರಿಯಾದಲ್ಲೂ ಕೆಲವು ಬರುತ್ತದೆ. ಸರ್ವೆ ಮಾಡಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಅಬ್ಬೆ ಫಾಲ್ಸ್ ಇದೆ.

ಶ್ರೀ ಜೆ. ಎಚ್. ಪಟೇಲ್.—ಅದನ್ನು ನೋಡುತ್ತೇನೆ.

SRI MOHAMMED LAIQUDDIN.—Mr. Speaker Sir, Bidar is declared as ,No industry district' and the Hon. Minister had stated that he has declare l a mini thermal power plan run bg the diesel to be esta-

blished at Bidar, This power project was mentioned in the last three years, budget. This year, it is not mentioned. It was not processed. I want to know as to whether that thermal power plant will be established or not. I learn that even the Central Goverment has cleared that power project. what in the present position?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಪ್ಪು ಗ್ರಹಿಕೆ ಮಾಡಿಕೊಂಡಿದ್ದಾರೆ. ಬೀದರ್ ಇಂಡಸ್ಟ್ರಿಯಲ್ ಏರಿಯಾಕ್ಕೆ ಬೇಕಾಗಿರುವಂತಹದ್ದು ೮-೯ ಮೆಗಾವ್ಯಾಟ್ ಒಂದು ಡೀಸಲ್ ಸೆಟ್, ಅದನ್ನು ಹಾಕಬೇಕು ಕೋಲ್‌ಬೇಸ್ಡ್. ಅದಕ್ಕೂ ಥರ್ಮಲ್ ಎಂದು ಕರೆಯಬಹುದು. ಜನರಲಿ ಆಯಲ್ ಕೋಲ್ ಅಥವಾ ಇನ್ನಿತರ ಯಾವುದೇ ಮಲ್ಟಿಫ್ಯೂಯಲ್ ಪ್ಲಾಂಟ್ ಆಗಲಿ, ಅದಕ್ಕೆಲ್ಲ ಥರ್ಮಲ್ ಎಂದೇ ಕರೆಯುತ್ತಾರೆ. What was planned for Bidar was about 9 MGW diesel set which has not been cleared as I have already explained. If Yelahanka project it self has taken 3 years I do not know how many more years we will take for this. This is the position. Even now I know having seen the industrial area in Bidar which is coming very fast and the industrsal growth in Bidar I do not want to say whether your period, or our period, but fortunately in the last two or three years NRI investment has come and a lot of enthusiasm is coming forward. You have two problems-one is water and the other is of electrlicity. We are now thinking of forming a Power Corporation by KSIIDC because this is the organisation which functions the industry and it should also take up the work power generation, which is now the thinking of the government and we will take suitable steps.

SRI MOHAMMED LAIQUDDIN.—That is the interim measure which the Hon. Minister is talking. What about the establishment of the power plant ?

SRI J. H. PATEL.—I am sorry. There was never a proposal for a big type thermal p wer plan in Bidar.

ಶ್ರೀ ಎಂ. ವೀರಯ್ಯಸ್ವಾಮಿ.—ಕೆಲವು ಕಡೆ ಸಮುದ್ರದ ಅಲೆಗಳಿಂದ ವಿದ್ಯುತ್ ಉತ್ಪಾದಿಸತಕ್ಕ ಟೆಕ್ನಾಲಜಿ ಬಂದಿದೆ ಎಂದು ಕೇಳಿದ್ದೇನೆ. ಅದರ ಬಗ್ಗೆ ನಮ್ಮ ರಾಜ್ಯದಲ್ಲಿ ಏನಾದರೂ ವಿಚಾರ ಮಾಡಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈ ತರಹ ಅಲೆಗಳಿಂದ ವಿದ್ಯುತ್ ಉತ್ಪಾದಿಸುವುದು ಪ್ರಪಂಚದಲ್ಲಿ ಎರಡು ಕಡೆ ಮಾತ್ರ. ಅದಕ್ಕೆ ಬೇಕಾಗತಕ್ಕ ವೆಲಾಸಿಟಿ, ಎತ್ತರ ನಮ್ಮಲ್ಲಿರತಕ್ಕ ಸಮುದ್ರಗಳಲ್ಲಿ ದೊರೆಯುವುದಿಲ್ಲ. ಆದ್ದರಿಂದ ಆ ಪ್ರಯೋಗ ಇಲ್ಲಿಯವರೆಗೆ ಆಗಿಲ್ಲ.

ಶ್ರೀ ಸಿ ಪಿ. ಮೂಡಲಗಿರಿಯಪ್ಪ.—ರಾಜ್ಯದಲ್ಲಿ ಸಾವಿರಾರು ಇಂಡಸ್ಟ್ರಿಗಳು ಸಿಕ್ ಆಗಿ ಕೊಳೆಯುತ್ತಾ ಇವೆ. ಅವುಗಳಿಗೆ ಕೆ.ಎಸ್.ಎಫ್.ಸಿ. ಯಿಂದ ಏನಾದರೂ ಪರಿಹಾರ ಒದಗಿಸುತ್ತೀರಾ ಮತ್ತು ಅವುಗಳ ಡಿಸ್‌ಪೋಸಲ್‌ಗೆ ಮಂತ್ರಿಗಳು ಏನಾದರೂ ಮನಸ್ಸು ಮಾಡಿದ್ದೀರಾ?

ಶ್ರೀ ಜೆ. ಹೆಚ್. ಪಟೇಲ್.—ನಾನು ಇಂಡಸ್ಟ್ರೀಸ್ ಇಲಾಖೆಗೆ ಉತ್ತರ ಹೇಳುತ್ತಿಲ್ಲ. ಬರಿ ಪವರ್ ಪ್ರಾಜೆಕ್ಟ್, ಕೆಇಬಿ. ಮತ್ತು ಕೆಪಿಸಿ. ಬಗ್ಗೆ ಹೇಳುತ್ತಿದ್ದೇನೆ. ವಿದ್ಯುಚ್ಛಕ್ತಿಗೂ ಅದಕೂ ಸಂಬಂಧ ಇಲ್ಲ. ಸಿಕ್ ಏತಕ್ಕೆ ಆಗುತ್ತಿವೆ ಎಂಬುದನ್ನು ನಂತರ ರಘುಪತಿಯವರು ಮತ್ತು ನಾನು ಹೇಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಕೋಲಾರದಲ್ಲಿ ಏತಕ್ಕೆ ಇನ್ನೂ ಡೀಸಲ್ ಸ್ಟೇಷನ್ ಎಸ್ಟಾಬ್ಲಿಷ್ ಮಾಡಿಲ್ಲ? ಅದಕ್ಕೆ ಕ್ಲಿಯರೆನ್ಸ್ ದೊರೆತಿದೆ ಎಂದು ಕೇಳಿದ್ದೇನೆ. ಇನ್ನೊಂದು ವಿಚಾರವನ್ನು ಬಹಳ ಸಾರಿ ಕೇಳಿದ್ದೇನೆ, ಪಂಪ್ ಸೆಟ್‌ಗಳಿಗೆ ಹಗಲು ಹೊತ್ತು ಕಂಟಿನ್ಯುಯಸ್ ಆಗಿ ಪವರ್ ಕೊಡುವುದಕ್ಕೆ ಏನಾದರೂ ಏರ್ಪಾಡು ಮಾಡಿ. ೮ ಗಂಟೆ ಕೊಡುತ್ತೇವೆಂದು ಹೇಳಿದ್ದೀರಿ. ಎರಡು ಗಂಟೆ ಬ್ರೇಕ್ ಆದರೆ ತೊಂದರೆಯಾಗುತ್ತದೆ, ಈ ಬಗ್ಗೆ ಅಧಿಕಾರಿಗಳ ಜೊತೆ ಕನ್‌ಸಲ್ಟ್ ಮಾಡಿ, ಐಪಿ. ಸೆಟ್‌ನವರಿಗೆ ಕಂಟಿನ್ಯುಯಸ್ ಆಗಿ ಪವರ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಕೋಲಾರ ಜಿಲ್ಲೆಯಲ್ಲಿ ಹೋದ ವರ್ಷ ಮತ್ತು ಈ ವರ್ಷ ಹೆಚ್ಚಿನ ಸಮಸ್ಯೆಗಳಿದ್ದುದರಿಂದ ಕೆಲವು ಕ್ರಮಗಳನ್ನು ಕೈಗೊಂಡು ಹೆಚ್ಚಿನ ಶಕ್ತಿ ಇರತಕ್ಕ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದ ಮೇಲೆ ಸ್ವಲ್ಪ ಉತ್ತಮವಾಗಿದೆ. ಎಲ್ಲಾ ಸಮಸ್ಯೆಗಳು ನಿವಾರಣೆಯಾಗಿವೆ ಎಂದು ಹೇಳುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಪವರ್ ಸಿಚುಯೇಷನ್ ೨-೩ ವರ್ಷಗಳಲ್ಲಿ ವಿಚಿತ್ರ ಸ್ಥಿತಿಗೆ ಬಂದಿರುವುದು ಅನುಭವಕ್ಕೆ ಬಂದಿದೆ. ಈ ವರ್ಷ ಮಳೆ ಚೆನ್ನಾಗಿ ಬಂದು ಉತ್ಪಾದನೆ ಹೆಚ್ಚಾದಾಗ ತನ್ನಷ್ಟಕ್ಕೆ ತಾನೇ ಸಮಸ್ಯೆ ಪರಿಹಾರವಾಗುತ್ತದೆ. ಕೋಲಾರದಲ್ಲಿ ಡೀಸಲ್ ಸ್ಟೇಷನ್ ಸ್ಥಾಪಿಸಲು ನಾಲ್ಕು ಯೂನಿಟ್ಟಿಗೆ ಪರ್ಮಿಷನ್ ಕೇಳಿ ಪತ್ರ ಬರೆದಿದ್ದೇವೆ, ಅದು ಇನ್ನೂ ಕ್ಲಿಯರ್ ಆಗಿಲ್ಲ.

ಶ್ರೀ ಆರ್. ಎ. ನಾಯಕ್.—ಬೇಡ್ತಿ ಯೋಜನೆಯನ್ನು ಏನು ತಡೆಹಿಡಿದಿದ್ದೀರಿ ಆ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಆ ಕಮಿಟಿಯ ವರದಿ ಎರಡು ವರ್ಷಗಳಿಂದ ಸರ್ಕಾರದ ಮುಂದಿದೆ ಆ ಬಗ್ಗೆ ಬಹಳ ಸಾರಿ ಪ್ರಸ್ತಾಪ ಮಾಡಿದರೂ ಆ ವರದಿಯಿಂದ ಅನುಕೂಲವಾದೆಗಿಯೋ ಇಲ್ಲವೇ ಎಂದು ಹೇಳಿಲ್ಲ. ಆ ವರದಿಯನ್ನು ಯಾವಾಗ ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತೀರಿ?

೧೦-೩೦ ಎ.ಎಂ.

ಮತ್ತು ಆ ರಿಪೋರ್ಟಿನಲ್ಲಿ ಬೇಡ್ತಿ ಯೋಜನೆಯಿಂದ ಅನುಕೂಲ ಇದೆ, ಆದಾಗಬೇಕು ಎಂದು ಬಂದರೆ ಅದನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನಿಲುವು ಏನು ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಬಂಗಾರಪ್ಪನವರು ಪ್ರಶ್ನೆ ಕೇಳಿದಾಗ ನಾನು ಹೇಳಿದ್ದೇನೆ. ಪ್ರಾರಂಭದಲ್ಲಿ ಸಾರ್ವಜನಿಕರಿಂದ ಪ್ರತಿಭಟನೆ ಆದ ಕಾರಣ ಕೆಲಸ ಶುರು ಆದುದನ್ನು ನಿಲ್ಲಿಸಲಾಯಿತು. ಅನಂತರ ನಮ್ಮ ಸರ್ಕಾರ ಬಂದಮೇಲೆ ಈ ಪ್ರಾಜೆಕ್ಟನ್ನು ಮುಂದೆ ತೆಗೆದುಕೊಂಡು ಹೋಗಬೇಕೇ ಬೇಡವೇ ಎಂಬ ಬಗ್ಗೆ ಎಕ್ಸ್‌ಪರ್ಟ್ಸ್ ಕಮಿಟಿ ಮಾಡಿ ಅದಕ್ಕೆ ರೆಫರ್ ಮಾಡಿದೆವು. ಸುಮಾರು ಆರು ತಿಂಗಳವರೆಗೂ ಅವರು ಯಾವುದೇ ತೀರ್ಮಾನಕ್ಕೆ ಬರಲಿಲ್ಲ. ಆದರಿಂದ ಯಾವುದೇ ತೀರ್ಮಾನಕ್ಕೆ ಬರದಿರುವ ರಿಪೋರ್ಟ್ ಇದೆ ಕೆಲವರು ಎಕನಾಮಿಕಲಿ ವಯಬಲ್ ಪ್ರಾಜೆಕ್ಟ್ ಆದ್ದರಿಂದ ಅದನ್ನು ಮಾಡಬೇಕು ಎಂದು ಹೇಳಿದರೆ ಕೆಲವರು ಇಲ್ಲ, ಇದರಿಂದ ಪ್ರಾಕೃತಿಕ ನಾಶವಾಗುತ್ತದೆ ಇಂಬ್ಯಾಲೆನ್ಸ್ ಆಗುತ್ತದೆ ಮಾಡಬಾರದು ಎಂದು ಹೇಳುತ್ತಾರೆ. ಇನ್ನು ಕೆಲವರು ಡ್ಯಾಮ್ ಹೈಟನ್ನು ಕಡಿಮೆ ಮಾಡಿದರೆ ಲುಕ್ಸಾನು ಕಡಿಮೆಯಾಗುತ್ತದೆಂದು ಹೇಳುತ್ತಾರೆ. ಅವರು ನಿರ್ದಿಷ್ಟವಾಗಿ ಏನೂ ಹೇಳದೇ ಇರುವುದರಿಂದ ಪರಿಶೀಲನೆ ಮಾಡಿ ಹೇಳಬೇಕಾಗುತ್ತದೆ. ಈಗಲೇ ನಾನು ಏನೂ ಹೇಳಲಾರೆ.

ಶ್ರೀ ಆರ್. ಎನ್. ನಾಯಕ್.—ಇದು ಬಹಳ ಮುಖ್ಯವಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳ ನಿಲುವು ಏನಿದೆ ಬೇಡ್ತಿ ಯೋಜನೆ ಬಗ್ಗೆ ಎಂಬುದನ್ನು ಹೇಳಬೇಕು. ಅವರು ಸದನದಲ್ಲಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಸರ್ಕಾರದ ನಿಲುವು ಎಂದರೆ ಮುಖ್ಯಮಂತ್ರಿಗಳೂ ಸೇರಿಯೇ ಹೇಳುತ್ತಾ ಇರುವುದು.

ಶ್ರೀ ಆರ್. ಎನ್. ನಾಯಕ್.—ಹಿಂದೊಮ್ಮೆ ಬೇಡ್ತಿ ಬೇಡ ಎಂದು ಹೇಳಿದ್ದರು. ಈಗ ಅವರ ನಿಲುವನ್ನು ಬದಲಾಯಿಸಿದ್ದಾರೋ ಹೇಗೆ?

ಅಧ್ಯಕ್ಷರು.—ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೆ. ಸರ್ಕಾರ ಎಂದರೆ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಎಲ್ಲರೂ ಬರುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು.—ಆಗುವುದಿಲ್ಲ ಕುಳಿತುಕೊಳ್ಳಿ. ರಘುಪತಿಯವರನ್ನು ಉತ್ತರ ಹೇಳುವುದಕ್ಕೆ ಕರೆಯುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅವರ ಅಭಿಪ್ರಾಯ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಅವರು ಹೇಳುವುದಿಲ್ಲ. ಇವರು ಹೇಳಿದ್ದಾರೆ. ತಾವು ಕೂಡ್ರಿ.

ಶ್ರೀ ಆರ್. ಎನ್. ನಾಯಕ್.—ಹೀಗೆ ಕೂಡಿಸಿದರೆ ಹೇಗೆ?

ಅಧ್ಯಕ್ಷರು.—ಸರ್ಕಾರದ ಪರವಾಗಿ ಒಬ್ಬರು ಉತ್ತರ ಹೇಳಿದ್ದಾರೆ.

ಶ್ರೀ ಜೆ, ಎಚ್. ಪಟೇಲ್.—ಪವರ್ ಬಗ್ಗೆ ಏನು ಬೇಡಿಕೆ ಇದೆ......

ಶ್ರೀ ಆರ್. ಎನ್. ನಾಯಕ್.—ರಿಪೋರ್ಟ್ ಯಾವಾಗ ಇಡುತ್ತಾರೆ? ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಏನು? ಈ ಎರಡು ಪ್ರಶ್ನೆಗಳನ್ನು ನಾನು ಕೇಳಿದ್ದೇನೆ. ೨೪ನೇ ತಾರೀಖು ರಿಪೋರ್ಟ್ ಇಡುತ್ತೀರಾ? ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯ ಏನು? ಇದು ಬಹಳ ಸಿಂಪಲ್ ಪ್ರಶ್ನೆ. ಇಷ್ಟಕ್ಕೆ ಉತ್ತರ ಕೊಟ್ಟರೆ ಸಾಕು. ತಾವು ಏತಕ್ಕೆ ಟೈಂ ಕಳೆಯುತ್ತೀರಿ?

ಅಧ್ಯಕ್ಷರು.—ನಾನು ಟೈಂ ಕಳೆಯುತ್ತಿದ್ದೀನಾ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ೧೮೨ ಕೋಟಿ ರೂಪಾಯಿ ಹಣವನ್ನು ಪವರ್ ಕಾರ್ಪೊರೇಷನ್‌ನವರು ಕೆ. ಇ. ಬಿ.ಗೆ ಕೊಡಬೇಕು. ಅದನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎರಡನೇ ಪ್ರಶ್ನೆ, ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟನ್ನು ಗೋಕಾಕ್ ಫಾಲ್ಸ್ ಹತ್ತಿರ ತೆಗೆದುಕೊಳ್ಳಬೇಕೆಂದು ಪ್ರಸ್ತಾವನೆ ಕಳುಹಿಸಿದ್ದೆ. ಅದರ ಬಗ್ಗೆ ಏನಾಗಿದೆ? ಪೂರನೆಯದು ಹಿಡ್ಕಲ್ ಡ್ಯಾಂ ಹತ್ತಿರ ೩೩ ಮೆಗಾವಾಟ್ಸ್ ವಿದ್ಯುತ್ ಉತ್ಪಾದನೆ ಮಾಡತಕ್ಕ ಯೋಜನೆ ಏನು ಪ್ರಾರಂಭ ಆಗಿದೆ ಅದನ್ನು ಎಷ್ಟು ದಿವಸದಲ್ಲಿ ಪೂರ್ತಿ ಮಾಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಇದಕ್ಕೆ ಸಂಬಂಧಪಟ್ಟಿದ್ದನ್ನು ನಾನು ಹೇಳುತ್ತೇನೆ, ಕೆ.ಇ.ಬಿ. ಅಡ್ಮಿನಿಸ್ಟ್ರೇಟೀವ್ ರಿಪೋರ್ಟಿನಲ್ಲಿ ಕೆಲವು ಅಂಕಿಅಂಶ ಇದೆ. ಅದರ ಪ್ರಕಾರ ೧೯೭೬–೭೭ರಲ್ಲಿ, ೩೬,೧೭೬ ಥೆಫ್ಟ್ ಕೇಸ್‌ಗಳು, ೧೯೭೭–೭೮ರಲ್ಲಿ ೨೨,೩೧೬ ಥೆಫ್ಟ್ ಕೇಸ್‌ಗಳು ಇವೆ. ಈಗ ಅದನ್ನು ಜಾಸ್ತಿ ಮಾಡಿದ್ದೀರೋ ಅಥವಾ ಕಡಿಮೆ ಮಾಡಿದ್ದೀಗೋ ಗೊತ್ತಿಲ್ಲ. ಥೆಫ್ಟ್ ಕೇಸ್‌ಗಳು ಅಧಿಕಾರಿಗಳು ಶಾಮೀಲಾಗದೇ ಹೋದರೆ ಆಗುವುದಿಲ್ಲ. ಆದರೂ ಮಾಡಬಹುದು. ಆದರೆ ಅಧಿಕಾರಿಗಳು ಶಾಮೀಲಾಗದೇ ಹೋದರೆ ಕಷ್ಟವಾಗುತ್ತದೆ. ಆದ್ದರಿಂದ ಪವರ್ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಮತ್ತು ಕೆ.ಇ.ಬಿ. ನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಕೈತಪ್ಪಿಹೋಗುತ್ತಿರುವ ಹಣ ಹೋಗದಂತೆ ತಡೆಗಟ್ಟಿ ಲಾಭದಾಯಕವಾಗಿ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ಹೇಳಬೇಕು. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ಬಂದಮೇಲೆ ನೀವು ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂಬುದು ಪ್ರಶ್ನೆ. ರಾಜ್ಯದ ಹಿತದೃಷ್ಟಿಯಿಂದ ಕೆ.ಇ.ಬಿ. ಮತ್ತು ಪವರ್ ಕಾರ್ಪೊರೇಷನ್ ಹಿತದೃಷ್ಟಿಯಿಂದ ಬಾಕಿ ಬರಬೇಕಾದ ಹಣವನ್ನು ವಸೂಲು ಮಾಡಬೇಕು.

ಶ್ರೀ ಜೆ. ಎಚ್. ಪಟೇಲ್.— ಮಾನ್ಯ ಸದಸ್ಯರು ಕೆಇಬಿಗೆ ಜನರಿಂದ ಬರಬೇಕಾದ ಹಣ ಹಾಗೂ ಬೇರೆ ಸಂಸ್ಥೆಗಳಿಂದ ಬರುವ ಹಣ ಎಷ್ಟು ಎಂದು ಹಾಗೂ ಕೆಇಬಿಯವರು ಕೆ .ಪಿ. ಸಿಯವರಿಗೆ ಕೊಡಬೇಕಾದ ಹಣ ಎಷ್ಟು ಎಂದು ಕೇಳಿದ್ದಾರೆ. ಸಾಮಾನ್ಯವಾಗಿ ಕೆಇಬಿಯಿಂದ ಕೆಪಿಸಿಗೆ ಬರಬೇಕಾದ ಹಣದಲ್ಲಿ ೧೦ರಿಂದ ೧೫ ಕೋಟಿ ರೂಪಾಯಿ ವ್ಯತ್ಯಾಸ ಇರಬಹುದು. ಇದು ೧೬೮ ಕೋಟಿ ಇದ್ದರೆ ಅದು ೧೯೦ ಕೋಟಿ ರೂ. ಇರುತ್ತದೆ. ಈ ಸ್ಥಿತಿ ಏಕೆ ಬಂತು ? ಕೆ.ಪಿ.ಸಿ.ಗೆ ಎಷ್ಟು ನೀರು ಬರುತ್ತದೋ ಅಷ್ಟು ವಿದ್ಯುತ್‌ನ್ನು ನಿಗಮದವರು ಉತ್ಪಾದನೆ ಮಾಡುತ್ತಾರೆ. ಅದರ ಮೇಲೆ ಅವರು ಟ್ಯಾಕ್ಸ್ ಹಾಕುತ್ತಾರೆ. ಆ ವಿದ್ಯುತ್ ಮೇಲೆ ಮಂಡಲಿಯವರು ಟ್ಯಾಕ್ಸ್ ಹಾಕುತ್ತಾರೆ. ನಾಲ್ಕು ವರ್ಷದಿಂದ ಸರಿಯಾಗಿ ನೀರೇ ಇಲ್ಲದಿದ್ದರೆ ಇವರು ಹೇಗೆ ವಿದ್ಯುತ್ ಉತ್ಪಾದಿಸುತ್ತಾರೆ ? ಅವರಿಗೆ ಆಗ

ಲುಕ್ಸಾನು ಆಗುತ್ತದೆ. ವಿದ್ಯುತ್ ಇಲ್ಲದ್ದರಿಂದ ಮಾರಾಟ ಕೂಡಾ ಕಡಿಮೆ ಆಗಿದೆ. ಇದರ ಜೊತೆಗೆ ಕೆಲವು ಸಾರ್ವಜನಿಕ ಉದ್ದಿಮೆದಾರರು ಮಂಡಲಿಗೆ ಬಾಕಿ ಕೊಡಬೇಕಾಗಿದೆ. ವಿಐಎಸ್ಎಲ್‌ನವರೇ ೨೦ ಕೋಟಿ ರೂಪಾಯಿ ಕೊಡಬೇಕಾಗಿದೆ ? ಏನು ಮಾಡಬೇಕು ನಾನು? ಅಲ್ಲಿ ಪವರ್ ಕಟ್ ಮಾಡಿದರೆ ೨೦ ಸಾವಿರ ಜನ ನೌಕರರ ಜೀವನ ಬಂದ್ ಆಗುತ್ತದೆ. ಕೆಲವು ಮುನಿಸಿಪಾಲಿಟಿಯವರು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮ್ ಅಡಿಯಲ್ಲಿ ಕೊಟ್ಟ ವಿದ್ಯುತ್ ಬಿಲ್‌ನ್ನು ಕೊಟ್ಟಿಲ್ಲ. ಇದಕ್ಕೆಲ್ಲಾ ಡಿಸ್‌ಕನೆಕ್ಟ್ ಮಾಡಬಹುದು. ಆದರೆ ಅದರಿಂದ ಪ್ರಯೋಜನ ಏನೂ ಆಗುವುದಿಲ್ಲ. ಒಂದು ಮಾತನ್ನು ನಾನು ಹೇಳುತ್ತೇನೆ. ಹಿಂದಿನಿಂದಲೂ ನಾವು ಬಹಳ ಕಡಿಮೆ ದರದಲ್ಲಿ ರೈತರಿಗೆ, ಸಾರ್ವಜನಿಕರಿಗೆ, ಸರ್ವ ವಿದ್ಯುತ್ ಮನೆಗಳಿಗೆ ವಿದ್ಯುತ್‌ನ್ನು ಒದಗಿಸುತ್ತಾ ಬಂದಿದ್ದೇವೆ, ಹಿಂದೆ ಬಹಳ ಚೀಪಾಗಿ ವಿದ್ಯುತ್ ಸಿಗುತ್ತಿತ್ತು, ಅದಕ್ಕೆ ಲೆಕ್ಕ ಇರಲಿಲ್ಲ. ಆದರೆ ಈಗ ವಿದ್ಯುತ್ ಬಹಳ ದುಬಾರಿಯಾಗಿದೆ. ಉಪಯೋಗ ಮಾಡಿಕೊಳ್ಳುವವರು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ಮತ್ತು ಪ್ರಾಂಪ್ಟ್ ಆಗಿ ಪೇ ಮಾಡಬೇಕು. ಕೆಲವು ಕಡೆ ಪೇಮೆಂಟ್ ಆಗಿಲ್ಲ. ಹೀಗಾದರೆ ಕೆ.ಇ.ಬಿ. ಹೇಗೆ ನಡೆಯಬೇಕು? ಆದುದರಿಂದ ನಾವು ಈ ಸ್ಥಿತಿ ಅನುಭವಿಸುತ್ತಿದ್ದೇವೆ.

ಅಧ್ಯಕ್ಷರು,— ಈಗ ಮಾನ್ಯ ರಘುಪತಿಯವರಿಂದ ಉತ್ತರ.

(ಗೊಂದಲ)

ಜಿಲ್ಲೆಗೆ ಒಬ್ಬರಂತೆ ಪ್ರಶ್ನೆ ಕೇಳಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಜಿ. ಎಂ. ಕಾನಡೆ.— ಅಧ್ಯಕ್ಷರೇ. ನಾನು ಪ್ರಶ್ನೆ ಕೇಳಬೇಕಾಗಿದೆ.

ಅಧ್ಯಕ್ಷರು.— ಹೀಗಾದರೆ ಎಲ್ಲ ಬೇಡಿಕೆಗಳನ್ನು ಗಿಲಿಟನ್ ಮಾಡಬೇಕಾಗುತ್ತದೆ.

ಶ್ರೀ ಜಿ. ಎಂ. ಕಾನಡೆ.— ಅಧ್ಯಕ್ಷರೇ, ಭ್ರಷ್ಟಾಚಾರದ ವಿಚಾರ ಮಾತನಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.— ಕಾನಡೆಯವರೇ ನಾವು ೨–೩ ದಿವಸ ಹಿಂದಿದ್ದೇವೆ ತಾವು ಹೊಸಬರು ಇದ್ದೀರಿ. ನಾಳೆ ನಾಳಿದ್ದು ಬೇಡಿಕೆಗಳನ್ನು ಚರ್ಚೆ ಮಾಡದೇ ಗಿಲಿಟಿನ್ ಹಾಕಬೇಕಾಗುತ್ತದೆ. ಚರ್ಚೆಗೆ ಅವಕಾಶ ಇಲ್ಲ. ಶಿವನಂಜಪ್ಪನವರೇ ತಾವು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

† ಶ್ರೀ ಜಿ. ಎಸ್, ಶಿವನಂಜಪ್ಪ.— ಅಧ್ಯಕ್ಷರೇ, ನಮ್ಮ ಭಾಗದ ಅಮ್ಮನಘಟ್ಟ ಎಂಬಲ್ಲಿ ಒಬ್ಬ ಎಂಜಿನಿಯರ್ ಸೋಲಾರ್ ಎನರ್ಜಿ ಉಪಯೋಗಿಸಿಕೊಂಡು ನೀರನ್ನು ಕಾಯಿಸುವ ಮಿಷನ್ ತಯಾರು ಮಾಡಿದ್ದಾನೆ. ಅದಕ್ಕೆ ಸುಮಾರು ೧ ಸಾವಿರ ರೂಪಾಯಿ ಖರ್ಚು ಬೀಳುತ್ತದೆ. ಟ್ಯಾಂಕನ್ನು ಸೇರಿಸಿದರೆ ಇನ್ನೊಂದು ಸಾವಿರ ರೂಪಾಯಿ ಆಗಬಹುದು. ಇದನ್ನು ತಮ್ಮ ಇಲಾಖೆಯ ವತಿಯಿಂದ ಇನ್ಸ್‌ಪೆಕ್ಟ್ ಮಾಡಿಸಿ ಸೂಕ್ತ ಕಂಡು ಬಂದರೆ ಇದನ್ನು ತಮ್ಮ ಇಲಾಖೆಯ ವತಿಯಿಂದ ಆ ಯುವಕ ಎಂಜಿನಿಯರ್‌ಗೆ ಪ್ರೋತ್ಸಾಹ ನೀಡಿ ಆ ಯಂತ್ರ ಸಾರ್ವಜನಿಕರಿಗೆ ಸುಲಭದಲ್ಲಿ ದೊರೆಯುವ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ತುಮಕೂರಿನಲ್ಲಿ ಸುಮಾರು ೨೦ ಬ್ಯಾಕ್ ಬಿಲ್ಲಿಂಗ್ ಕೇಸ್. ವಿಜಿಲೆನ್ಸ್ ಕೇಸ್‌ಗಳು ಸುಮಾರು ೪–೫ ದಿವಸಗಳ ಒಳಗೆ ತೀರ್ಮಾನವಾಗಿದೆ ಎಂದು ಗೊತ್ತಾಗಿದೆ. ಇದರಲ್ಲಿ ೧೦ ಸಾವಿರ ರೂಪಾಯಿ ಬರಬೇಕಾದ ಕಡೆ ಬರೀ ೫೦೦ ರೂಪಾಯಿ ೧ ಸಾವಿರ ರೂಪಾಯಿಗೆ ತೀರ್ಮಾನವಾಗಿದೆ ಎಂದು ತಿಳಿದುಬಂದಿದೆ. ಇಂತಹ ಸುಮಾರು ೨೦ ಕೇಸುಗಳು ಕೇವಲ ೩–೪ ದಿವಸಗಳ ಹಿಂದೆ ತೀರ್ಮಾನವಾಗಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.— ಆ ಬಿಲ್‌ಗಳದ್ದು ನಾನು ವಿಚಾರ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ. ಏಕೆಂದರೆ ಪೀನಲ್ ಹಾಕಿದ್ದಾರೆ ಎಂದು ಹೇಳಿದ್ದೀರಿ. ನನಗೆ ವಿವರಗಳು ಗೊತ್ತಿಲ್ಲ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದನ್ನು ವಿಚಾರಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಸೋಲಾರ್ ಎನರ್ಜಿ ಬಗ್ಗೆ ಕೆ.ಇ.ಬಿ.ಯಿಂದ ಪ್ರಯತ್ನ ನಡೆದಿದೆ. ನಾವು ಮೊದಲು ಸ್ಟ್ರೀಟ್ ಲೈಟ್‌ಗೆ ಸೋಲಾರ್ ಎನರ್ಜಿಯನ್ನು ಉಪಯೋಗ ಮಾಡುತ್ತಿದ್ದೆವು. ಅದು ಎಕನಾಮಿಕಲ್ ಆಗಿ ವಾಟರ್ ಹೀಟಿಂಗ್‌ನಲ್ಲಿ ನಡೆಯುತ್ತದೆ. ಈಗಾಗಲೇ ಕೆಲವು ಏಜೆನ್ಸಿಗಳು ಶುರು ಮಾಡಿದ್ದಾರೆ. ಸೋಲಾರ್ ವಾಟರ್ ಹೀಟರ್ಸ್ ಡೆಲ್ಲಿಯಲ್ಲಿ ಇವೆ. ಬೆಂಗಳೂರಿನಲ್ಲಿ ಇದರ ಪ್ರಯೋಜನವನ್ನು ಹೆಚ್ಚು ಜನ ಪಡೆಯುತ್ತಿಲ್ಲ. ಏಕೆಂದರೆ ವಾಟರ್ ಹೀಟಿಂಗ್‌ನಲ್ಲಿ ಎಲೆಕ್ಟ್ರಿಸಿಟಿಯನ್ನು ಉಪಯೋಗ ಮಾಡದೇ ಇದ್ದರೆ ನಮ್ಮ ರಾಜ್ಯದ ಇಂಡಸ್ಟ್ರಿಗಳನ್ನು ಸೇವೆ ಮಾಡಬಹುದು. ಬೆಂಗಳೂರು ಸಿಟಿಯಲ್ಲಿ ಎ.ಇ.ಹೆಚ್.ಗೆ ಒಂದು ದಿನದ ಸರಾಸರಿ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡರೆ ೧೩ ಮಿಲಿಯನ್ ಯೂನಿಟ್ಸ್ ಇದ್ದರೆ, ಅದರಲ್ಲಿ ೬-೭ ಮಿಲಿಯನ್ ಯೂನಿಟ್ ಬರೇ ವಾಟರ್ ಹೀಟಿಂಗ್‌ಗೆ ಉಪಯೋಗ ಆಗುತ್ತದೆ. ಶ್ರೀ ಬಸವಲಿಂಗಪ್ಪನವರ ಮನೆಯಲ್ಲಿ ಎಷ್ಟು ಹೀಟರ್‌ಗಳನ್ನು ಇಟ್ಟಿದ್ದಾರೋ ಗೊತ್ತಿಲ್ಲ. ಬೆಂಗಳೂರಿನ ಜನ ವಾಟರ್ ಹೀಟಿಂಗ್‌ಗೆ ಸೋಲಾರ್ ಸಿಸ್ಟಮ್ ಅನ್ನು ಉಪಯೋಗ ಮಾಡಿಕೊಂಡರೆ ದೊಡ್ಡ ಸಹಾಯ ಆಗುತ್ತದೆ. ಅದನ್ನು ಕೆ.ಇ.ಬಿ.ಯವರು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಬೇರೆ ಏಜೆನ್ಸಿಯವರೂ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು, ತಾವು ಒಬ್ಬ ಇಂಜಿನಿಯರ್ ಬಗ್ಗೆ ಹೇಳಿದ್ದೀರಿ. ಅವರನ್ನು ಕಳಿಸಿಕೊಡಿ ಆತ ಏನು ಮಾಡಿದ್ದಾರೋ ನೋಡೋಣ. ಸೋಲಾರ್ ವಾಟರ್ ಹೀಟರ್‌ನ್ನು ಕೆಲವರು ಚೆನ್ನಾಗಿ ಮಾಡಿದ್ದಾರೆ. ನನ್ನ ಮನೆಯಲ್ಲಿ ಯಾರೋ ತಂದು ಹಾಕಿದ್ದಾರೆ. ಏನೂ ಉಪಯೋಗ ಆಗಿಲ್ಲ. ಕೆಲವು ಕಡೆ ಚೆನ್ನಾಗಿ ಕೆಲಸ ಮಾಡಿದೆ. ಆತನನ್ನು ಕಳಿಸಿಕೊಡಿ, ನೋಡೋಣ.

ಶ್ರೀ ಆರ್. ರಾಮಯ್ಯ.—ಈಗಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ವಿಂಡ ಮಿಲ್ಸ್ ಸ್ಥಾಪನೆ ಮಾಡುತ್ತೀರಾ ? ವಾಣಿವಿಲಾಸ್ ಸಾಗರ್‌ದಲ್ಲಿ ನೀರಿನಿಂದ ವಿದ್ಯುತ್ ಉತ್ಪಾದನೆ ಮಾಡಬಹುದು ಎಂದು ಸಲಹೆ ಇದೆ. ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇನ್ನು ವಿದ್ಯುಚ್ಛಕ್ತಿಯಲ್ಲಿ ಈಗೇನು ೨೨ ಪರ್ಸೆಂಟ್ ಸೋರಿ ಹೋಗುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಯಾವ ಕ್ರಮ ಕೈಗೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ವಿಂಡ್‌ಮಿಲ್ಸ್ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣುತ್ತದೆ. ಈಗಾಗಲೇ ಒಂದು wind mill has been erected and it is going to commissioned in a few weeks. ಇನ್ನೂ ಎರಡನ್ನು ಅದರ ಜೊತೆಗೆ ಹಾಕಿ ಕೊಡಗಿನಲ್ಲಿ ಮಾಡಿದ್ದೇವೆ. ಅದೂ ಪ್ರಯೋಗಾರ್ಥವಾಗಿ. ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ ವಿಂಡ್‌ಮಿಲ್ಸ್‌ನಿಂದ ವಿದ್ಯುಚ್ಛಕ್ತಿಯನ್ನು ನಮ್ಮ ರಾಜ್ಯದಲ್ಲಿ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ನಾನು ಬೇರೆ ದೇಶಗಳಲ್ಲಿ ನೋಡಿದ್ದೇನೆ, ಕ್ಯಾಲಿಫೋರ್ನಿಯಾದಲ್ಲಿ ಸುಮಾರು ೨೫೦ ಮೆಗಾವ್ಯಾಟ್ ವಿದ್ಯುತ್‌ನ್ನು ವಿಂಡ್‌ಮಿಲ್ಸ್ ಮೂಲಕ ಉತ್ಪಾದನೆ ಮಾಡುತ್ತಾರೆ. ಕಾರಣ ಏನೆಂದರೆ ವಿಂಡ್ ವೆಲಾಸಿಟಿ ಮತ್ತು ಕನ್ಸಿಸ್ಟೆನ್ಸಿ ಆಫ್ ವೆಲಾಸಿಟಿ ಅವು ಬೇಕಾಗುತ್ತದೆ. ನಾವು ಇಲ್ಲಿ ಎಕ್ಸ್‌ಪೆರಿಮೆಂಟ್ ಆಗಿ ಮಾಡಿದ್ದೇವೆ. ಇನ್ನು ಎರಡು-ಮೂರು ವಾರದಲ್ಲಿ ಅದನ್ನು ಕಮೀಷನ್ ಮಾಡಿ then I will put thn matter before the House.

ಶ್ರೀ ಆರ್. ರಾಮಯ್ಯ.—ವಾಣಿವಿಲಾಸ ಸಾಗರದ್ದು ಏನು ಹೇಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಅದನ್ನು ನಂಬಿ ಜನರೇಟರ್ ಹಾಕಿದರೆ ಕಷ್ಟ. ಅಲ್ಲಿ ಯಾವ ವರ್ಷ ನೀರು ಬರುತ್ತದೋ, ಯಾವ ವರ್ಷ ಬರುವುದಿಲ್ಲವೋ ಗೊತ್ತಿಲ್ಲ. ಕುಡಿಯುವುದಕ್ಕೆ ನೀರು ಇಲ್ಲವಾಗಿದೆ. ಅಲ್ಲಿರುವ ಬಾವಿಗಳು ಒಣಗಿಹೋಗಿವೆ, ಅದಕ್ಕೆ ಹೈಟ್ ಬೇಕಾಗುತ್ತದೆ. ಸಾಧ್ಯವಿಲ್ಲ.

ಶ್ರೀ ಆರ್. ರಾಮಯ್ಯ.—ವಿದ್ಯುತ್ ಸೋರಿಹೋಗುವ ಬಗ್ಗೆ ?

ಶ್ರೀ ಜೆ. ಹೆಚ್. ಪಟೇಲ್.—ಆಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಮಂತ್ರಿಗಳು ಉತ್ತರ ಕೊಡುವಾಗ ನೀವು ಇರುವುದಿಲ್ಲ, ಈಗ ಬಂದು ಪುನಃ ಕೇಳುತ್ತೀರಿ.

ಶ್ರೀ ಕೆ. ಕುಶಾಲ್.—ಮಾನ್ಯ ಅಧ್ಯಕ್ಷರೆ, ಭಾಗ್ಯಜ್ಯೋತಿ ಯೋಜನೆಯನ್ವಯ ಸಿಂಗಲ್‌ಬಲ್ಬ್ ಮನೆಯವರಿಗೆ ಹಣಪಾವತಿ ಮಾಡಬಾರದು ಎಂದು ಆದೇಶ ಇದೆ. ಆದರೆ ವಿದ್ಯುಚ್ಛಕ್ತಿ ಇಲಾಖೆ

ಯವರು ಹಣ ಪಾವತಿ ಮಾಡದಿದ್ದರೂ, ಹಣ ಕೊಡಲಿ ಎನ್ನುವ ಉದ್ದೇಶದಿಂದ ಈ ಸಿಂಗಲ್ ಬಲ್ಬನ್ನು ಡಿಸ್‌ಕನೆಕ್ಟ್ ಮಾಡಿದ ಅನೇಕ ನಿದರ್ಶನಗಳು ಇವೆ. ಕಳೆದ ಸಲ ಈ ಪ್ರಶ್ನೆಯನ್ನು ಎತ್ತಿದಾಗ ಅಂತಹವರಿಗೆ ಪುನಃ ಭಾಗ್ಯಜ್ಯೋತಿ ಸೌಲಭ್ಯವನ್ನು ಕಟ್ಟುನಿಟ್ಟಾಗಿ ಆದೇಶ ಹೊರಡಿಸಿ ಕೊಡುವುದಾಗಿ ಉತ್ತರಿಸಿದ್ದರು. ಆದರೆ ಇನ್ನೂ ಕೂಡ ನನ್ನ ಕ್ಷೇತ್ರದಲ್ಲಿ ಡಿಸ್‌ಕನೆಕ್ಟ್ ಮಾಡಿದ ಅನೇಕ ಉದಾಹರಣೆಗಳಿವೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಟ್ರೈಬಲ್ ಸಬ್‌ಪ್ಲಾನ್‌ನಲ್ಲಿ ಪಿಎಲ್‌ಡಿ ಮತ್ತು ಸೊಸೈಟಿಯಿಂದ ಸಾಲ ಪಡೆದವರಿಗೆ, ಕೃಷಿಕರಿಗೆ ಇನ್ನೂ ಕೂಡ ಅವರ ಪಂಪುಸೆಟ್ಟುಗಳಿಗೆ ವಿದ್ಯುತ್ ಕನೆಕ್ಷನ್ ಕೊಟ್ಟಿಲ್ಲ. ಕಳೆದ ಐದು ವರ್ಷಗಳಿಂದಲೂ ಈ ಕನೆಕ್ಷನ್ ಕೊಡದೇ ಇರತಕ್ಕಂಥ ಅನೇಕ ಪ್ರಕರಣಗಳು ನನ್ನ ತಾಲ್ಲೂಕಿನಲ್ಲಿ ನಡೆದಿವೆ. ಇಂತಹ ಪ್ರಕರಣಗಳು ಈ ರಾಜ್ಯದಲ್ಲಿ ಎಷ್ಟು ಇವೆ ಎಂದು ನಾನು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಭಾಗ್ಯಜ್ಯೋತಿ ಸ್ಕೀಮ್, ನಾವು ವರ್ಷಕ್ಕೆ ಹಾಕಿಕೊಂಡಿರತಕ್ಕ ಟಾರ್ಜೆಟ್ ಪ್ರಕಾರ ಲಾಸ್ಟ್ ಟೈಮ್ ೨೫ ಸಾವಿರ ಮುಗಿಸಿದ್ದೇವೆ. ಅದರ ಹಿಂದಿನ ವರ್ಷ ಹಾಕಿಕೊಂಡಿದ್ದನ್ನೂ ಮುಗಿಸಿದ್ದೇವೆ. ಡಿಸ್‌ಕನೆಕ್ಟ್ ಕೆಲವು ಕಡೆ ಆಗಿದೆ, ಇಲ್ಲವೆಂದಲ್ಲ ನಾಮಿನಲ್ ಆಗಿ ಒಂದು ಬಲ್ಬ್ ಇರತಕ್ಕಂಥವರು ಒಂದು ತಿಂಗಳಿಗೆ ೧½ ರೂಪಾಯಿ ಕಟ್ಟಬೇಕೆಂದು ಇದೆ, ಅದನ್ನೂ ಅವರು ಕಟ್ಟಿರಲಿಲ್ಲ ಇದು ಸಾವಿರಗಟ್ಟಲೆ ಆಯಿತು. ಇದನ್ನು ಯಾರು ಕೊಡುವುದು ನಾವು ಹೇಳಿದೆವು ಕಂತಿನ ಮೂಲಕವಾಗಿ ಕೊಡಿ ಎಂದು ಹೇಳಿದೆವು. ಹಾಗೂ ಕೆಲವು ಕಡೆ ಡಿಸ್‌ಕನೆಕ್ಟ್ ಮಾಡಿದೆವು. ಈಗಿನ ಸ್ಥಿತಿಯನ್ನು ನೋಡಿ. ಇದನ್ನು ಪರ್ಸೂಯೆನ್ಸ್ ಮಾಡಿ, ಆದಷ್ಟು ವಸೂಲ್ಮಾಡಿ ಎಂದು ಹೇಳಿದ್ದೇವೆ.

ಶ್ರೀ ಯಂ. ಭೂಪತಿ.—ಮಾನ್ಯ ಅಧ್ಯಕ್ಷರೇ, ೫–೬ ತಿಂಗಳ ಹಿಂದೆ ಮಾನ್ಯ ಸಚಿವರಾದ ಶ್ರೀ ಜೆ. ಹೆಚ್. ಪಟೇಲ್‌ರವರು ಟೈಮ್ಸ್ ಆಫ್ ಇಂಡಿಯಾ ಪ್ರತಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿರುವುದನ್ನು ನೋಡಿದ್ದೇನೆ. ಬಳ್ಳಾರಿ ಮತ್ತು ಹೊಸಪೇಟೆ ಮಧ್ಯದಲ್ಲಿ ತೋರಣಗಲ್ಲಿನಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಅಲ್ಲಿ ಒಂದು ಕೋಲ್ ಥರ್ಮಲ್ ಪ್ಲಾಂಟ್‌ನ್ನು ಮಾಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದೆ ಎಂದು ಹೇಳಿದ್ದೀರಿ. ನಾನು ತಮ್ಮ ಭಾಷಣದಲ್ಲಿ ಹೇಳುತ್ತೀರೆಂದು ಇದ್ದೆ, ಆದರೆ ನೀವು ಹೇಳಲಿಲ್ಲ. ನಂತರ ಭಾಗ್ಯಜ್ಯೋತಿ ಬಗ್ಗೆ ಹೇಳುತ್ತಾ ಮಿನಿಮಮ್ ಫೀಜನ್ನು ಕಟ್ಟಿಲ್ಲ ಎಂದು ಹೇಳಿದ್ದೀರಿ. ಮತ್ತೆ ಕೆಲವು ಕಡೆ ಡಿಸ್‌ಕನೆಕ್ಟ್ ಮಾಡಿದ್ದೇವೆಂದು ಹೇಳಿದ್ದೀರಿ, ಇದು ಸರಿಯಲ್ಲ, ಕೆಲವು ಕಡೆ ಅಲ್ಲ, ಎಲ್ಲಾ ಕಡೆ ಡಿಸ್‌ಕನೆಕ್ಟ್ ಮಾಡಿದ್ದಾರೆ. ಮಿನಿಮಮ್ ಫೀಜ್ ಕಟ್ಟದೇ ಇರುವುದಕ್ಕೆ ಕಾರಣ, ಕೆ.ಇ.ಬಿ. ನವರು ಎಂದೂ ನೋಟೀಸ್ ಕೊಟ್ಟಿಲ್ಲ, ೪ ರೂಪಾಯಿ, ೬ ರೂಪಾಯಿ ಇದೆಯೆಂದು ನೋಟೀಸ್ ಕೊಟ್ಟಿಲ್ಲ. ಒಂದೇ ಸಾರಿ ೫೦೦–೧೦೦೦ ರೂಪಾಯಿಗಳ ಬಿಲ್ ಕೊಟ್ಟರೆ ಯಾವರೀತಿ ಕಟ್ಟಬೇಕು, ದಯಮಾಡಿ ಇದನ್ನು ವೇವ್ ಆಫ್ ಮಾಡಬೇಕು. ಇನ್ನು ಮುಂದಬೇಕಾದರೆ ಇದನ್ನು ಮುಂದುವರಿಸಿ, ಹಾಲಿ ಇರುವುದನ್ನು ವೇವ್ ಆಫ್ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ತೋರಣಗಲ್ ಪ್ರಾಜೆಕ್ಟ್ ಬಗ್ಗೆ ನಾನು ಮೆನ್‌ಷನ್ ಮಾಡಿಲ್ಲ. ಏಕೆಂದರೆ ನಾವು ಏನು ಹೇಳಿದ್ದೇವೆ, Because of inadequacy of railway facilities to transport coal from western, northern and Central coal mines, it is better to have the termal plants on coastal line, ಆದ್ದರಿಂದ ನಾವು ಏನು ಹೇಳಿದ್ದೇವೆ, ಕೋಸ್ಟಲ್ ಆದರೆ ಷಿಪ್ ಮೂಲಕ ತರಬಹುದು ಅದಕ್ಕೆ ಆಲ್ಟರ್‌ನೇಟೀವ್ ಆಗಿ ಏನು ಹೇಳಿದ್ದೇವೆ, ಇವತ್ತು ತೋರಣಗಲ್ ಏರಿಯಾ ಏನಿದೆ, ವಿಜಯನಗರ ಉಕ್ಕಿನ ಕಾರ್ಖಾನೆಗೆ ಜಮೀನು ಅಕ್ವೈರ್‌ಮಾಡಿಕೊಂಡಿದ್ದೇವೆ, ಅಲ್ಲಿ ಖಾಲಿ ಜಾಗೆ ಇದೆ. ಕೋಲ್ ಫೆಸಿಲಿಟಿ ಏನೆಂದರೆ, ಇಲ್ಲಿಂದ ಐರನ್ ಓರ್ ತೆಗೆದುಕೊಂಡು ಮದ್ರಾಸ್ ಲೈನ್‌ಗೆ ಹೋಗುತ್ತದೆ. ಆ ಕಡೆಯಿಂದ ಖಾಲಿ ಬರುವುದರ ಬದಲು ಕೋಲ್ ತರುತ್ತಾರೆ, ಇಲ್ಲಿಗೆ ಅನುಕೂಲವಾಗುತ್ತದೆ. ಅಲ್ಲಿ ಬ್ರಾಡ್‌ಗೇಜ್ ಫೆಸಿಲಿಟಿ ಇದೆ, ಮಂಗಳೂರು ಹತ್ತಿರ ಸೂಪರ್ ಥರ್ಮಲ್ ಪ್ಲಾನ್ಟ್ ಮಾಡಿ, the coal based super thermal plant which ultimately yields 2,000 M Ws ಇದನ್ನು ಕೇಳಿದ್ದೇವೆ. ಮಂಗಳೂರು ಬಹಳ ಕಂಜೆಸ್ಟ್ ಆಗುತ್ತದೆ ಎಂದರೆ, ಬೇಕಾದರೆ ಇಲ್ಲಿಗೆ ಕೊಡಲಿ. ಈ ಬಗ್ಗೆ ನಮಗೆ

ಇನ್ನೂ ಏನೂ ಬಂದಿಲ್ಲ. ಈ ವಿಷಯವನ್ನು ಇನ್ನು ಕಳುಹಿಸಿಯೇ ಇಲ್ಲವೆಂದು ಹೇಳಿದರು, ನಾನೇ ಸ್ವತಃ ಪತ್ರವನ್ನು ಕಳುಹಿಸಿದ್ದೇನೆ.

ಶ್ರೀ ಎಸ್. ಜಿ. ನಂಜಯ್ಯನಮಠ್.—ಅಧ್ಯಕ್ಷರೇ, ಭಾಗ್ಯಜ್ಯೋತಿ ಬಗ್ಗೆ ಸರಿಯಾಗಿ ಹೇಳಲಿಲ್ಲ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಒಂದೇಸಾರಿ ಕಟ್ಟುವುದಕ್ಕಾಗುವುದಿಲ್ಲವೆಂದು ನನಗೂ ಗೊತ್ತಿದೆ. ೫೦೦–೧೦೦೦ ರೂಪಾಯಿಗಳನ್ನು ಒಂದೇಸಾರಿ ಕಟ್ಟುವದಕ್ಕಾಗುವುದಿಲ್ಲ. ಆದರೆ ಇದನ್ನು ವೇವ್ ಆಫ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ನಾವು ದಾನಧರ್ಮ ಸಿದ್ಧಾಂತದ ಮೇಲೆ ಹೋಗುತ್ತಿದ್ದೇವೆ. ಬೇಕಾದರೆ ಸುಲಭ ಕಂತಿನ ಮೂಲಕ ಕಟ್ಟುವ ವ್ಯವಸ್ಥೆ ಮಾಡಬಹುದು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಕೆ.ಇ.ಬಿ. ನವರು ನೋಟೀಸನ್ನೇ ಕೊಟ್ಟಿಲ್ಲ. ಡಿಸ್‌ಕನೆಕ್ಟ್ ಮಾಡಿದ್ದಾರೆ. ನೀವು ಹಾಲಿ ಇರುವ ಬಾಕಿಯನ್ನು ವೇವ್ ಆಫ್ ಮಾಡಿ, ಇನ್ನು ಮುಂದೆ ವಸೂಲ್ಮಾಡಿ. ಇಲ್ಲಿಯವರೆಗೂ ಲಕ್ಷಾಂತರ ಬಡವರ ಸಲುವಾಗಿ, ನಿಮ್ಮ ಕೊಡುಗೆ ಆಗಿಲ್ಲವೆಂದು ನಾವು ನಿವೇದನೆ ಮಾಡುತ್ತೇವೆ. ೩೫–೪೦ ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡುವಾಗ, ಒಂದು ಸಣ್ಣ ಮನೆಯಲ್ಲಿ ವಾಸ ಮಾಡುವಂಥ ಹಿಂದುಳಿದ ವರ್ಗದ, ಅಲ್ಪಸಂಖ್ಯಾತರ, ಬಡವರ, ಈ ಹಣವನ್ನು ಮನ್ನಾ ಮಾಡಿ. ಇನ್ನು ಮುಂದೆ ವಸೂಲ್ಮಾಡಿ. ಇದರಿಂದ ದೊಡ್ಡ ವೈಪರೀತ್ಯವೇನೂ ಆಗುವುದಿಲ್ಲ. ಇದರಿಂದ ಸರ್ಕಾರಕ್ಕೆ ದೊಡ್ಡ ಭಾರವೂ ಬೀಳುವುದಿಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈಗ ಅದಕ್ಕೆ ಕೇವಲ ೧೦ ರೂಪಾಯಿ ಕಟ್ಟಿದರೂ ಸಾಕು. ೧೦ ರೂಪಾಯಿ ಇನ್‌ಸ್ಟಾಲ್‌ಮೆಂಟ್ ಕಟ್ಟಿಕೊಂಡು ಹೋದರೆ ಡಿಸ್‌ಕನೆಕ್ಸ್ ಮಾಡಬಾರದು ಎಂಬ ನಿಯಮ ಕಳುಹಿಸಿದ್ದೇವೆ. ೧೦ ರೂಪಾಯಿ ಪ್ಲಸ್ ಪ್ರೆಸೆಂಟ್ ಕನ್‌ಸಂಪ್‌ಷನ್ ಚಾರ್ಜಸ್, ಇದು ನಾಲ್ಕುವರೆ—ಐದು ರೂಪಾಯಿ ಆಗಬಹುದು. ಒಟ್ಟು ಹದಿನೈದು ರೂಪಾಯಿಗಳನ್ನು ತಿಂಗಳಿಗೆ ಕಟ್ಟಿಕೊಂಡು ಹೋದರೂ ಯಾವ ರೀತಿಯಿಂದಲೂ ನಾವು ಡಿಸ್‌ಕನೆಕ್ಟ್ ಮಾಡುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ, ಕೆಲವರು ಬಡವರು ದೀಪವನ್ನೇ ನೋಡಿರುವುದಿಲ್ಲ. ಅಂತಹವರಿಗೆ ಒಂದು ದೀಪ ಕೊಟ್ಟರೆ, ಅದನ್ನೂ ಕೂಡಾ ದಂಡು ತುಂಬಲಿಲ್ಲ ಎಂದು ಡಿಸ್‌ಕನೆಕ್ಟ್ ಮಾಡಿದ್ದೀರಿ, ಕೆಲವೊಂದು ಫೈಲ್ ನಂಬರ್‌ನ್ನು ಇಲ್ಲಿ ಹೇಳುತ್ತೇನೆ. ಎಷ್ಟು ಕೋಟಿ ರೂಪಾಯಿ ಇವರು ಕೆ.ಇ.ಬಿ.ಗೆ ಕೊಡಬೇಕು. ಹೇಳಿ. ಫೈಲ್ ನಂಬರ್ ೨೮–೧೦–೮೬, ೪–೨–೮೭, File No. ಬಿ.ಒ.ನಂ: ಕೆಇಬಿ ೧೦/೨೦೪೮;೮೬–೮೭ ; ಇದಕ್ಕೆ ಸಂಬಂಧಪಟ್ಟ ಎಷ್ಟು ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಎಂದರೆ ಬೆಂಗಳೂರಿನಲ್ಲಿ ಎಷ್ಟು ಇವೆಯೋ ಇವೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಕೆ.ಇ.ಬಿ.ಗೆ ಕೊಡಬೇಕಾಗಿದ್ದರೂ ತಮಗೆ ಬೇಕಾದಂತೆ ಮನ್ನಾ ಮಾಡಿಸಿಕೊಂಡಿದ್ದಾರೆ, ಆ ಫೈಲ್‌ಗಳನ್ನು ತಂದು ಎದುರಾಗಡೆ ಇಡಬೇಕು. ಇನ್ನು ಪೀಣ್ಯ ಮೂರನೇ ಹಂತದಲ್ಲಿರುವ ಈಶ್ವರ ಸಾ ಬೋರ್ಡ್ ಕಂಪೆನಿಯವರು ಕೆ. ಇ. ಬಿ. ಗೆ ಬ್ಲಾಕ್ ಬಿಲ್ ಎಂದು ಎಂಟೂವರೆ ಲಕ್ಷ ರೂಪಾಯಿಗಳನ್ನು ತುಂಬಬೇಕಾಗಿತ್ತು. ಆದರೆ ಅದನ್ನು ಕೆ.ಇ.ಬಿ. ಅಧ್ಯಕ್ಷರ ಜೊತೆ ಕಾಂಪ್ರೊಮೈಸ್ ಮಾಡಿ ಎರಡೂವರೆ ಲಕ್ಷ ರೂಪಾಯಿ ತುಂಬಿಸಿಕೊಂಡಿದ್ದಾರೆ, ಪುನಃ ಆ ಎರಡೂವರೆ ಲಕ್ಷರೂಪಾಯಿಗಳನ್ನು ವಾಪಸ್ ಕೊಟ್ಟಿದ್ದಾರೆ. ಇನ್ನು ಮೂರನೆಯದು ಬೃಂದಾವನ್ ಆಯಿಲ್ ಕಂಪೆನಿಯವರಿಂದ ೧೯೮೫ರಲ್ಲಿ ಪ್ರತಿತಿಂಗಳೂ ಕೆ.ಇ.ಬಿ.ಗೆ ಎಷ್ಟು ದುಡ್ಡು ಬರುತ್ತಿತ್ತು, ಈಗ ಎಷ್ಟು ಬರುತ್ತಿದೆ ಎಂಬುದನ್ನು ಹೇಳಬೇಕು. ಇನ್ನು ಸಿಂಗಪುರ್ ಮಿಲ್‌ನವರಿಗೆ ೪೪೦೦ ಯೂನಿಟ್ ವಿದ್ಯುಚ್ಛಕ್ತಿಯನ್ನು ಸ್ಯಾಂಕ್ಷನ್ ಮಾಡಿದುದನ್ನು ಬದಲಾಯಿಸಿ ೧೦ ಸಾವಿರ ಯೂನಿಟ್ ಸ್ಯಾಂಕ್ಷನ್ ಮಾಡಿರುತ್ತಾರೆ. ಬಡವರಿಗೆ ಐದು ರೂಪಾಯಿ ಫೀಸ್ ಕಟ್ಟಲಿಲ್ಲ ಎಂದು ಕನೆಕ್ಷನ್ ತೆಗೆಯುತ್ತಿದ್ದೀರಿ. ನೀವು ಇಲ್ಲಿ ನನ್ನ ಬಾಯಿ ಮುಚ್ಚಿಸುತ್ತೀರಿ. ಆಫೀಸ್‌ನಲ್ಲಿ ನನ್ನ ಬಾಯಿ ಮುಚ್ಚಿಸುತ್ತೀರಿ. ಆಫೀಸ್‌ನಲ್ಲಿ ಕೊಟ್ಟ ಒಂದು ಲೆಟರ್‌ಗೂ ಉತ್ತರ ಬರುವುದಿಲ್ಲ. ನಾನು ಹೇಳಿದ ಫೈಲ್ ನಂಬರ್ ಏನಿದೆ, ಇನ್ನೂ ಇದೇ ತರಹ ಕರ್ನಾಟಕದಲ್ಲಿ ಎಷ್ಟು ಕಂಪನಿಗಳಿಗೆ ೧೦ ಲಕ್ಷ ೧೫ ಲಕ್ಷ ಯೂನಿಟ್ ಕೊಟ್ಟು ಕಡಿಮೆ ಬಿಲ್ ಮಾಡುವ ಕೆಲಸ ಏನಿದೆ, ಮತ್ತು ನಾರ್ಮಲ್ ಬಿಲ್ ಮಾಡುವ ಕೆಲಸ ಏನಿದೆ ಅದನ್ನು ಎಷ್ಟು ಕಂಪೆನಿಗಳಿಗೆ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಇನ್ನು ಮೂರು ನಾಲ್ಕು ವರ್ಷಗಳಿಂದ ಕೆ.ಇ.ಬಿ.ಯ ಲೆಕ್ಕ

ತಪಾಸಣೆ ಆಗಿಲ್ಲ. ೧೯೮೪-೮೫ ರಿಂದಲೂ ಸಹ ೧೯೮೭-೮೮ರವರೆಗೂ ಲೆಕ್ಕತಪಾಸಣೆ ಆಗಲಿಲ್ಲ ಇದಕ್ಕೆ ಕಾರಣ ಏನು ?

ಶ್ರೀ ಜೆ. ಹೆಚ್. ಪಟೇಲ್.— ಯಾರದ್ದೋ ಬಿಲ್ ಮನ್ನಾ ಮಾಡಿಬಿಟ್ಟಿದ್ದಾರೆ, ಎಂದು ಅಲಿಗೇಷನ್ಸ್ ಮಾಡಿದ್ದಾರೆ. ಯಾವುದೋ ಫೈಲ್ ನಂಬರ್‌ನ್ನು ಹೇಳಿದರು ಅವರು ಅದನ್ನು ನನಗೆ ಕೊಡಲಿ. ನಾನು ಅದನ್ನು ನೋಡುತ್ತೇನೆ ಯಾವ ಫೈಲ್. ಏನು ಎಂದು ನೋಡುತ್ತೇನೆ. ನಾನೇನೂ ಅವರಿಗೆ ಫೈಲ್ ಕೊಡುವ ಅವಶ್ಯಕತೆ ಇಲ್ಲ, ಅವರಿಗೆ ಕೇಳುವುದಕ್ಕೆ ಅಧಿಕಾರವೂ ಇಲ್ಲ. ಇವರು ಫೈಲ್ ಕೇಳಿಬಿಡುತ್ತಾರೆ, ಇವರಿಗೆ ಫೈಲ್ ಕೊಡುವುದಾದರೆ ನಾನು ಏತಕ್ಕೆ ಸರಕಾರ ನಡೆಸಬೇಕು. ಇಂತಹ ಕಂಪೆನಿಗಳಿಗೆ ಮನ್ನಾ ಮಾಡಿದ್ದಾರೆ ಎಂದು ಹೇಳಿದ್ದಾರೆ, ನನಗೆ ತಿಳಿದಿರುವಹಾಗೆ ಯಾವ ಕಂಪೆನಿಗೂ ಸಹ ಬಾಕಿಯನ್ನು ಮನ್ನಾ ಮಾಡಿಲ್ಲ, ಕೋರ್ಟ್‌ನಲ್ಲೋ ಮತ್ತೊಂದು ಕಡೆನೋ ಸೆಟಲ್ ಆಗಿದ್ದರೆ ಆಗಿರಬಹುದು. ಕೋರ್ಟ್ ಡೈರೆಕ್ಷನ್ ಮೇಲಾಗಿದ್ದರೆ ಆಗಿರಬಹುದೇ ವಿನಃ ಕೆ.ಇ.ಬಿ. ಯವರು ಯಾವುದೇ ಕಾರ್ಖಾನೆಯ ಬಿಲ್ಲನ್ನು ಮನ್ನಾ ಮಾಡಿಲ್ಲ. ಯಾರೋ ಒಬ್ಬರಿಗೆ ಮೊದಲು ಕಡಿಮೆ ಯೂನಿಟ್ಸ್ ಕೊಟ್ಟಿದ್ದು, ನಂತರ ಜಾಸ್ತಿ ಕೊಡಲಾಗಿದೆ ಎಂದು ಹೇಳಿದರು. ಅದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆ, ಅಲ್ಲೇನಾದರೂ ಇರೆಗ್ಯುಲಾರಿಟಿ ಇದ್ದೆ, ಫೇವರಿಸಿಟಿ ಇದೆ, ಸಸ್ಪೆನ್‌ಷನ್ ಇದೆ ಎಂದರೆ. ಅವ್ಯವಹಾರ ಆಗಿದ್ದರೆ ಅದರ ಬಗ್ಗೆ I will certainly enquire about these individual cases. ಇನ್ನು ಕೆ.ಇ.ಬಿ. ಆಡಿಟ್ ಬಗ್ಗೆ ಹೇಳಿದ್ದಾರೆ. upto 1986-87 the K.E:B. Accounts have been audited.........
ಆಡಿಟ್ ರಿಪೋರ್ಟ್ ಬೇಕೆಂದರೆ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೇ,....... . ...

ಅಧ್ಯಕ್ಷರು.— ಕಾನಡೆಯವರೇ, ಕೊಡ್ರಿ, ಆಯಿತು.

ಶ್ರೀ ಗೋಪಾಲ ಮುಕುಂದ ಕಾನಡೆ.—ಫೈಲ್ ನಂಬರ್ ಹೇಳುತ್ತೇನೆ. ಬರೆದುಕೊಂಡು ಬಿಡಲಿ.

ಶ್ರೀ ಜೆ. ಹೆಚ್. ಪಟೇಲ್.— ಅದರ ಫೋಟೋಸ್ಟಾಟ್ ಕಾಪಿ ಕಳುಹಿಸಿ.

ಶ್ರೀ ಗೋಪಾಲ ಮುಕುಂದ ಕಾನಡೆ.— ಒಂದೊಂದು ಕಡೆ ೧೦ ಸಾವಿರ ರೂಪಾಯಿ ಮನ್ನಾ ಮಾಡಿದ್ದಾರೆ. ಅದರ ಕಾಪಿ ತಮಗೂ ಕಳುಹಿಸುತ್ತೇನೆ. ಪೇಪರ್‌ನವರಿಗೂ ಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಪೇಪರ್‌ನವರಿಗೂ ಕೊಡಿ, ಆಲ್ ಇಂಡಿಯಾ ರೇಡಿಯೋನಲ್ಲಿ ಹೇಳಿ. ಸಾಧ್ಯವಾದರೆ ಟಿ.ವಿ.ನಲ್ಲೂ ಅಪಿಯರ್ ಆಗಿ ಹೇಳಿರಿ,

ಶ್ರೀ ಗೋಪಾಲ ಮುಕುಂದ ಕಾನಡೆ.— ಭಾಗ್ಯಜ್ಯೋತಿಗೆ ಮನ್ನಾ ಮಾಡಿ ಎಂದರೆ ಮಾಡುವುದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಇನ್ನೊಂದು ಕಡೆ ಮನ್ನಾ ಮಾಡುತ್ತಾರೆ.

ಅಧ್ಯಕ್ಷರು.— ಪೇಪರ್‌ಗೆ ಕೊಡುತ್ತೇನೆ ಎಂದರಲ್ಲ ಕೊಡಿರಿ.

ಶ್ರೀ ಕೆ. ಬಿ. ಶಾಣಪ್ಪ.— ಮಾನ ಅಧ್ಯಕ್ಷರೇ ಎರಡು ವರ್ಷಗಳಿಂದ ಈ ಎ.ಬಿ.ಎಲ್ ಫ್ಯಾಕ್ಟರಿ ಲಿಕ್ವಿಡೇಟ್ ಆಗಿ ಬಂದ್ ಆಗಿದೆ. ಸುಮಾರು ೬ ತಿಂಗಳಿಂದ ಅಲ್ಲಿನ ಜನ ಸರ್ಕಾರವನ್ನು, ಕೆ.ಇ.ಬಿ. ಯವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಲಕ್ಷ್ಮೀನರಸಿಂಹಯ್ಯನವರನ್ನು ಮತ್ತು ಜೆ. ಹೆಚ್. ಪಟೇಲ್‌ನವರನ್ನು ನಾನು ಮತ್ತು ಮಾನ್ಯ ಕಾಂತರವರು ಬಂದು ಕಂಡು ಇದು humanitarian point of view. ರೊಕ್ಕ ತುಂಬಿದ್ದಾರೆ. ಲಿಕ್ವಿಡೇಟ್ ಇನ್ನು ತೆರೆಯಲಿಲ್ಲ ಆದ್ದರಿಂದ ಸ್ಪೆಷಲ್ ಆಗಿ ಇವರಿಗೆ ವಿದ್ಯುತ್ ಸಪ್ಲೈ ಮಾಡಿ, ಇಲ್ಲದಿದ್ದರೆ ನೀರಿನ ಸಮಸ್ಯೆಯಾಗುತ್ತದೆ ಲೈಟಿನ ಸಮಸ್ಯೆಯಾಗುತ್ತದೆಂದು ಕೇಳಿದಾಗ ರಿನಿವಲ್ ಮಾಡಿದರು. The Government was kind enough to see that the electricity is not disconnected by KEB. ೬ ತಿಂಗಳಿಗೊಮ್ಮೆ ರಿನ್ಯೂವಲ್ ಮಾಡುತ್ತಿದ್ದಾರೆ. ಆದರೆ ನನಗೆ ಮೊನ್ನೆ ಟೆಲಿಫೋನ್ ಬಂತು ಏನೆಂದರೆ ಕೆ.ಇ.ಬಿ. ಅಧ್ಯಕ್ಷರು ಹೇಳಿದ್ದಾರಂತೆ ಅವರಿಗೆ ಕೊಟ್ಟಿರುವ ಕನೆಕ್ಷನ್ ಡಿಸ್‌ಕನೆಕ್ಷನ್ ಮಾಡಿ ಎಂದು ಆದ್ದರಿಂದ ನಾನು ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೆ ಮತ್ತು ಮಾನ್ಯ ಜೆ. ಹೆಚ್. ಪಟೇಲ್‌ರವರಿಗೆ ಹೇಳುವುದೇನೆಂದರೆ ಆ ಫ್ಯಾಕ್ಟರಿ ಇನ್ನೊಂದು ತಿಂಗಳಲ್ಲಿ ರೀ ಓಪನ್ ಆಗುತ್ತದೆ. ಎಲ್ಲಾ ಅಗ್ರಿಮೆಂಟ್ ಆಗಿದೆ. ದಯಮಾಡಿ ಪುನಃ ಅವರಿಗೆ ಎಲೆಕ್ಟ್ರಿಸಿಟಿ ಕೊಟ್ಟು ಅನುಕೂಲ ಮಾಡಿ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಈ ಎ. ಬಿ. ಎಲ್. ಫ್ಯಾಕ್ಟರಿ ಕ್ಲೋಜ್ ಆಗಿದ್ದರೂ ಸಹ ಆ ಕಾಲೋನಿಯ ಜನರ ವಾಟರ್ ಸಪ್ಲೈ ಸಲುವಾಗಿ ವಿದ್ಯುತ್‌ಚ್ಛಕ್ತಿ ಉಪಯೋಗಿಸುತ್ತಿದ್ದರು. ಇದನ್ನು ಸರ್ಕಾರದವರು ಮಾನವೀಯತೆ ದೃಷ್ಟಿಯಿಂದ ನೋಡಿ ಪ್ರತಿ ೬ ತಿಂಗಳಿಗೆ ಒಂದು ಸಾರಿ ರಿನ್ಯೂವಲ್ ಮಾಡುತ್ತಿದ್ದರು. ಡಿಸ್‌ಕನೆಕ್ಟ್ ಮಾಡದೆ ಮುಂದುವರಿಸಿಕೊಂಡು ಬಂದಿದ್ದಾರೆ. ಅಕಸ್ಮಾತ್ ಈ ಸಾರಿ ಏನಾದರೂ ರಿನ್ಯೂವಲ್ ಮಾಡದೆ ಇದ್ದರೂ ವಿದ್ಯುತ್ ಕೊಡುತ್ತೇವೆ. ಮೊನ್ನೆ ತಾವು ಮತ್ತು ಮಾನ್ಯ ಎಸ್. ಕೆ. ಕಾಂತರವರು ಬಂದು ನನಗೆ ಈ ವಿಷಯ ತಿಳಿಸಿದ ತಕ್ಷಣ ಜುಲೈವರೆವಿಗೂ ಡಿಸ್‌ಕನೆಕ್ಟ್ ಮಾಡಬೇಡಿ ಎಂದು ಹೇಳಿದ್ದೇನೆ. ಒಂದು ವೇಳೆ ಡಿಸ್‌ಕನೆಕ್ಟ್ ಮಾಡಿದ್ದರೆ ರೀಕನೆಕ್ಟ್ ಮಾಡುವ ಆದೇಶ ಹೋಗಿದೆ ರೀಕನೆಕ್ಟ್ ಮಾಡುತ್ತಾರೆ.

ಶ್ರೀ ಕೆ. ವಿ. ರವೀಂದ್ರನಾಥಬಾಬು.—ಸ್ವಾಮಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ರೈನ್‌ಫಾಲ್ ತುಂಬಾ ಕಡಿಮೆ ಇರುವುದರಿಂದ ಐ. ಪಿ. ಸೆಟ್ಸ್ ವರ್ಕ್ ಆಗುವುದಿಲ್ಲ. ತಾವು ಈ ಐ.ಪಿ.ಸೆಟ್ಸ್‌ಗೆ ವಿದ್ಯುತ್‌ಚ್ಛಕ್ತಿಯನ್ನು ರಾತ್ರಿ ವೇಳೆ ಕೊಡುತ್ತೀರಿ. ರಾತ್ರಿ ವೇಳೆ ನೀರು ಕಟ್ಟುವುದಕ್ಕೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಐ.ಪಿ.ಸೆಟ್ಸ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಬೆಳಗಿನ ಟೈಮ್‌ನಲ್ಲಿ ಫಿಕ್ಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದರ ಬಗ್ಗೆ ಈಗಾಗಲೇ ಬೇಕಾದಷ್ಟು ಸಾರಿ ಈ ಸದನದಲ್ಲಿ ಚರ್ಚೆಯಾಗಿ ಆಯಾಯ ಸ್ಥಳದ ಮುಖಂಡರು ಹೋಗಿ ಅವರಿಗೆ ಸೂಕ್ತವಾದ ಸಮಯವನ್ನು ತಿಳಿಸಿ ಆ ಸಮಯಕ್ಕೆ ವಿದ್ಯುತ್ಛಕ್ತಿ ಸರಬರಾಜು ಮಾಡಿಸಿಕೊಳ್ಳಬಹುದಾಗಿದೆ, ಆದರೆ ಯಾವ ಸಮಯ ವಿದ್ಯುತ್ಛಕ್ತಿ ಉಪಯೋಗಿಸಿಕೊಂಡರೂ ಸಹ ಕನಿಷ್ಟಪಕ್ಷ ೮ ಗಂಟೆಗಳ ಕಾಲ ಒಂದು ದಿವಸಕ್ಕೆ ಲೋಡ್ ಷಡ್ಡಿಂಗ್ ಮಾಡಲೇಬೇಕಾಗುತ್ತದೆ. ತಮಗೆ ಗೊತ್ತಿದ್ದಹಾಗೆ ೧೬,೪೦೦ ಮಿಲಿಯನ್ ಯುನಿಟ್ಸ್ ಬೇಕಾಗುತ್ತದೆ. ಉತ್ಪಾದನೆ ಕೇವಲ ೬ ಸಾವಿರ ಮಿಲಿಯನ್ ಯುನಿಟ್ಸ್ ಮಾತ್ರ ಇದೆ. ಇನ್ನು ಎರಡು ಸಾವಿರ ಮಿಲಿಯನ್ ಯುನಿಟ್ಸ್‌ನ್ನು ಎಲ್‌ಟಿಪಿಸಿ ಯಿಂದ ಮತ್ತು ಮಹಾರಾಷ್ಟ್ರದಿಂದ ತರಿಸುತ್ತಿದ್ದೇವೆ, ಮತ್ತು ರೈತರಿಗೆ ತೊಂದರೆಯಾಗಿದಂತೆ ಮೀಟರ್‌ಗಳನ್ನು ಅಳವಡಿಸದೆ ವಿದ್ಯುತ್ಛಕ್ತಿಯನ್ನು ಒದಗಿಸುತ್ತಿದ್ದೇವೆ. ಏನೇ ಇದರೂ ಕನಿಷ್ಟಪಕ್ಷ ಒಂದು ದಿವಸಕ್ಕೆ ೮ ಗಂಟೆಗಳ ಕಾಲ ಲೋಡ್ ಷಡ್ಡಿಂಗ್ ಮಾಡಲೇಬೇಕು ನಾವು ಮೊದಲು ಇದು ೬ ಗಂಟೆಯಿಂದ ೨ ಗಂಟೆಯವರೆಗೆ ಇತ್ತು. ಆಮೇಲೆ ೯ ಗಂಟೆಯಿಂದ ೨ ಗಂಟೆಯವರೆವಿಗೂ ಮಾಡಿದೆವು. ಆದರೂ ಇದರ ಬಗ್ಗೆ ಈಗ ದೂರುಗಳು ಬರುತ್ತಿರುವುದರಿಂದ ಆಯಾಯಾಸ್ಥಳದ ಮುಖಂಡರರಿಗೆ ಸೂಕ್ತವಾದಬಂದು ಟೈಮ್‌ನ್ನು ಅಲ್ಲಿನ ಲೋಕಲ್ ಆಫೀಸರ್ಸ್‌ಗೆ ತಿಳಿಸಿದರೆ ಅಡ್ಜಸ್ಟ್ ಮಾಡಿಸಿಕೊಳ್ಳಬಹುದಾಗಿದೆ.

ಶ್ರೀ ಕೆ. ವಿ. ರವೀಂದ್ರನಾಥ್ ಬಾಬು.—ನಾವು ಲೋಕಲ್ ಆಫೀಸ್‌ಗೆ ಹೋಗಿ ಒಂದು ಟೈಮ್ ಕೊಟ್ಟು ಬಂದೆವು, ಅವರು ಹೇಳುತ್ತಾರೆ ನಮಗೆ ಆದೇಶ ಬೆಂಗಳೂರಿನಿಂದ ಬರಬೇಕೆಂದು. ಅಂದರೆ ಸರ್ಕಾರದಿಂದ ಆದೇಶ ಬರಬೇಕೆಂದು ಹೇಳುತ್ತಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಆದೇಶ ಹೋಗಿದೆ. ಯಾರೋ ಒಬ್ಬ ಅಧಿಕಾರಿ ಆ ರೀತಿ ಹೇಳಿದರೆ ಸ್ಪೆಷಲ್ ಆಗಿ ಅವರಿಗೆ ಆದೇಶ ಕೊಡೋಣ.

ಶ್ರೀ ಬಿ. ಡಿ. ಬಸವರಾಜು.— ಹೊಸದಾಗಿ ಕೆ. ಇ. ಬಿ.ಯಿಂದ ಕನೆಕ್ಷನ್ ತೆಗೆದುಕೊಳ್ಳುವಾಗ ಕನ್‌ಜೂಮರ್ಸ್‌ಗೆ ೧೦ ಸಾವಿರ, ೨೦ ಸಾವಿರ ರೂಪಾಯಿಗಳ ಬಿಲ್ ಹಾಕಿ ಕಳುಹಿಸಿಕೊಡುತ್ತಾರೆ. ಇದನ್ನು ಕನ್‌ಜೂಮರ್ಸ್ ಹೋಗಿ ಅಧಿಕಾರಿಗಳನ್ನು ಕೇಳಿದಾಗ ಅವರು ಹೇಳುತ್ತಾರೆ ಇದರಲ್ಲಿ ನಾವು ಒಟ್ಟಾಗಿ ತೆಗೆದುಕೊಂಡಿದ್ದೇವೆಂದು.

೧೧–೦೦ ಎ. ಎಂ.

ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನವರು ಹೆಚ್ಚು ಹಣ ತೆಗೆದುಕೊಳ್ಳುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಹೆಚ್ಚು ಡಿಪಾಸಿಟ್‌ನ್ನು ತೆಗೆದುಕೊಳ್ಳುವುದರಿಂದ ಮತ್ತು ಅಷ್ಟು ಹಣವನ್ನು ಕಟ್ಟುವುದಕ್ಕೆ ಬಡವರ ಕೈಯಲ್ಲಿ ಆಗದೇ ಇರುವುದರಿಂದ ಅವರು ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಪಡೆದುಕೊಳ್ಳುವುದಕ್ಕೇ ಆಗುವುದಿಲ್ಲ. ಆಮೇಲೆ, ಹೊಸದಾಗಿ ಪ್ರಾರಂಭವಾಗುವ ಎಕ್ಸ್‌ಟೆನ್‌ಷನ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವುದಕ್ಕೆ ಪೋಲ್‌ಗಳ ಅಭಾವ ಇದೆ ಎಂದು ಗೊತ್ತಾಗಿದೆ. ಪೋಲ್‌ಗಳ

ಕೆ. ಇ. ಬಿ. ಇಲಾಖೆಯಲ್ಲಿ ಸ್ಟಾಕ್ ಇಲ್ಲದೇ ಇರುವುದರಿಂದ ಹೊಸದಾಗಿ ಪ್ರಾರಂಭವಾಗುವ ಏರಿಯಾಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ಈ ಕಡೆ ಗಮನ ಹರಿಸಿ ವಿದ್ಯುಚ್ಛಕ್ತಿಯ ಪೋಲ್‌ಗಳನ್ನು ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೆ ಹತ್ತಾರು ಸಾವಿರ ರೂಪಾಯಿಗಳಷ್ಟು ಡೆಪಾಸಿಟ್‌ನ್ನು ಪಡೆಯಲಾಗುತ್ತಿದೆಯೆಂದು ಹೇಳಿದ್ದಾರೆ. ಇದು ಸರಿಯಲ್ಲ. ಮಧ್ಯಮವರ್ಗದ ಮತ್ತು ಬಡ ಜನರು ಉಪಯೋಗಿಸತಕ್ಕಂಥ ಲೈಟಿಂಗ್ ವಿದ್ಯುಚ್ಛಕ್ತಿ ಇರಬಹುದು; ಅಥವಾ ಎ. ಇ. ಹೆಚ್. ಇರಬಹುದು. ಇವುಗಳ ಸರಬರಾಜಿಗೆ ಹತ್ತಾರು ಸಾವಿರ ರೂಪಾಯಿಗಳ ಡೆಪಾಸಿಟ್‌ನ್ನು ಇಲಾಖೆಯವರು ಪಡೆಯುವುದಿಲ್ಲ, ನಾಮಿನಲ್ ಆಗಿ ಡಿಪಾಸಿಟ್‌ನ್ನು ತೆಗೆದುಕೊಳ್ಳಲಾಗುತ್ತದೆ. ಕೈಗಾರಿಕೆಗಳು ಮತ್ತು ಹೆಚ್. ಟಿ. ಕನ್‌ಸ್ಯೂಮರುಗಳ ಹತ್ತಿರ ಮಾತ್ರ ಸ್ವಲ್ಪ ಜಾಸ್ತಿ ಡಿಪಾಸಿಟ್‌ನ್ನು ಪಡೆದುಕೊಳ್ಳಲಾಗುತ್ತದೆ. ಆದರೆ, ಡಿಪಾಸಿಟ್‌ನಲ್ಲಿ ಸ್ವಲ್ಪ ಹೆಚ್ಚಿಗೆ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇರಬಹುದು. ಏಕೆಂದರೆ ಎಲ್ಲಾ ಬೆಲೆಗಳೂ ಇರುವ ರೀತಿಯಲ್ಲೇ ಇರುವುದಿಲ್ಲ. ಎಲ್ಲಾ ಬದಲಾವಣೆಯಾಗುತ್ತಲೇ ಇರುತ್ತದೆ, ಆದ್ದರಿಂದ, ಅವಶ್ಯಕತೆ ಕಂಡು ಬಂದಾಗ ಡಿಪಾಸಿಟ್‌ನ್ನು ಜಾಸ್ತಿ ಮಾಡಬೇಕಾಗುತ್ತದೆ.

ಶ್ರೀ ಬಿ. ಡಿ. ಬಸವರಾಜು.—ನಗರ ಸಭೆಗಳು ಮತ್ತು ಬೇರ ಬೇರೆ ಸಂಸ್ಥೆಗಳವರು ಆರ್ಥಿಕವಾಗಿ ತೊಂದರೆಗೆ ಒಳಗಾಗಿರುವುದರಿಂದ, ಆ ಸಂಸ್ಥೆಗಳವರು ಉಪಯೋಗಿಸುವ ವಿದ್ಯುಚ್ಛಕ್ತಿಗೆ ಸರ್ಕಾರವು ಸಹಾಯಧನವನ್ನು ಕೊಡಬೇಕು. ಹಾಗೂ ಈಗಾಗಲೇ ಬಾಕಿ ಇರುವ ಹಣವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಗರಸಭೆಯವರು ಮತ್ತು ಬೇರೆ ಬೇರೆ ಸಂಸ್ಥೆಯವರು ವಿದ್ಯುಚ್ಛಕ್ತಿಯ ಬಾಬ್ತು ಉಳಿಸಿಕೊಂಡಿರುವ ಬಾಕಿ ಹಣವನ್ನು ವೇವ್ ಮಾಡಿ ಎಂದು ಕೇಳುವುದು ಸರಿಯಲ್ಲ. ನಮ್ಮ ರಾಜ್ಯದ ಜನರ ಪರಿಸ್ಥಿತಿ ಏನಾಗಿದೆ ಎಂದರೆ, ತೊಟ್ಟಿಲಿನಲ್ಲಿ ಇರುವಾಗಿನಿಂದ ಸ್ಮಶಾನಕ್ಕೆ ಹೋಗುವವರೆಗೂ ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂದು ಬಯಸುತ್ತಾರೆ. ಪ್ರತಿಯೊಂದು ಬಾಕಿ ಹಣವನ್ನು ವೇವ್ ಮಾಡಿಕೊಂಡು ಹೋದರೆ ವಿದುಚ್ಛಕ್ತಿ ಬೋರ್ಡ್ ಉಳಿಯುವುದು ಹೇಗೆ ? ಸರಿಯಾದ ವೋಲ್ಟೇಜ್‌ನಲ್ಲಿ ನಾವು ಪವರ್‌ನ್ನು ಸಪ್ಲೈ ಮಾಡಬೇಕಾದರೆ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡಬೇಕು. ಈ ಸಿಸ್ಟಮ್‌ನ್ನು ಇಂಪ್ರೂವ್ ಮಾಡಬೇಕಾದರೆ ಸಂಸ್ಥೆಗೆ ಬಹಳ ಹಣ ಬೇಕಾಗುತ್ತದೆ. ಇದೇ ರೀತಿ ಹೊಸದಾಗಿ ಲೈನ್‌ಗಳನ್ನು ಹಾಕಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಯೂನಿಟ್‌ಗಳ ಬೆಲೆಯನ್ನು ಜಾಸ್ತಿ ಮಾಡಿದ್ದರೂ ಕೂಡ ಸಂಸ್ಥೆಯ ವೆಚ್ಚಕ್ಕೆ ಸಾಕಾಗುತ್ತಿಲ್ಲ. ಇದರ ಜೊತೆಗೆ ನಾವು ಬೇರೆ ರಾಜ್ಯಗಳಿಂದ ಕೊಂಡುಕೊಳ್ಳುವ ವಿದ್ಯುಚ್ಛಕ್ತಿಗೆ ಹೆಚ್ಚು ದರವನ್ನು ಕೊಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ನೀರಾವರಿ ಪಂಪುಸೆಟ್ಟುಗಳು ಮೊದಲು ಎಂಟೂವರೆ ಪರ್‌ಸೆಂಟ್ ಅಥವಾ ೯ ಪರ್‌ಸೆಂಟ್ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡುತ್ತಿದ್ದವು. ಈಗ ೨೭ ಪರ್‌ಸೆಂಟ್‌ನಷ್ಟು ವಿದ್ಯುಚ್ಛಕ್ತಿ ನೀರಾವರಿ ಪಂಪುಸೆಟ್ಟುಗಳಿಗಾಗಿಯೇ ಖರ್ಚಾಗುತ್ತಿದೆ. ಆದ್ದರಿಂದ, ನಗರಸಭೆಯವರು ಮತ್ತು ಸಹಕಾರ ಸಂಘಗಳವರು ತಾವು ಉಪಯೋಗಿಸಿರುವ ವಿದ್ಯುಚ್ಛಕ್ತಿಗೆ ಹಣವನ್ನು ಕೊಡಲೇಬೇಕಾಗುತ್ತದೆ. ಅದನ್ನು ವೇವ್ ಮಾಡುವುದಕ್ಕಾಗುವುದಿಲ್ಲ. ನಗರ ಸಭೆಯವರು ರಿಸೋರ್ಸ್‌ಸ್ ಮೊಬಿಲೈಸೇಷನ್ ಮಾಡಿಕೊಳ್ಳುವ ಕಡೆ ಹೆಚ್ಚು ಗಮನ ಹರಿಸುವುದು ಒಳ್ಳೆಯದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಡಿ. ಬಸವರಾಜು.—ಮಾನ್ಯ ಸಚಿವರು ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕೆ ಹೆಚ್ಚು ಡಿಪಾಸಿಟ್‌ನ್ನು ತೆಗೆದುಕೊಳ್ಳುತ್ತಿಲ್ಲವೆಂದು ಹೇಳಿದ್ದಾರೆ. ನಮ್ಮ ಮನೆಗೆ ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೆ ನಾನು ೧೦ ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ್ದೇನೆ. ನನ್ನ ಹತ್ತಿರ ರಸೀತಿ ಕೂಡ ಇದೆ. ಇದರ ಬಗ್ಗೆ ನಾನು ಬೋರ್ಡ್ ಚೇರ್ಮನ್ ಹತ್ತಿರ ಮಾತನಾಡಿದಾಗ ಏನೇನೋ ಕಾನೂನಾಗಿದೆ, ಅದನ್ನು ನೋಡಬೇಕೆಂದು ಹೇಳಿದರು. ನಮ್ಮ ಬೀದರ್ ಜಿಲ್ಲೆಯಲ್ಲಂತೂ ಈ ರೀತಿ ಹೆಚ್ಚು ಡೆಪಾಸಿಟ್ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು.—ಏನು ಭಾಷಣ ಮಾಡುತ್ತಿದ್ದೀರೋ ಹೇಗೆ ?

ಶ್ರೀ ಬಿ. ಡಿ. ಬಸವರಾಜು.—ಹೆಚ್ಚು ಡಿಪಾಸಿಟ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ೧೦ ಸಾವಿರ ರೂಪಾಯಿಗಳನ್ನು ನನ್ನ ಮನೆಗೆ ವಿದ್ಯುಚ್ಛಕ್ತಿ ತೆಗೆದುಕೊಳ್ಳುವುದಕ್ಕೇ ಕಟ್ಟಿದ್ದೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮ್ಮ ಮನೆ ಗ್ರಾಮಠಾಣ ಮತ್ತು ಲೇಔಟ್ಸ್ ಬಿಟ್ಟು ಆಚೆಗೆ ಏನಾದರೂ ಇದ್ದರೆ, ಅಥವಾ ರೆವಿನ್ಯೂ ಲ್ಯಾಂಡ್‌ನಲ್ಲಿ ಇದ್ದರೆ, ಅಲ್ಲಿಗೆ ಹಾಕತಕ್ಕಂಥ ಸಂಪೂರ್ಣ ಮಾದಂಥ ಲೈನ್ ಕಾಸ್ಟ್ ಕಟ್ಟಬೇಕಾಗುತ್ತದೆ. ಆ ಪ್ರಕಾರವಾಗಿ ಏನಾದರೂ ನಿಮ್ಮ ಹತ್ತಿರ ಕಲೆಕ್ಟ್ ಮಾಡಿದರೆ, ಅದು ಕಾನೂನು ಪ್ರಕಾರ ಮಾಡಿದ್ದಾಗಿರುತ್ತದೆ. ಯಾರಾದರೂ ಒಂದು ೨೦ ಎಕರೆ ಜಮೀನು ಇಟ್ಟುಕೊಂಡು ಅದರ ಮಧ್ಯೆ ಒಂದು ಲೈನ್ ಕೊಡಿ ಎಂದು ಹೇಳಿದರೆ ಅದರಿಂದ ಬೇರೆ ಯಾರಿಗೂ ಉಪಯೋಗವಾಗುವುದಿಲ್ಲ ಎಂದು ಕಂಡು ಬಂದರೆ ಯಾರು ಲೈನ್ ಕೇಳಿದ್ದಾರೋ ಅವರೇ ಅಂದರೆ ಅವರಿಗೋಸ್ಕರವಾಗಿ ಹಾಕಿದ್ದರೆ ಅಂಥ ಸಂದರ್ಭದಲ್ಲಿ ಪೂರ್ಣಕಾಸ್ಟನ್ನು ಕೊಡಬೇಕಾಗುತ್ತದೆ. ಅದಕ್ಕೆ ಕಾನೂನು ಇದೆ. ಇದು ಬಿಟ್ಟರೆ ತಾವು ಹೇಳುವಂತೆ ಬೇರೆ ರೀತಿಯಲ್ಲಿ ೧೦ ಸಾವಿರ ರೂಪಾಯಿಗಳು ಆಗುವ ಚಾನ್ಸ್ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಭಾಗ್ಯಜ್ಯೋತಿ ಯೋಜನೆಯು ಈಗ ಹಾಕಿಸಿಕೊಂಡವರಿಗೆ ನಿರ್ಭಾಗ್ಯಜ್ಯೋತಿ ಯೋಜನೆಯಾಗಿ ಪರಿಣಮಿಸಿದೆ. ಈ ವಿಚಾರವನ್ನು ನಾನು ಹಿಂದೆಯೂ ಕೂಡ ಪ್ರಸ್ತಾಪ ಮಾಡಿದ್ದೆ. ಆದುದರಿಂದ ಇದನ್ನು ಪುನಃ ಪರಿಶೀಲಿಸಬೇಕು. ಆಗ ನಾನು ಹೇಳಿದ್ದಾಗ ನಿರಾಕರಿಸಿದ್ದರು. ಇಲ್ಲಿ ಏನಾಗಿದೆ ಎಂದರೆ, ಆ ಯೋಜನೆಯು ಬಂದಾಗ ಜನರ ಮನಸ್ಸಿನಲ್ಲಿ ಸರಕಾರದವರು ನಮಗೆ ಪುಕ್ಕಟೆಯಾಗಿ ಕನೆಕ್ಷನ್ ಕೊಡುತ್ತಿದ್ದಾರೆ ಎಂಬ ಭಾವನೆ ಬಂದಿತ್ತು. ಈಗ ೬-೭ ವರ್ಷಗಳ ಬಿಲ್ಲನ್ನು ಒಮ್ಮೆಗೇ ಮಾಡಿ ಹಣ ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನೋಟೀಸ್ ಕೊಡುತ್ತಿದ್ದಾರೆ ಮತ್ತು ಕೆಲವು ಕಡೆಗಳಲ್ಲಿ ಅಧಿಕಾರಿಗಳು ಹೆರಾಸ್ ಮಾಡುತ್ತಿದ್ದಾರೆ. ಇವರೆಲ್ಲಾ ಬಡ ಜನರು. ನೀವು ದೊಡ್ಡದೊಡ್ಡ ಇಂಡಸ್ಟ್ರೀಯವರಿಗೆ ಲಕ್ಷಾಂತರ ರೂಪಾಯಿಗಳ ಮೊತ್ತವನ್ನು ಬಿಟ್ಟುಬಿಡುತ್ತೀರಿ. ಅನೇಕ ಸಲ ಇಂಡಸ್ಟ್ರೀಸ್‌ನವರಿಗೆ ಕನ್‌ಷೇಶನ್ ಮೇಲೆಯೂ ಕೊಡುತ್ತೀರಿ. ಇದೊಂದು ಮಾನವೀಯತೆಯ ಪ್ರಶ್ನೆಯಾಗಿದೆ. ನಾವು ರೈತರಿಗೆ ಸಹಾಯ ಮಾಡಿದ್ದೇವೆ, ಇದೇ ರೀತಿಯಲ್ಲಿ ಸಮಾಜದ ವಿವಿಧ ವರ್ಗಗಳಿಗೆ ಸಹಾಯ ಮಾಡಿದ್ದೇವೆ. ಆದರೆ ಈ ಯೋಜನೆಯ ಲಾಭವನ್ನು ಪಡೆದ ಜನರು ಅತಿ ಅಲ್ಪ ಆದಾಯವನ್ನು ಹೊಂದಿರತಕ್ಕಂಥವರು. ಅವರಿಗೆ ಈ ಹಣವನ್ನು ಮನ್ನಾ ಮಾಡುವ ಒಂದು ಸವಲತ್ತನ್ನು ಕೊಟ್ಟರೆ ತುಂಬಾ ಉಪಕಾರವಾಗುತ್ತದೆ. ಇದರಿಂದ ಸರಕಾರಕ್ಕೆ ದೊಡ್ಡ ಹಾನಿ ಏನೂ ಆಗುವುದಿಲ್ಲ. ಬೇರೆ ಬೇರೆ ರೀತಿಗಳಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಆದುದರಿಂದ ಇದೊಂದು ರಿಯಾಯಿತಿಯನ್ನು ಮಾಡಿ ಲಕ್ಷಾಂತರ ಜನರಿಗೆ ಸಹಾಯವಾಗುವಂತೆ ಮಾಡಬೇಕು. ಆದ್ದರಿಂದ ಇದನ್ನು ಪುನರ್‌ಪರಿಶೀಲಿಸಬೇಕು ಮತ್ತು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈ ಬಗ್ಗೆ ಕೆಲವು ಕಡೆಗಳಿಂದ ಪ್ರಯೋಜನಕಾರಿಯಾದ ಸಲಹೆಗಳು ಬಂದಿವೆ. ಅದೇನೆಂದರೆ ಆಯಾಯಾ ಜಿಲ್ಲಾಪರಿಷತ್ತಿನವರು ಈಗ ಆಗಿರತಕ್ಕಂಥ ಭಾರವನ್ನು ಹೊರಬೇಕು, ಮುಂದೆ ರೆಗ್ಯುಲರ್ ಆಗಿ ಫಲಾನುಭವಿಗಳು ಕಟ್ಟಿಕೊಂಡು ಹೋಗಬೇಕೆಂದು ಸಲಹೆಗಳು ಬಂದಿವೆ. ಆ ಮಾತನ್ನು ಕೆಲವು ಜಿಲ್ಲಾಪರಿಷತ್ತಿನವರು ಒಪ್ಪುತ್ತಾ ಇದ್ದಾರೆ. ತಾವು ಕೊಟ್ಟಿರುವ ಸಲಹೆಗಳನ್ನು ಹೇಗೆ ಇಂಪ್ಲಿಮೆಂಟ್ ಮಾಡಬೇಕು ಮತ್ತು ಎಷ್ಟರಮಟ್ಟಿಗೆ ಮಾಡಬೇಕೆಂದು ವಿಚಾರ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗೆ ಈ ಭಾರವನ್ನು ಹೊತ್ತುಕೊಳ್ಳುವುದಕ್ಕೆ ಅವರಲ್ಲಿ ಹಣ ಬೇಡವೇ ? ಹೀಗೆ ೨೦-೩೦ ಲಕ್ಷ ರೂಪಾಯಿಗಳ ಅರಿಯರ್ಸ್‌ನ್ನು ಕೊಡಬೇಕಾದರೆ ಅವರಿಗೆ ಯಾವುದಾದರೂ ಒಂದು ಪ್ರಾವಿಜನ್ ಬೇಕಾಗುತ್ತದೆ. ಹೀಗೆ ಇಲ್ಲದಿದ್ದರೆ ಅವರು ಎಲ್ಲಿಂದ ಹಣವನ್ನು ಕೊಡುವುದು ? ಅದಕ್ಕೆ ಬಜೆಟ್ ಅಲಾಟ್‌ಮೆಂಟ್ ಬೇಕಾಗುತ್ತದೆ. ಬಜೆಟ್ ಪ್ರಾವಿಜನ್ ಇಲ್ಲದಿದ್ದರೆ ಅವರು ಎಲ್ಲಿಂದ ಹಣವನ್ನು ಕೊಡುತ್ತಾರೆ ?

ಶ್ರೀ ಜೆ. ಎಚ್. ಪಟೇಲ್.—ಇದರಲ್ಲಿ ಹಣವನ್ನು ಹೇಗೆ ಪ್ರೊವೈಡ್ ಮಾಡಬೇಕು ಮತ್ತು ಯಾವ ಅಕೌಂಟಿಗೆ ಮಾಡಬೇಕು ಎಂಬ ವಿಚಾರ ಬೇರೆ ಜಿಲ್ಲಾಪರಿಷತ್ ನವರು ತಾವಾಗಿ ಮುಂದೆ ಬಂದರೆ ವಿಚಾರ ಮಾಡಬೇಕಾಗುತ್ತದೆ, ಬರಲಿಲ್ಲ ಎಂದರೆ ಯೋಚನೆ ಮಾಡಬೇಕಾಗುತ್ತದೆ. ತಿಂಗಳಿಗೆ ನಾಲ್ಕು

ರೂಪಾಯಿಗಳನ್ನು ಜನಸಾಮಾನ್ಯರು ಉಪಯೋಗ ಮಾಡಿದ್ದಕ್ಕೆ ಕಟ್ಟಬಹುದು. ಅಷ್ಟೂ ಶಕ್ತಿ ಇರುವುದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಲ್ಲ ಎಂಟು ವರ್ಷಗಳ ಬಿಲ್ ಒಮ್ಮೆಗೆ ತುಂಬಿ ಅಂದರೆ ಅವರಿಗೆ ಕಷ್ಟವಾಗುವುದಿಲ್ಲವೆ ?

ಶ್ರೀ ಜೆ.ಎಚ್ ಪಟೇಲ್.—ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ನಾನು ಜಿಲ್ಲಾ ಪರಿಷತ್‌ನವರ ಸಹಾಯದಿಂದ ಮತ್ತು ಸಹಕಾರದಿಂದ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಬೇಡಿಕೆ ಮೇಲಿನ ಚರ್ಚೆ ಮುಗಿಯಿತು. ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೯ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ,)

ಅಭಿಯಾಚನೆ ಕ್ರಮಾಂಕ–೪೯ ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೫೧,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೬೨,೬೮,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಮಂತ್ರಿಯವರಿಂದ ಹೇಳಿಕೆ

ರಾಜ್ಯದಲ್ಲಿ ಕೈಗಾರಿಕಾ ನೀತಿ ಮತ್ತು ಕೊಡತಕ್ಕ ಸೌಲಭ್ಯಗಳ ಕುರಿತು

ಶ್ರೀ ಜೆ.ಹೆಚ್. ಪಟೇಲ್ —ಕೈಗಾರಿಕೆಗಳ ಬಗ್ಗೆ ಸರ್ಕಾರದ ಪಾಲಿಸಿ ಸ್ಟೇಟ್‌ಮೆಂಟನ್ನು ಈ ಗ ಮಾಡುತ್ತೇನೆ. ೧೯೮೩ರಲ್ಲಿ ನಮ್ಮ ಸರ್ಕಾರ ಇಂಡಸ್ಟ್ರಿಯಲ್ ಪಾಲಿಸಿಯನ್ನು ಜೂನ್‌ನಲ್ಲಿ ಅನೌನ್ಸ್ ಮಾಡಿತು. ಈಗ ೧೯೮೩ರ ಪಾಲಿಸಿಯಲ್ಲಿ ಬ್ಯಾಕ್‌ವರ್ಡ್ ಏರಿಯಾಸ್. ಅದನ್ನು ಮೂರು ಜೋನ್ ಮಾಡುವುದು, ಮೇಜರ್ ಮೀಡಿಯಂ ಮತ್ತು ಅವುಗಳಲ್ಲಿ ಯಾವುದಕ್ಕೆ ಪ್ರಿಯಾರಿಟಿ, ಯಾವ್ಯಾವುದಕ್ಕೆ ಎಷ್ಟೆಷ್ಟು ಇನ್‌ಸೆಂಟೀವ್ಸ್ ಇವನ್ನೆಲ್ಲ ಅದೇ ಫ್ರೇಮ್‌ವರ್ಕ್‌ನಲ್ಲಿ ಇಟ್ಟುಕೊಂಡು ವಿವರಗಳನ್ನು ಮಾತ್ರ ಬೇರೆ ಇಡಬೇಕಾಗುತ್ತದೆ. ಹಿಂದಿನ ಪಾಲಿಸಿಯಲ್ಲೇನೋ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಕೊಡಲಿಲ್ಲ, ಎಂದು ಮೊಯಿಲಿಯವರು ಹೇಳಿದರು. ಅದನ್ನು ಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಏಕೆಂದರೆ ಸರ್ಕಾರ ಇಂತಿಂಥ ಸೌಲಭ್ಯ ಕೊಡುತ್ತದೆಂದು ಹೇಳಿದ ಮೇಲೆ ಅದನ್ನು ನೆಚ್ಚಿಕೊಂಡು ಇಂಡಸ್ಟ್ರಿಯಲಿಸ್ಟ್ಸ್ ಮುಂದೆ ಬರುತ್ತಾರೆ, ಹಾಗೆ ಕೊಡದಿದ್ದಾಗ ಅವರಿಗೆ ನಿರಶನವಾಗುತ್ತದೆ. ಹೇಳದೇ ಇದ್ದಿದ್ದರೆ ಬೇರೆ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಈ ಸಲದಿಂದ ಅದನ್ನು ಕೊಡುತ್ತಿದ್ದೇವೆ. ನನ್ನ ಹೇಳಿಕೆ ಈ ರೀತಿ ಇದೆ.